# ಪ್ರಸಾದ

ಮಾಸಿಕ

ಏಪ್ರಿಲ್ 2025

ಸಂಪುಟ 40 ಸಂಚಿಕೆ 4




ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು




ಕೇರಳದ ಕೊಟ್ಟಾಯಂ ಜಿಲ್ಲೆಯ ಪಂಪಾಡಿಯಲ್ಲಿ ಕೆಸಿಸಿ ಯೂಥ್ ಕಮಿಷನ್ ವತಿಯಿಂದ ಆಯೋಜಿಸಿದ್ದ ಸಂತ ಕುರಿಯಾಕೋಸ್ ಮಾರ್ ಗ್ರೆಗೋರಿಯಸ್ ಮೆಟ್ರೋಪಾಲಿಟನ್‌ರವರ 60ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳವರು ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಿರುವುದು. ಶ್ರೀ ಚಾಂಡಿ ಒಮೆನ್, ಶ್ರೀ ಹೆಚ್.ಜಿ. ಥಾಮಸ್ ತೈಮೋಥಿಯಸ್ ಎಪಿಸ್ಕೋಪಾ, ಶಿವಗಿರಿ ಮಠದ ಶ್ರೀಗಳು, ಶ್ರೀ ಬಸೇಲಿಯೋಸ್ ಮಾರ್ಥೋಮಾ ಮ್ಯಾಥ್ಯೂಸ್ III, ಶ್ರೀ ಹೆಚ್.ಜಿ. ಯುಹಾನೋನ್ ಮಾರ್ ಡಯಾಸ್ಕೋರಸ್, ಶ್ರೀ ಹೆಚ್.ಬಿ. ಮಾರ್ ಆಫ್ರಿನ್ ಕುರಿಕೋಸ್‌ರವರುಗಳಿದ್ದಾರೆ (3 ಏಪ್ರಿಲ್ 2025)

# ಪ್ರಸಾದ

**ಸಂಪುಟ 40 : ಸಂಚಿಕೆ 4** **ಏಪ್ರಿಲ್ 2025**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 223



**ಸಂಸ್ಥಾಪಕರು**

ಶ್ರೀಮನ್ಮಹಾರಾಜ  ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ಮುಖಪುಟ ಚಿತ್ರ**

ತುಮಕೂರು ಶ್ರೀ ಸಿದ್ಧಗಂಗಾ ಮಠದಲ್ಲಿ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 118ನೇ ಜಯಂತಿ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರು ಹಾಗೂ ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಕೇಂದದ ರಕ್ಷಣಾ ಸಚಿವರಾದ ಶ್ರೀ ರಾಜನಾಥ್ ಸಿಂಗ್‌ರವರು ಉದ್ಘಾಟಿಸಿದರು. ಡಾ. ಸಿ. ಸೋಮಶೇಖರ, ಶ್ರೀ ಶಿವಸಿದ್ಧೇಶ್ವರ ಮಹಾಸ್ವಾಮಿಗಳು, ಶ್ರೀ ವಿ. ಸೋಮಣ್ಣ, ಶ್ರೀ ಬಿ. ಸುರೇಶ್‌ಗೌಡ, ಶ್ರೀ ಜಿ.ಬಿ. ಜ್ಯೋತಿಗಣೇಶ್ ಮತ್ತು ಶ್ರೀ ಚಿದಾನಂದ ಎಂ. ಗೌಡರವರುಗಳಿದ್ದಾರೆ (1 ಏಪ್ರಿಲ್ 2025)

**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಧ್ಯಾನಜೀವನ 10
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ನಾನು ಕಂಡ ಅಪರೂಪದ ಸ್ವಾಮೀಜಿ 16
ಡಾ. ಎಲ್. ಬಸವರಾಜು

ಆತ್ಮಾವಲೋಕನಕ್ಕೆ ಸಕಾಲ 18
ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ

ಶಬರಶಂಕರ ವಿಲಾಸ–ಟೀಕು : ದ್ವಿತೀಯಾಶ್ವಾಸ 29
ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಗಾನಯೋಗಿ ಪಂಚಾಕ್ಷರಿ ಗವಾಯಿ 33
ಡಾ. ರಮಾ ವಿ. ಬೆಣ್ಣೂರ್

ಅನುಭವ ಮಂಟಪ ಲಿಂಗಾಯತ ಧರ್ಮದ ಹೃದಯ 41
ರೆ. ಸಿ.ಡಿ. ಉತ್ತಂಗಿ ಚನ್ನಪ್ಪ

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಚನಗಳು 53
ರಂಗನಾಥ್ ಮೈಸೂರು

ವಾರ್ತಾ ವಿಹಾರ 55
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

## ಭೋಗವೆಂಬ ಸೂಜಿ

ನಿತ್ಯವಾಗಿಪ್ಪ ಪರಮಾತ್ಮನು
ಅನಿತ್ಯವಾಗಿಪ್ಪ ದೇಹದೊಡನಾಡಿ
ಜೀವನಾಗಿ ಹೋಗುತ್ತಿದೆ ನೋಡಾ!

ನಿತ್ಯ-ಅನಿತ್ಯವ
ಸಂದನಿಕ್ಕಿದ ಸಮರ್ಥರಾರಯ್ಯ?
ಇದಕ್ಕೆ ಅನುಕೂಲವಾಗಿ ಮಾಡಿದವರು
ಮತ್ತೊಬ್ಬರುಂಟೆಂದು
ನಿನ್ನ ಮನದಲ್ಲಿ ತಿಳಿಯಬೇಡ–
ಅದು ತನಗೆ ತಾನೇ ಮಾಡಿಕೊಂಡಿತು!

ಅದು ಹೇಗೆಂದರೆ–
ಆತ್ಮನು ಭೋಗವೆಂಬ ಸೂಜಿಯಂ ಪಿಡಿದು–
ಆ ಸೂಜಿಗೆ ಮೂರೊಂದು ಕರಣ (ಮತ್ತು)
ಎರಡು ಮೂರು ಇಂದ್ರಿಯಂಗಳೆಂಬ
ನವಸೂತ್ರವನೇರಿಸಿ
ತನು-ಮನದಂಚ ಸೇರುವೆಯಂ ಮಾಡಿ,
ಕಟಿದಾರ (ಕಂಠದಾರ)ಮಂ ಕಟ್ಟಿ
ಸಂದರಿಯ ಬಾರದಂತೆ
ಅದು ತನಗೆ ತಾನೇ ಹೊಲುಕೊಂಡಿತ್ತು–
ಇದ ಬಿಚ್ಚಿ ಬೇರೆ ಮಾಡುವ ಪರಿ ಯಾವುದಯ್ಯ?!

ಭೋಗವೆಂಬ ಸೂಜಿಯಂ ಮುರಿದು
ನಾಲ್ಕು ಕರಣ
ಐದಿಂದ್ರಿಯವೆಂಬ
ಒಂಬತ್ತು ದಾರಮಂ ತುಂಡುತುಂಡಿಗೆ ಹರಿಯಲೊಡನೆ–
ತನು ಪ್ರಕೃತಿಯಂ ಕೂಡಿತ್ತು
ಪ್ರಾಣ ಪರಬ್ರಹ್ಮವಂ ಕೂಡಿತ್ತು ಕಾಣಾ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ!

– ಘನಲಿಂಗಿದೇವರು

# ಗುರುವಾಣಿ

ದೇಹಾಭಿಮಾನವಳಿದು ಪರಶಿವಜ್ಞಾನವೂ ಸ್ವಾನುಭಾವ
ಒಂದೇಯಾಗಿ ಭಿನ್ನಜ್ಞಾನದ ಬನ್ನವಳಿದು
ಅವಿರಳಜ್ಞಾನ ವಶವಟ್ಟಲ್ಲಿ ಮನವೆಲ್ಲೆಲ್ಲಿಗೆಯ್ದಿದರಲ್ಲಲ್ಲಿಯೇ
ಶಿವನು ಸ್ವಯವದೆಂತೆಂದೆಡೆ ಇದಕ್ಕೆ ಶ್ರುತಿ:
ದೇಹಾಭಿಮಾನೇ ಗಳಿತೇ ವಿಜ್ಞಾತೇ ಚ ಪದೇ ಪದೇ ಶಿವೇ ।
ಯತ್ರ ಯತ್ರ ಮನೋ ಯಾತಿ ತತ್ರ ತತ್ರ ಶಿವ: ಸ್ವಯಂ ॥
ಎಂದುದಾಗಿ ಇದು ಕಾರಣ ಸೌರಾಷ್ಟ್ರಸೋಮೇಶ್ವರನ
ಶರಣರು ಸಚ್ಚಿದಾನಂದಭರಿತರು

ಶರಣ ಆದಯ್ಯನವರ ವಚನವು ದೇಹದ ಕುರಿತಂತೆ ಅನಗತ್ಯ ಅಭಿಮಾನವನ್ನು, ದೇಹದ ಅನಿತ್ಯತೆಯನ್ನು, ಹಾಗೂ ಮನಸ್ಸಿನ ಅನಂತ ಸುಖಸಾಧಕ ಸಂಗತಿಗಳನ್ನು ವಿವರಿಸುತ್ತದೆ. ಈ ವಚನದ ಮೊದಲರ್ಧದಲ್ಲಿ ಆದಯ್ಯನವರು ದೇಹದ ವ್ಯರ್ಥಾಭಿಮಾನವನ್ನು ಸಮರ್ಥಿಸಲು, ಉಳಿದರ್ಧದಲ್ಲಿ ಶ್ರುತಿಯ ಆಧಾರವನ್ನು ನೀಡಿದ್ದಾರೆ. ವಾಸ್ತವವಾಗಿ ಇದರ ಮೂಲ ಸರಸ್ವತಿರಹಸ್ಯೋಪನಿಷತ್ತಿನಲ್ಲಿ ದೊರಕುತ್ತದೆ. ಅಲ್ಲಿ "ದೇಹಾಭಿಮಾನೇ ಗಳಿತೇ ವಿಜ್ಞಾತೇ ಪರಮಾತ್ಮನಿ ಯತ್ರ ಮನೋ ಯಾತಿ ತತ್ರ ತತ್ರ ಸಮಾಧಯಃ" ಎಂಬ ಉಲ್ಲೇಖವಿದೆ. ಆದಯ್ಯನವರು ತಮ್ಮ ತತ್ತ್ವಚಿಂತನೆಗೆ ಅನುಗುಣವಾಗಿ ಅದನ್ನು ಶಿವಪಾರಮ್ಯಕ್ಕೆ ಹೊಂದುವಂತೆ ಕೊಂಚಮಟ್ಟಿಗೆ ಮಾರ್ಪಡಿಸಿದ್ದಾರೆ. 'ದೇವನೊಬ್ಬ ನಾಮ ಹಲವು' ಎನ್ನುವುದು ವಚನಕಾರರ ಆತ್ಯಂತಿಕ ನಿಲುವಾಗಿರುವುದರಿಂದ, ಇಲ್ಲಿ ಅದನ್ನು ಪರಮಾತ್ಮನೆಂದೇ ಭಾವಿಸಬಹುದು. ಈ ವಚನದ ಅಂತರಾರ್ಥವೇನೆಂದರೆ "ದೇಹದ ಮೇಲಿನ ಮೋಹವನ್ನು, ಅಹಂಕಾರವನ್ನು ಕಳೆದುಕೊಂಡಾಗ ಸಾಧಕನಿಗೆ ಪರಮಾತ್ಮನ ಸಾಕ್ಷಾತ್ಕಾರವಾಗುತ್ತದೆ. ಆಗ ಮನಸ್ಸು ಎಲ್ಲೇ ಹೋದರೂ, ಯಾವ ವಸ್ತುವಿನ ಕಡೆಗೆ ಗಮನ ಹರಿದರೂ ಅಲ್ಲೆಲ್ಲ ಆತನ ಪಾಲಿಗೆ ಪರಮಾತ್ಮನೇ ಕಾಣಿಸುತ್ತಾನೆ ; ಪರಮಾನಂದವು ತಾನೇ ತಾನಾಗಿ ಇರುತ್ತದೆ. ಅಂದರೆ, ಅಸಂಪ್ರಜ್ಞಾತ ಸಮಾಧಿ ಸ್ಥಿತಿಯಲ್ಲಿ ಎಲ್ಲ ಭೇದವೂ, ವಿಷಯಿ–ವಿಷಯ ಭೇದವೂ ಕೂಡ ಪರಮತತ್ತ್ವದಲ್ಲಿ ಲಯವಾಗುತ್ತದೆ. ಆ ಏಕತ್ವವೂ ಕೂಡ ಒಂದು ಚಿತ್ರವೃತ್ತಿ ; ಆ ವೃತ್ತಿಯ ವಸ್ತುವು ಪರಬ್ರಹ್ಮವಾಗಿರುವ ಕಾರಣದಿಂದ ಅದರ ನಿಲುವು ಭಿನ್ನವಾಗಿರುವುದಿಲ್ಲ ಮತ್ತು ಸಾಧಾರಣವಾಗಿ ಗೋಚರಿಸುವುದೂ ಇಲ್ಲ. ಆತ್ಮೈಕ್ಯಕ್ಕಿಂತಲೂ,

ಬ್ರಹ್ಮಕ್ಕಿಂತಲೂ ಬೇರೆಯಾದ ಅನುಭವವನ್ನು ಅದು ನೀಡುವುದಿಲ್ಲ. ಅಲ್ಲಮನ ಮಾತಿನಲ್ಲಿ ಹೇಳುವುದಾದರೆ "ಉಪ್ಪು ನೀರಲ್ಲಾಯಿತ್ತು, ನೀರನ್ನಪ್ಪಿ ಉಪ್ಪು ಇಲ್ಲವಾಯಿತ್ತು" ಎನ್ನುವ ಸ್ಥಿತಿ ಅದು.

ಸಂಸ್ಕೃತದಲ್ಲಿ "ಅಮನಸ್ಕತೆ", ಎಂಬ ಪದಕ್ಕೆ "ಮನಸ್ಸಿಲ್ಲದ", 'ಮನಸ್ಸಿಲ್ಲದ ಸ್ಥಿತಿ' ಎಂದರ್ಥವಿದೆ. ಅಲ್ಲಮನಿಗೆ 'ಅಮನಸ್ಕ' ಎಂಬ ಹೆಸರೂ ಇತ್ತು. ಲೌಕಿಕವಾಗಿ ಇದನ್ನು ಬುದ್ಧಿರಾಹಿತ್ಯ ಎಂದುಕೊಂಡರೂ ಯೌಗಿಕ ಪರಿಭಾಷೆಯಲ್ಲಿ ಅದು ಜೀವನ್ಮುಕ್ತ ಸ್ಥಿತಿಯ ಸಂಕೇತ. ಇಂಥ ಜೀವನ್ಮುಕ್ತರು ಬದುಕಿರುವಾಗಲೇ ಭವಬಂಧನದ, ಅಂದರೆ ಹುಟ್ಟು–ಸಾವುಗಳ, ಅನಂತಚಕ್ರವನ್ನು ದಾಟಿ ನಿಂತಿರುತ್ತಾರೆ – ಭೂಮಿಯ ಗುರುತ್ವಾಕರ್ಷಣೆಯಿಂದ ಹೊರಗೆ ಚಿಮ್ಮಿದ ಉಪಗ್ರಹದಂತೆ.

ದೇಹವೆಂಬುದು ಮನುಷ್ಯನಿಗೆ ವರವೂ ಹೌದು, ಶಾಪವೂ ಹೌದು. ಮೋಕ್ಷಕ್ಕೆ ಸಾಧನವೂ ಹೌದು, ಪಾಪಕ್ಕೆ ಹೇತುವೂ ಹೌದು. ಆದರೆ ಅದು ಪರಮಾತ್ಮನಿಂದ ಹೊರತಾದುದಲ್ಲ. ಆದರೆ ಪರಮಜ್ಞಾನದ ಬೀಜದಲ್ಲಿ ಸುಪ್ತವಾಗಿರುವ ಮರ, ಕಾಯಿ, ಹೂವು, ಹಣ್ಣಿನ ಹಾಗೆ ಅದು. ಕೇವಲ ಬೀಜವನ್ನು ಮಾತ್ರ ಆಶ್ರಯಿಸಿದರೆ ಅದು ಕೊಳೆಯುತ್ತದೆ, ಹುಳು ಹಿಡಿಯುತ್ತದೆ, ನಾಶವಾಗುತ್ತದೆ. ದೇಹವು ತನ್ನ ಅನುಭವಗಳಿಂದಲೇ ರೂಪಿಸಿಕೊಂಡ ಸ್ವಾನುಭಾವ, ದೇಹದಲ್ಲಿ ಅಂತರ್ಗತವಾಗಿರುವ ಪರಶಿವಜ್ಞಾನ ಇವೆರಡೂ ಏಕತ್ರಗೊಂಡ ಕ್ಷಣದಲ್ಲಿ ಅವಿರಳಜ್ಞಾನ ಉಂಟಾಗುತ್ತದೆ. ಆಗ ಸಾಧಕನು ಲೋಕದಲ್ಲಿ ತಾನು ಮಾಡುವ ಎಲ್ಲ ಕಾರ್ಯಗಳ ಕುರಿತಂತೆ ಅಮನಸ್ಕನಾಗುತ್ತಾನೆ, ಅಂದರೆ ಅನ್ಯಮನಸ್ಕನಾಗುತ್ತಾನೆ. ಅದರ ಅರ್ಥ ಆತ ಮನಸ್ಸಿಲ್ಲದೆ ಕೆಲಸಗಳನ್ನು ಮಾಡುತ್ತಾನೆ ಎಂದಲ್ಲ; ಬದಲಿಗೆ, ಅವನ ಮನಸ್ಸು ಬಾಹ್ಯಕೇಂದ್ರಿತವಾಗಿರುವುದಿಲ್ಲ, ಅಷ್ಟೆ. ಒಬ್ಬ ಜ್ಞಾನಿಯ ಚರಮ ಸ್ಥಿತಿ ಅದು. ಎಲ್ಲ ಕೆಲಸಗಳಲ್ಲಿಯೂ ಆತನು ಸರ್ವವ್ಯಾಪಿಯಾದ ಪರಮಾತ್ಮನೊಂದಿಗೆ ತನ್ನನ್ನು ಸಮೀಕರಿಸಿಕೊಳ್ಳುತ್ತಾನೆ. ಮನಸ್ಸು ಮತ್ತು ದೇಹಗಳೆರಡರ ವ್ಯವಹಾರವನ್ನೂ ತನ್ನ ಸಾಧನೆಗೆ ಸೋಪಾನಗಳನ್ನಾಗಿ ಮಾಡಿಕೊಳ್ಳುತ್ತಾನೆ. ಜ್ಞಾನಿಯಲ್ಲದವನಾದರೋ ತನ್ನನ್ನು ಸದಾ ದೇಹದೊಂದಿಗೆ ಮಾತ್ರ ಗುರುತಿಸಿಕೊಳ್ಳುತ್ತಾನೆ. ಆದುದರಿಂದ ಅಮನಸ್ಕತೆಯಲ್ಲಿಯೇ ನಿಜವಾದ ಜ್ಞಾನವಿದೆ ಎಂಬ ಅರಿವು ಎಲ್ಲರ ಪಾಲಿಗೂ ಲಭಿಸಬೇಕಿದೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ತಜ್ಞನಾಗಿ ಕಾರ್ಯನಿರ್ವಹಿಸುತ್ತಿದ್ದ ರಿಚರ್ಡ್ ಲಿವಿಂಗ್ ಸ್ಟನ್ "ಎಜುಕೇಶನ್ ಫಾರ್ ದಿ ಮಾರ್ಡನ್ ವರ್ಲ್ಡ್" ಎಂಬ ತನ್ನ ಪ್ರಬಂಧದಲ್ಲಿ 'ನಮ್ಮ ಯುವಕರು ಸಮಕಾಲಿನ ಜಗತ್ತಿನಲ್ಲಿ ಜೀವಿಸಿ ಅದರ ಸಮಸ್ಯೆಗಳನ್ನು ಎದುರಿಸುವಂತೆ ಅವರನ್ನು ಸಿದ್ಧಪಡಿಸಬೇಕಾಗಿದೆ. ಅದಕ್ಕಾಗಿ ಈ ಆಧುನಿಕ ಜಗತ್ತಿಗಾಗಿ ಒಂದು ಆಧುನಿಕ ಶಿಕ್ಷಣ ವ್ಯವಸ್ಥೆ ಬೇಕು'. ಒಟ್ಟರ್ಥದಲ್ಲಿ ವರ್ತಮಾನದಲ್ಲಿ ಜೀವಿಸುವುದಕ್ಕೆ ಅಗತ್ಯವಾದ ಅಕ್ಷರಾಭ್ಯಾಸ, ತಂತ್ರಗಾರಿಕೆ ಅಥವಾ ಕೌಶಲ್ಯ ನಮ್ಮದಾಗಬೇಕು ಎಂದಿದ್ದಾನೆ. ಈ ವರ್ತಮಾನದ ಜ್ಞಾನವೆಲ್ಲ ವ್ಯವಹಾರಜ್ಞಾನ ಮಾತ್ರವೇ ಆಗಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈ ವ್ಯವಹಾರಜ್ಞಾನದ ಸ್ಥಾಪನೆ ಮತ್ತು ವಿಸ್ತರಣೆ ಕೂಡ ಒಂದು ತಂತ್ರವಾಗಿದೆ. ನಮ್ಮಲ್ಲಿ ತಂತ್ರ ಸಾಹಿತ್ಯ ಎನ್ನುವುದೊಂದಿದೆ. ಅದು ಮನುಷ್ಯನ ವರ್ತಮಾನ ಪ್ರಜ್ಞೆಯನ್ನು ವಶೀಕರಿಸಿಕೊಳ್ಳುವುದು. ನಮ್ಮ ಸುತ್ತ ನೈಜವಾಗಿ ಏನಾಗುತ್ತಿದೆ ಎಂಬ ಸೂಕ್ಷ್ಮ ಗ್ರಹಿಕೆ ಇಲ್ಲದೆ ಭ್ರಮೆಯಲ್ಲಿರುವಂತೆ ಈ ತಂತ್ರದಿಂದ ಮಾಡಲಾಗುತ್ತದೆ. ಈಗಿನ ಆಧುನಿಕ ಶಿಕ್ಷಣವು ಅದೇ ದಿಕ್ಕಿನಲ್ಲಿ ಸಾಗುತ್ತಿದೆ. ಈ ವ್ಯವಹಾರ ಜ್ಞಾನವನ್ನು ಪ್ರತಿಷ್ಠಾಪಿಸಲು ಅಗತ್ಯ ಪಥ್ಯ ಕ್ರಮಗಳನ್ನು ರೂಪಿಸಲಾಗುತ್ತಿದೆ. ನಮ್ಮ ಯುವಕರನ್ನು ವರ್ತಮಾನದ ಸಮಸ್ಯೆಗಳನ್ನು ಎದುರಿಸಲು ಸನ್ನದ್ಧಗೊಳಿಸಬೇಕು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಈ ಸಮಸ್ಯೆಗಳು ನಿರ್ದಿಷ್ಟವಾಗಿ ಯಾವುವು, ಅವುಗಳು ಮೇಲುನೋಟಕ್ಕೆ ಕಾಣುವಂತೆ ತೋರುವುದೇ ಸಮಸ್ಯೆ ಅಲ್ಲವೇ ಎಂಬುದನ್ನು ಅರಿಯಲಾಗುತ್ತಿಲ್ಲ.

ಈ 'ಆಧುನಿಕ' ಎಂಬ ಶಬ್ದದ ನಿಖರವಾದ ಅರ್ಥವೇನು? ಎಂಬುದರ ಬಗ್ಗೆ ಅನೇಕ ಆಧುನಿಕ ತತ್ತ್ವಜ್ಞಾನಿಗಳು ಗಂಭೀರವಾದ ವಿಶ್ಲೇಷಣೆಯನ್ನು ಕೈಗೊಂಡಿದ್ದಾರೆ. ಅದರಲ್ಲಿ ಎಫ್.ಆರ್. ಲೀವೀಸ್, ಪ್ರಾಂಕ್‌ಪ್ರಾರ್ಡ್, ಆನಂದ ಕುಮಾರಸ್ವಾಮಿ ಮುಂತಾದವರ ಆಲೋಚನೆ ಅತ್ಯಂತ ಸೂಕ್ಷ್ಮ ಅರಿವಿನಿಂದ ಕೂಡಿದೆ. ಸಾಧಾರಣವಾಗಿ ನಾವೆಲ್ಲ ನಮ್ಮ ವರ್ತಮಾನವನ್ನು ಮಾತ್ರ ಆಧುನಿಕ ಎಂದು ಕರೆಯುತ್ತೇವೆ. ನಮ್ಮ ಭೂತವನ್ನು ಹಳೆಯು, ಸಾಂಪ್ರದಾಯಿಕ, ಪರಂಪರೆ, ಪುರಾತನ ಎಂದೆಲ್ಲ ಸಂಭೋಧಿಸಲಾಗುತ್ತದೆ, ಅಂದರೆ ನಮ್ಮ ಕಾಲ, ಮಾನವ ಇತಿಹಾಸದ ಪೂರ್ವಕಾಲಕ್ಕಿಂತ ಭಿನ್ನವಾದದ್ದು, ಅಂದರೆ ಸಾವಿರಾರು ವರ್ಷಗಳ ಹಿಂದಿನ ಜಗತ್ತಿಗಿಂತ ಭಿನ್ನವಾದದ್ದು. ಮೇಲುನೋಟಕ್ಕೆ ಈ ಮಾತು ಸರಿಯಾಗಿ ತೋರುತ್ತದೆ. ಆದರೆ ಈ ಮಾತು ನಿಜವಾದ

ಸಮಸ್ಯೆಯನ್ನು ಪೃಥಕ್ಕರಿಸಿ ವಿವರಿಸುವ ಬದಲು ಸಮಸ್ಯೆ ಎಂಬ ತೊಟ್ಟಿಲಲ್ಲಿರುವ ಜ್ಞಾನವೆಂಬ ಮಗುವನ್ನು ಅಜ್ಞಾನವೆಂಬ ಹಗ್ಗದಿಂದ ತೂಗಿ ಸಿಹಿ ಜೋಗುಳ ಹಾಡಿ ನಿದ್ರೆ ಬರುವಂತೆ ಮಾಡುತ್ತದೆ.

ಈ ಮಾತುಗಳನ್ನು ಹೇಳಲು ಕಾರಣವೆಂದರೆ, ಆ ಎರಡು ಸಂಗತಿಗಳು ನನ್ನನ್ನು ಪ್ರಬಲವಾಗಿ ಕಾಡಲಾರಂಭಿಸಿದ್ದು. ನಾನು ಅಧ್ಯಾಪಕನಾಗಿ ಕಾರ್ಯನಿರ್ವಹಿಸುತ್ತಿರುವ ಕಾಲೇಜಿನಲ್ಲಿ ನನ್ನ ಸಂಬಂಧಿಕರೊಬ್ಬರು ಬಿಸಿಎ ಮತ್ತೊಬ್ಬರು ಬಿಕಾಂ ನಿಕಾಯಗಳಲ್ಲಿ ಪ್ರವೇಶಾತಿ ದೊರಕಿಸಿ ಕೊಡಬೇಕಾಗಿ ಒತ್ತಾಯಿಸತೊಡಗಿದರು. ಈ ನಿಕಾಯಕ್ಕೆ ಸೇರಬಯಸಿದ ಈ ಇಬ್ಬರು ವಿದ್ಯಾರ್ಥಿಗಳನ್ನು ಹಾಗೂ ಕಾಲೇಜಿನ ಶಿಕ್ಷಣದ ಬಗೆಗೆ ಹೆಚ್ಚೇನೂ ಅರಿವಿಲ್ಲದಿರುವ ಪೋಷಕರಿಗೆ, "ಇದೇ ನಿಕಾಯ ಏಕೆ ಬೇಕು, ಬೇರೆ ನಿಕಾಯ ಸೇರಿ, ಕಲೆಯ ನಿಕಾಯದಲ್ಲಿ ತುಂಬಾ ಮಹತ್ವವಿದೆ ಸೇರಿಸಿ" ಎಂದೆ. ಹೀಗೆ ಹೇಳಲು ಎರಡು ಕಾರಣಗಳಿದ್ದವು. ಒಂದು, ವಿದ್ಯಾರ್ಥಿಗಳು ಮತ್ತು ಪೋಷಕರ ಈ ಬಗೆಯ ಧಾವಂತದಲ್ಲಿರುವ ಅವಿವೇಕತನ ಹೋಗಲಾಡಿಸಬೇಕು ಎನ್ನುವುದು. ಮತ್ತೊಂದು ವರ್ತಮಾನದ ಸಂಗತಿ ಎಂದರೆ, ಬಿಸಿಎ ಮತ್ತು ಬಿಕಾಂ ನಿಕಾಯಗಳಿಗೆ ಪ್ರವೇಶಾತಿ ನೀಡಿಸುವುದು ನನಗೆ ಸಾಧ್ಯವಿರಲಿಲ್ಲ. ಏಕೆಂದರೆ ಈ ಎರಡು ನಿಕಾಯಗಳಿಗೆ ವಿಪರೀತ ಬೇಡಿಕೆ ಬಂದು ಅದಕ್ಕಾಗಿ ಪ್ರವೇಶಾತಿಗೆ ಶೇಕಡವಾರು ಇಂತಿಷ್ಟೇ ಪರ್ಸೆಂಟೇಜ್ ಎಂದು ನಿಗದಿಪಡಿಸಿ ನೂರೆಂಟು ಅಡೆತಡೆಗಳನ್ನು ಕೃತಕವಾಗಿ ನಿರ್ಮಿಸಲಾಗಿದೆ. ಅದನ್ನು ದಾಟಿ ಪ್ರವೇಶಾತಿ ನೀಡಿಸುವುದು ನನ್ನ ಪರಿಧಿಗೆ ದುರ್ಲಭ. ಮತ್ತೊಂದು ಸಂಗತಿ ನನ್ನ ಹಿತೈಷಿಗಳಾದ ರಾಜಕೀಯ ಪ್ರಮುಖರು ತಮ್ಮ ಕ್ಷೇತ್ರದ ಮತದಾರರೊಬ್ಬರ ಮಗನಿಗೆ 'ಕೃತಕ ಬುದ್ಧಿಮತ್ತೆ', 'ಆರ್ಟಿಫಿಸಿಯಲ್ ಇಂಟಲಿಜನ್ಸ್ ಇಂಜಿನಿಯರಿಂಗ್ ಕೋರ್ಸ್' ಗೆ ಪ್ರವೇಶಾತಿ ಕೊಡಿಸಿ ಎನ್ನುವುದು. ಈ ಕೋರ್ಸ್‌ಗೆ ಕೂಡ ಅಪಾರವಾದ ಬೇಡಿಕೆ ಬಂದಿದೆ. ಈ ಕೋರ್ಸ್‌ಗೆ ಬದಲಾಗಿ ಮೆಕಾನಿಕ್ ಅಥವಾ ಸಿವಿಲ್ ಇಂಜಿನಿಯರ್ ಓದಿ ಎಂದು ಆ ಪೋಷಕ ಮತ್ತು ವಿದ್ಯಾರ್ಥಿಗೆ ಸಲಹೆ ನೀಡಿದೆ. ನನ್ನ ಸಲಹೆಗೆ ಆತ ಮುಸಿಮುಸಿ ನಕ್ಕು "ಸರ್ ಈಗ ಕಂಪ್ಯೂಟರ್ ಸೈನ್ಸ್ (ಸಿಎಸ್) ಹಾಗೂ ಮಾಹಿತಿ ತಂತ್ರಜ್ಞಾನ(ಐಎಸ್)ಗಿಂತ ಆರ್ಟಿಫಿಸಿಯಲ್ ಇಂಟಲಿಜನ್ಸ್' ಭವಿಷ್ಯತ್ತಿನಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ" ಎಂದೆಲ್ಲಾ ಉಪನ್ಯಾಸಕನಿಗೆ ಉಪನ್ಯಾಸ ಮಾಡಿದರು.

ಈ ಮೇಲಿನ ಮೂವರ ಪ್ರಕಾರ ಕಲೆ ಹಾಗೂ ಮೂಲ ತಾಂತ್ರಿಕ ಶಿಕ್ಷಣ ಪುರಾತನವಾದದ್ದು. ಆಧುನಿಕ ಜಗತ್ತಿನಲ್ಲಿ ನಮ್ಮ ಬದುಕನ್ನು ಸುಂದರಗೊಳಿಸಲು ಸಾಧ್ಯವಿಲ್ಲದಿರುವ ನಿಕಾಯಗಳು. ವರ್ತಮಾನಕ್ಕೆ ಸಲದೆ ಇರುವ ಶಿಕ್ಷಣವದು. ಆಧುನಿಕ ಅಥವಾ ವರ್ತಮಾನ ಎಂಬ ಶಬ್ದಕ್ಕೆ ಎರಡು ಅರ್ಥಗಳಿವೆ. ಒಂದು, ಸಮಯದ

ಪರಿಕಲ್ಪನೆ, ಮತ್ತೊಂದು "ಚೈತನ್ಯದ ನವನವೋನ್ಮೇಶನಶಾಲಿನಿ" ಪರಿಕಲ್ಪನೆಯದು. ಸಮಯದ ಪರಿಕಲ್ಪನೆಯ ದೃಷ್ಟಿಯಲ್ಲಿ ನಮ್ಮ ಕಲೆ ಹಾಗೂ ಮೂಲ ವಿಜ್ಞಾನ ತಂತ್ರಜ್ಞಾನದ ಸಂಗತಿಗಳೆಲ್ಲ ಪುರಾತನವಾದದ್ದು ನಾಟ್ಯಶಾಸ್ತ್ರ ಬರೆದ ನಮ್ಮ ಭರತ ಮುನಿ, ವಿಜ್ಞಾನದ ಬಗ್ಗೆ ಚಿಂತಿಸಿದ ಕಣಾದ ಮಹರ್ಷಿ, ವಾಸ್ತು ತಂತ್ರಜ್ಞಾನದ ಬಗ್ಗೆ ಬರೆದ ಬೃಹತ್ ಸಂಹಿತೆಯನ್ನು ಬರೆದ ವರಾಹಮೀರ ಮುಂತಾದವರೆಲ್ಲ ನಮ್ಮ ಈಗಿನ ಆನ್ವಯಿಕ ಕಲೆ, ವಿಜ್ಞಾನ, ತಂತ್ರಜ್ಞಾನದ ತಜ್ಞರಿಗಿಂತ ತೀರಾ ಹಿಂದುಳಿದವರು. ಆದರೆ ಚೈತನ್ಯದ ದೃಷ್ಟಿಯಿಂದ ನೋಡಿದರೆ ಸಮಕಾಲಿನರಿಗಿಂತಲೂ ಭರತ, ಕಣಾದ, ವರಾಹಮೀರರು ಅತ್ಯಂತ ಆಧುನಿಕರು.

ನಮ್ಮ ಕಾಲದಲ್ಲಿ ಬಿಸಿಎ, ಬಿಕಾಂ, ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಮುಂತಾದ ವರ್ತಮಾನದ ವ್ಯವಹಾರಿಕ ಜ್ಞಾನದ ಉತ್ಕೃಷ್ಟ ಸಂಗತಿಗಳು ಮಾನವ ಚೈತನ್ಯದ ಮೇಲಿನ ಪ್ರಹಾರಗಳು. ರಾಕ್ಷಸ ಪ್ರವೃತ್ತಿಗೆ ರಹದಾರಿಗಳು ಎಂಬುದನ್ನು ಅರಿಯಬೇಕು. ಕೃತಕ ಬುದ್ಧಿಮತ್ತೆಯ ಶಿಕ್ಷಣದ ಬಗೆಗೆ ಜನರು ತೋರಿಸುತ್ತಿರುವ ಆಸಕ್ತಿ ಅಪಾಯಕಾರಿಯಾದದ್ದು. ಇದು ಹೀಗೆಯೇ ಮುಂದುವರೆದರೆ ಎಲ್ಲವೂ ಕೇವಲ ವ್ಯವಹಾರವಾಗುತ್ತದೆ. ಮಾನವಚೈತನ್ಯ ತನ್ನ ಮೂಲ ಸ್ವರೂಪವನ್ನು ಮರೆಮಾಡಿ ಕೃತಕವಾಗಿರುವ ಜಗತ್ತು ವಿಕಾರವಾಗಿ ನಮ್ಮನ್ನು ಅಕ್ರಮಿಸಿಬಿಡುತ್ತದೆ. ನಾವು ಎಚ್ಚರಗೊಳ್ಳಲು ಇದು ಸಕಾಲ.

**ಡಾ. ಎಂ.ಎನ್. ನಂದೀಶ್ ಹಂಚೆ**

ಸದ್ಯೋಜಾತಮುಖವೆ ಎನಗೆ ಬಸವಣ್ಣನಯ್ಯಾ
ವಾಮದೇವಮುಖವೆ ಎನಗೆ ಚೆನ್ನಬಸವಣ್ಣನಯ್ಯಾ
ಅಘೋರಮುಖವೆ ಎನಗೆ ಮಡಿವಾಳಯ್ಯನಯ್ಯಾ
ತತ್ಪುರುಷಮುಖವೆ ಎನಗೆ ಸಿದ್ಧರಾಮಯ್ಯನಯ್ಯಾ
ಈಶಾನಮುಖವೆ ಎನಗೆ ಪ್ರಭುದೇವರಯ್ಯಾ
ಹೃದಯದ ಮುಖವೆ ಎನಗೆ ಗಣಂಗಳಯ್ಯಾ
ಇಂತಿವರ ಶ್ರೀಚರಣದಲ್ಲಿ
ಉರಿಯುಂಡ ಕರ್ಪುರದಂತೆ ಬೆರಸಿದೆನಯ್ಯಾ
ಸದಾಶಿವಮೂರ್ತಿಲಿಂಗದಲ್ಲಿ

**– ಅರಿವಿನ ಮಾರಿತಂದೆ**

ಪ್ರವಚನಸಾರ

# ಧ್ಯಾನಜೀವನ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಮೂರು ಮಹಾ ಸಂಪತ್ತುಗಳು ದೇಹ, ಮನಸ್ಸು ಮತ್ತು ಮತಿ. ನಿಸರ್ಗ ಈ ಮೂರು ವಸ್ತುಗಳನ್ನು ನಮಗೆ ಅಳವಡಿಸಿಕೊಟ್ಟಿದೆ. ಅತ್ಯಮೂಲ್ಯ ವಾದ, ಶಕ್ತಿವಂತವಾದ ನಿಸರ್ಗದ ಕಾಣಿಕೆಗಳಿವು. ಈ ಮೂರನ್ನೂ ಬಳಸಿ ಜಗತ್ತನ್ನು ಅನುಭವಿಸುತ್ತಿದ್ದೇವೆ. ಜಗತ್ತು ನಮಗೆ ಸುಖ ಉಂಟು ಮಾಡಬೇಕಾದರೆ, ಜೀವನದಲ್ಲಿ ಸಾರ್ಥಕತೆ ಹಾಗೂ ವಿಮಲ ಶಾಂತಿ ದೊರೆಯಬೇಕಾದರೆ, ಈ ಮೂರನ್ನು ನಾವು ಅತ್ಯಂತ ಜಾಣ್ಮೆಯಿಂದ ಬಳಸಬೇಕಾಗುತ್ತದೆ. ಈ ಮೂರು ವಸ್ತುಗಳಲ್ಲಿ ದೇಹ ಶಾಶ್ವತವಾಗಿರುವುದಲ್ಲ. ದೈಹಿಕ ಸಾಮರ್ಥ್ಯ ಕೂಡ ಬದುಕಿರುವಷ್ಟು ಕಾಲ ಇದ್ದಿತೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಬಾಳಿಗೆ ಲೌಕಿಕವೇ ಇರಲಿ, ಪಾರಮಾರ್ಥಿಕವೇ ಇರಲಿ ದೇಹ ಅತ್ಯವಶ್ಯ. ಸುಖ ಅನುಭವಿಸಬೇಕಾದರೂ ದೇಹ ಬೇಕು, ದುಃಖ ಅನುಭವಿಸಬೇಕಾದರೂ ದೇಹ ಬೇಕು. ಸಂಪಾದನೆ, ಜಯ, ಶ್ರೇಯಸ್ಸು ಏನಾದರೂ ಸರಿ, ಎಲ್ಲದಕ್ಕೂ ದೇಹದ ಆವಶ್ಯಕತೆ ಬಹಳ. ಈ ದೇಹದ ರಚನೆ ಅದ್ಭುತ. ಇದು ಮಣ್ಣಿನಿಂದಾದರೂ ಮಣ್ಣಿನಂತಿಲ್ಲ. ಮಣ್ಣು ನಿಷ್ಕ್ರಿಯ, ಜಡ. ದೇಹ ಸಕ್ರಿಯ, ಪ್ರಾಣಯುಕ್ತ. ಅದರಲ್ಲಿರುವ ಒಂದೊಂದು ಅವಯವ, ಇಂದ್ರಿಯ ಎಂಥ ಅಗಾಧವಾಗಿದೆ! ಕಣ್ಣು, ಕಿವಿ, ಹೃದಯ, ಪುಪ್ಪುಸಗಳು ಎಂತಹ ಪವಾಡಸದೃಶ ಕಾರ್ಯಗಳನ್ನು ಮಾಡುತ್ತಿವೆ! ಈ ದೇಹದಲ್ಲಿ ಮನಸ್ಸಿದೆ. ಬಹಳ ಸೂಕ್ಷ್ಮ. ಮನಸ್ಸನ್ನು ಹಿಡಿಯಲಿಕ್ಕೆ ಆಗದು. ಅದರ ಕ್ರಿಯೆಗಳು ನಮಗೆ ಕಾಣುತ್ತವೆ. ಆದರೆ ಆ ಮನಸ್ಸನ್ನು ಚಿತ್ರಿಸಲಿಕ್ಕೆ ಆಗದು.

ಮನದ ಸೂಕ್ಷ್ಮರೂಪವೇ ಮತಿ. ವಸ್ತುಗಳನ್ನು ಅನುಭವಿಸುವ, ವಿಶ್ವವನ್ನರಿಯುವ ಸಮರ್ಥ ಸಾಧನ. ಎಲ್ಲ ಸಿದ್ಧಾಂತಗಳು, ಸಂಶೋಧನೆಗಳು ಅದರ ಕಾಣಿಕೆಗಳು.

ಈ ಮೂರು ಸಾಧನಗಳನ್ನು ಸತ್ಯದರ್ಶನ ಹಾಗೂ ಶಾಂತಿಸಿದ್ಧಿಗಾಗಿ ಬಳಸುವುದೇ ಯೋಗ. ದೈಹಿಕ ಕ್ರಿಯಾಪ್ರಧಾನವಾದಲ್ಲಿ ಅದು ಕರ್ಮ ಯೋಗ. ಮನೋಗತ ಭಾವಪ್ರಧಾನ ವಾದಲ್ಲಿ ಭಕ್ತಿಯೋಗ. ಮಾನಸಿಕ ವೃತ್ತಿನಿರೋಧ ಪ್ರಧಾನವಾದಲ್ಲಿ ಧ್ಯಾನಯೋಗ. ಮತಿ ಪ್ರಧಾನ ವಾದಲ್ಲಿ ಜ್ಞಾನಯೋಗ. ನಾವೀಗ ಧ್ಯಾನಯೋಗದ ಮೂಲಕ ಭಗವಚ್ಚಿಂತನ ಮಾಡಬೇಕಿದೆ.

ಧ್ಯಾನಸಾಧನೆ ಎಲ್ಲ ಮತಧರ್ಮದವರಿಗೆ ಇಷ್ಟ. ಒಂದಲ್ಲ ಒಂದು ರೀತಿ ಅದನ್ನು ಉಪಯೋಗಿಸಿದ್ದಾರೆ. ಧ್ಯಾನವೆಂದರೆ ಒಂದಕ್ಕಿಂತ ಹೆಚ್ಚು ಕ್ಷಣ ಒಂದು ವಸ್ತುವಿನಲ್ಲಿ ಮಗ್ನತೆ.

ಸಾಮಾನ್ಯವಾಗಿ ಎಲ್ಲ ಜನ ಧ್ಯಾನ ಬಲ್ಲರು. ಶಬ್ದ ಕೇಳುವಲ್ಲಿ, ರೂಪ ನೋಡುವಲ್ಲಿ, ರಸ ಸೇವಿಸುವಲ್ಲಿ ಜನ ಮಗ್ನರಾಗುತ್ತಾರೆ. ಬಹುತರ ಧ್ಯಾನ ನಡೆಸದ ಜನರೇ ಇಲ್ಲ;

ಬದುಕೇ ಇಲ್ಲ. ಪ್ರಾಣಿಗಳೂ ಅಪವಾದವಲ್ಲ. ಪಕ್ಷಿಯೊಂದು ಹಾಡುತ್ತದೆ , ಗೂಡು ಕಟ್ಟುತ್ತದೆ. ಎಂಥ ಮಗ್ನತೆ ಅದಕ್ಕೆ ಆ ಕಾರ್ಯದಲ್ಲಿ!

ಲೌಕಿಕ ವಸ್ತುಗಳಲ್ಲಿ, ಕಾರ್ಯಗಳಲ್ಲಿ ಮಗ್ನತೆಯಾದರೆ ಅದು ಲೌಕಿಕ ಧ್ಯಾನ. ಟಿ.ವ್ಹಿ. ನೋಡುವಲ್ಲಿ ತಾಯಿ ಮಗ್ನಳು. ಒಳಗೆ ಹಾಲು ಉಕ್ಕಿದೆ. ಅದರತ್ತ ಲಕ್ಷ್ಯವಿಲ್ಲ. ಹುಡುಗ ಆಡುವಲ್ಲಿ ಮಗ್ನ ; ಕಳ್ಳನೊಬ್ಬ ಅವನ ಪಾಕೇಟ ಕದ್ದ ಅರಿವಿಲ್ಲ ಅವನಿಗೆ. ಬಡವನೊಬ್ಬ ಹಗಲುಗನಸಿನಲ್ಲಿ ಮಗ್ನ; ಹೊತ್ತ ಹಾಲಿನ ಗಡಿಗೆಯ ಭಾನವಿಲ್ಲ. ಅದು ಕೆಳಗೆ ಬಿದ್ದು ಒಡೆದಾಗಲೆ ಎಚ್ಚರ! ಮುದುಕನೊಬ್ಬ ಸಂಸಾರದಲ್ಲಿ ತಲ್ಲೀನ. ನೂರು ವರುಷ ಹೋದುದೇ ಅವನಿಗೆ ತಿಳಿಯದು! ಇವೆಲ್ಲ ಧ್ಯಾನದ ಉದಾಹರಣೆಗಳು.

ಧ್ಯಾನ ಎಷ್ಟೇ ಗಾಢವಾದರೂ, ದೀರ್ಘವಾದರೂ ಕೊನೆಗೊಳ್ಳಲೇ ಬೇಕು. ಸ್ವಭಾವತಃ ಚಂಚಲಿಸುವ ಚಿತ್ತ ಅದೆಷ್ಟು ಕಾಲ ನಿಶ್ಚಲವಾದೀತು? ಬದುಕಿಗೆ ಅದು ಉಪಯುಕ್ತವೂ ಅಲ್ಲ. ಮನಸ್ಸು ಸಂಪೂರ್ಣ ನಿಂತೇ ಹೋದರೆ, ಶಾಶ್ವತವಾಗಿ ಕ್ರಿಯಾಶೂನ್ಯವಾದರೆ ಕೇಳುವ ನೋಡುವ ಮುಂತಾದ ಐಂದ್ರಿಯಿಕ, ದೈಹಿಕ ವ್ಯವಹಾರ ಹೇಗೆ ನಡೆದಾವು? ಅವಿಲ್ಲದಿರೆ 'ಬದುಕು' ಕೊನೆಗೊಂಡಂತೆಯೇ! ದೇವರು ಉದ್ದೇಶಪೂರ್ವಕವಾಗಿಯೇ ಮನಸ್ಸನ್ನು ನೀರಿನಂತೆ, ವಾಯುವಿನಂತೆ ಸಚಲಗೊಳಿಸಿದ. ಈ ಚಲನೆಯೇ ಬಾಳಿಗೆ ಶಕ್ತಿ, ಸೌಂದರ್ಯ ನೀಡಿದೆ ! ಮನಸ್ಸು ಚಲನಶೀಲವಷ್ಟೇ ಅಲ್ಲ, ಏಕಾಗ್ರವೂ ಆಗಬಲ್ಲದು. ಆದರೆ ಎರಡೂ ಗುಣಗಳು ಶಾಶ್ವತವೆಂದಲ್ಲ. ನಾವು ಬದುಕಿಗೆ ಚಲನಶೀಲಗುಣವನ್ನೂ, ಯೋಗಸಾಧನೆಗೆ ಏಕಾಗ್ರ ಗೊಳ್ಳುವ ಗುಣವನ್ನೂ ಉಪಯೋಗಿಸಿಕೊಳ್ಳಬೇಕು, ಹದವರಿತು, ವೇಳೆಯರಿತು!

ಮನಸ್ಸನ್ನು ಒಂದು ವಸ್ತುವಿನ ಮೇಲೆ ನಿಲ್ಲಿಸುವ ಸಾಧನೆಯೇ ಧ್ಯಾನ. ಆ ಧ್ಯೇಯವಸ್ತು ಶಬ್ದವಾಗಿದ್ದರೆ ಅದು ಶಬ್ದಧ್ಯಾನಯೋಗ; ರೂಪವಾಗಿದ್ದರದು ರೂಪಧ್ಯಾನಯೋಗ. ಜ್ಯೋತಿಯ ಮೇಲೆ ನಿಲ್ಲಿಸಿದರದು ಜ್ಯೋತಿರ್ಧ್ಯಾನಯೋಗ. ಯೋಗಗಳು ನೂರಾರು. ಆದರೆ ಎಲ್ಲ ಯೋಗಗಳ ಮೂಲ ರೂಪ ಒಂದೇ. ಮನಸ್ಸನ್ನು ಧ್ಯೇಯದಲ್ಲಿ ಹೆಚ್ಚು ಕಾಲ ಸ್ಥಿರಗೊಳಿಸುವುದು.

ಸರ್ವವಿದ್ಯಾಸಂಪನ್ನನಾದ ನಾರದ ಮಹರ್ಷಿ ಸನತ್ಕುಮಾರರ ಹತ್ತಿರ ಹೋಗಿ ವಂದಿಸಿ ಬಿನ್ನವಿಸಿದ, "ಸನತ್ಕುಮಾರರೆ, ನಾನು ಅನೇಕ ವಿದ್ಯೆ ಕಲಿತೆ. ಆದರೆ ಸಮಾಧಾನ, ಸಂತೃಪ್ತಿ ದೊರೆತಿಲ್ಲ. ಸತ್ಯಸಾಕ್ಷಾತ್ಕಾರವಾಗಿಲ್ಲ. ತಮ್ಮ ಸನ್ನಿಧಿಗೆ ಆಗಮಿಸಿದ್ದೇನೆ ಶಿಷ್ಯಭಾವದಿಂದ. ಮಾರ್ಗ ತೋರಿ." ಸನತ್ಕುಮಾರರು ನುಡಿದರು, "ಅವೆಲ್ಲಾ ನಾಮಮಾತ್ರ ವಿದ್ಯೆಗಳು. ಅವುಗಳನ್ನು ಮರೆ. ಇದೀಗ 'ಧ್ಯಾನಂ ಉಪಾಸ್ವ' ಧ್ಯಾನೋಪಾಸನೆ ಮಾಡು, ನಾರದ ನುಡಿದ, "ಅಂದರೆ?" ಆಗ ಸನತ್ಕುಮಾರರು ಸುತ್ತಮುತ್ತ ಹರಡಿದ ಬೆಟ್ಟಗಳ ಹಾಗೂ ಅಂತರಿಕ್ಷ, ಆಕಾಶಗಳ ತೋರಿ "ಇವುಗಳನ್ನು ನೋಡುತ್ತಿರು, ನಿಶ್ಚಲವಾಗಿ. 'ಧ್ಯಾಯತೀವ ಪೃಥ್ವೀ| ಧ್ಯಾಯತೀವ ಅಂತರಿಕ್ಷಂ| ಧ್ಯಾಯತೀವ ದ್ಯೌಃ' ಈ ಪೃಥ್ವಿ, ಅಂತರಿಕ್ಷ, ಆಕಾಶ ಎಲ್ಲವೂ ಧ್ಯಾನಮಗ್ನ! ಹಾಗೆ ಕಾಣುವುದಿಲ್ಲವೆ? ಅವುಗಳಂತೆ ನೀನೂ ನಿಶ್ಚಿಂತ-ನಿರ್ಲಿಪ್ತ-ನಿಮಗ್ನನಾಗು."

ಪೃಥ್ವಿಯ ಮೇಲೆಲ್ಲ ಹಸಿರು ಹಬ್ಬಿದೆ. ಗುಡ್ಡಬೆಟ್ಟಗಳು ಸಾವಿರಾರು. ತುಂಬಿದ ಸಾಗರಗಳು, ಹರಿವ ನದಿಗಳು. ಹಾಡುವ ಹಕ್ಕಿಗಳು. ಅದನ್ನೆಲ್ಲ ನೋಡುತ್ತಿದೆ ಮೌನವಾಗಿ ಎಂಬಂತಿದೆ ಈ ಭೂಮಿ. ಈ ಭೂಮಿಯ ಮೌನವ ಮೌನವಾಗಿ ಅನುಭವಿಸುವುದು ಭೂಧ್ಯಾನಯೋಗ.

ಭೂಮಿಯ ಮೇಲೆ ಅಂತರಿಕ್ಷ. ಅಲ್ಲಿ ಮೇಘಮಾಲೆಗಳು. ಸುರಿವ ಮಳೆ. ಬೀಸುವ ಗಾಳಿ. ಗುಡುಗು. ಮಿಂಚು. ನವನವ ರಂಗವಿತಾನಗಳು. ಅಷ್ಟೆಲ್ಲದರ ಮಧ್ಯ ಅಂತರಿಕ್ಷ 'ಪಶ್ಯತೀವ' ಮೌನ ವೀಕ್ಷಕನಾಗಿ ನಿಂತಿದೆ. ಅದನ್ನು ಅನುಭವಿಸುವುದು ಅಂತರಿಕ್ಷ ಧ್ಯಾನಯೋಗ.

ಇನ್ನು ಆಕಾಶ. ಅದರಲ್ಲಿ ಸದಾ ಹೊಳೆವ ಸೂರ್ಯ. ಸುತ್ತುವ ಗ್ರಹೋಪಗ್ರಹಗಳು. ಕೋಟ್ಯಂತರ ಮಿಣುಕು-ನಕ್ಷತ್ರಗಳು. ಅದೃಶ್ಯವಾದ ಚುಂಬಕ ಗಾಳಿಗಳು. ಪ್ರಚಂಡ ವೇಗದಿಂದ ಚಲಿಸುವ ಕಿರಣಗಳು. ಅವೆಲ್ಲದರ ಮಧ್ಯ ಬಾಹ್ಯಾಂತರಾಕಾಶವು ಧ್ಯಾನಸ್ಥ. ಅದನ್ನು ಅನುಭವಿಸುವುದು ದ್ಯೌ-ಧ್ಯಾನಯೋಗ.

ಆಕಾಶ, ಭೂಮಿ, ನದಿ, ಸಾಗರಗಳು, ಅಂತರಿಕ್ಷ, ನಕ್ಷತ್ರ ಇವುಗಳೆಲ್ಲ ಧ್ಯಾನಸ್ಥ. ಇದನ್ನು ನೋಡುತ್ತ ಇರುವುದು ಧ್ಯಾನ. ಒಂದು ಕ್ಷಣದ ಧ್ಯಾನವಲ್ಲವಿದು, ಸದೈವ ಧ್ಯಾನ. ಕ್ರಿಯೆಯ ಮಧ್ಯದಲ್ಲಿಯೇ ಧ್ಯಾನ. ಕಣ್ಣು ನೋಡುತ್ತಾ ಇರಲಿ, ಕಿವಿ ಕೇಳುತ್ತ ಇರಲಿ, ನಾಲಿಗೆ ನುಡಿಯುತ್ತಾ ಇರಲಿ, ಮನಸ್ಸು ಸಹಜ ವೀಕ್ಷಿಸಲಿ, ಮೌನವಾಗಿ. ಅದು ಧ್ಯಾನಯೋಗ. ಮಾತನಾಡುವ ಕ್ರಿಯೆಯ ಮಧ್ಯದಲ್ಲಿಯೇ ಧ್ಯಾನಯೋಗ. ಕೇಳುವ ಕಾರ್ಯದ ಮಧ್ಯದಲ್ಲಿಯೇ ಧ್ಯಾನಯೋಗ, ಕಾರ್ಯ ಕೈಯಿಂದ ಮಾಡುತ್ತಿರುವಾಗಲೇ ಧ್ಯಾನಯೋಗ, ಕ್ರಿಯಾಸಹಿತವಾದಂತಹ ನಿಶ್ಚಲ ಧ್ಯಾನಯೋಗ. ಇದನ್ನು ನಿಸರ್ಗದಿಂದ ಕಲಿಯಬೇಕು. ಇದನ್ನು ಅಳವಡಿಸಿಕೊಳ್ಳಬೇಕು. ಇದು ಕ್ರಿಯಾಸಹಿತವಾದ ಅದ್ಭುತ ಧ್ಯಾನಯೋಗ.

ನಾನು ಕುಳಿತುಕೊಂಡಿದ್ದೇನೆ. ಇದು ದೇಹ. ದೇಹದಲ್ಲಿ ಬೆವರು ಸುರಿಯುತ್ತಲಿದೆ. ದೇಹದೊಳಗೆ ಅವಯವಗಳು ಪ್ರತಿ ಕ್ಷಣ ಕಾರ್ಯ ಮಾಡುತ್ತಲಿವೆ. ಇಷ್ಟೆಲ್ಲಾ ದೇಹದ ಮಧ್ಯ ಕಾರ್ಯ ಸಾಗಿದರೂ ದೇಹ ನಿಶ್ಚಲ! ದೇಹ ನಿಶ್ಚಲವಾಗಿರುವುದೆಂದರೆ ಎಲ್ಲ ಕಾರ್ಯವನ್ನು ನಿಲ್ಲಿಸಿ ಬಿಡುವುದೆಂದಲ್ಲ. ಹಾಗಾದಲ್ಲಿ ದೇಹ ನಷ್ಟವಾಗಿ ಹೋಗುತ್ತದೆ. ಹೃದಯ ಬಡಿಯುತ್ತಿರುವುದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಹೃದಯ ಬಡಿಯುತ್ತಿರಬೇಕು, ಕಣ್ಣು ತೆರೆದಿರಬೇಕು, ಕಿವಿ ಕೇಳುತ್ತಿರಬೇಕು, ಎಲ್ಲಾ ಸಾಗುತ್ತಿರಬೇಕು. ಆದರೆ ಎಲ್ಲದರ ಮಧ್ಯದಲ್ಲಿ ಏಕತಾನತಾ ತುಂಬಿರಬೇಕು, ಅದು ಧ್ಯಾನ! ನಾರದ ಮಹರ್ಷಿಗೆ ದೊರೆತ ನೈಸರ್ಗಿಕವಾದ ಸುಂದರವಾದ ಧ್ಯಾನಯೋಗ!

ಪಂಚಭೂತಗಳಲ್ಲಿ ಮೊದಲಿನ ನಾಲ್ಕು ಮೇರೆಯುಳ್ಳವು. ಸಾಕಾರ. ಮನಸ್ಸು ಮೊದಲು ಅತಿ ಸ್ಥೂಲವಾದ ಪೃಥ್ವಿಯನ್ನು ಧ್ಯಾನಿಸಬೇಕು. ಅದಕ್ಕಿಂತ ಸೂಕ್ಷ್ಮವಾಗುತ್ತ ಹೋಗುವ ಜಲ ಅಗ್ನಿ ವಾಯು ತತ್ವಗಳನ್ನು ಪರಿಭಾವಿಸಬೇಕು. ಅಂದರೆ ಮನವು ಮೊದಲು ಪೃಥ್ವಿಯಾಕಾರ, ಜಲಾಕಾರ, ಅಗ್ನ್ಯಾಕಾರ, ಕಡೆಯಲ್ಲಿ ವಾಯ್ವಾಕಾರ ಹೊಂದಬೇಕು. ಅವುಗಳ

ನೋಟದಲ್ಲಿ ಮಗ್ನವಾಗಬೇಕು. ಇದು ಸಾಕಾರಧ್ಯಾನ. ಅನಂತರ ಅಂದರೆ ಸಾಕಾರಯೋಗ ಅಳವಟ್ಟನಂತರ ಮೇರೆಗಳಿರದ ರೂಪಾದಿಗಳಿರದ ಆಕಾಶದ ಆಕಾರ ತಾಳಬೇಕು ಮನ. ಅದು ಆಕಾರವೇ ಇಲ್ಲದ ಬಯಲಾಕಾರವಾಗಬೇಕು. ಅಂದರೆ ಮನವು ನಿಸ್ಸೀಮ ಬಯಲಾಗಬೇಕು. ಇದು ಭೌತ ನಿರಾಕಾರ ಧ್ಯಾನಯೋಗ.

ಕೊನೆಯಲ್ಲಿ, ಬಯಲ ಧ್ಯಾನ ಘನವಾದಂತೆ ಆ ಆಕಾಶದಿಂದ ಭೂಮಿ, ನೀರು, ಆಗ್ನಿ, ವಾಯು ಕಲ್ಪನೆಗಳು ಮರೆಯಾಗುವುವು. ನಾಲ್ಕು ಭೂತಗಳೇ ಮರೆಯಾದಾಗ ಅವುಗಳಿಂದ ಪ್ರತ್ಯೇಕವಾಗಿ ಆಕಾಶ ಉಳಿಯದು. ಆಕಾಶ ಮೀರಿದ ಅನಂತತೆಯನ್ನು ಮನಸ್ಸು ಸ್ಪರ್ಶಿಸುತ್ತದೆ! ಅದು ಅತೀತ ಧ್ಯಾನಯೋಗ!

ವಿಜ್ಞಾನಿಗಳ ಅಭಿಪ್ರಾಯದಲ್ಲಿ ದ್ರವ್ಯ, ದೇಶ, ಕಾಲ ಬೇರೆ ಬೇರೆ ಅಲ್ಲ. ಅವು ಮೂರೂ ಒಂದರಲ್ಲಿ ಒಂದು ಹೊಸೆದುಕೊಂಡಿವೆ. ಆದ್ದರಿಂದ ದ್ರವ್ಯವನ್ನು ತೆಗೆದುಹಾಕಿದರೆ ಕಾಲವೂ ಉಳಿಯದು, ದೇಶವೂ ಉಳಿಯದು! ಈ ಸಿದ್ಧಾಂತಕ್ಕೆ ಸರಿಯಾಗಿಯೇ ಧ್ಯಾನ ಸಾಗಬೇಕು. ಭೂಮಿ ಜಲಾದಿ ಭಾವ ಮೆಟ್ಟಲುಗಳನ್ನೇರುತ್ತ ಆಕಾಶದ ಬರಿ ಬಯಲು ತಲಪಬೇಕು. ಭೂಮ್ಯಾದಿ ದ್ರವ್ಯಭಾವ ಮರೆಯಾದುದರಿಂದ ಆಕಾಶ, ಕಾಲವೆಂಬ ಕಲ್ಪನೆಗಳೂ ಅಡಗುವುವು. ಕೊನೆಗೆ ಉಳಿಯುವುದು ಆತ್ಮಬಯಲು! ಅಲ್ಲಿ ಮನವು ನಿಂತುದೇ 'ನಿರುದ್ಧಯೋಗ, ಅಸಂಪ್ರಜ್ಞಾತಯೋಗ!'

ಈ ಸಭಾಮಂದಿರ. ಇಲ್ಲಿ ನೂರಾರು ಪೀಠೋಪಕರಣಗಳು. ನೂರಾರು ಕೇಳುಗರು. ಮಂದಿರ ಪೂರ್ಣ ತುಂಬಿದೆ. ಎಲ್ಲ ಸಾಮಾನುಗಳನ್ನು ತೆಗೆದುಹಾಕಿದಾಗ, ಎಲ್ಲ ಜನ ಹೊರ ಹೊರಟುಹೋದಾಗ ಮಂದಿರದಲ್ಲಿ ಉಳಿಯುವುದು 'ಮೌನ! ಬಯಲು! ಶೂನ್ಯ!' ವಸ್ತುಗಳಿದ್ದಾಗಲೂ ಬಯಲಿದೆ, ಆದರೆ ಗಮನಕ್ಕೆ ಬರದು. ವಸ್ತುಗಳನ್ನೆಲ್ಲ ತೆಗೆದು ಬಯಲ-ಮೌನವರಿವುದು ಅನುಭವಿಸುವುದು ಒಂದು ವಿಧಾನ. ವಸ್ತುಗಳಿರುವಾಗಲೇ ಬಯಲ-ಮೌನವ ಅನುಭವಿಸುವುದು ಎರಡನೆಯ ವಿಧಾನ. ಮೊದಲನೆಯದು ನಿರ್ವಿತರ್ಕ ಸಂಪ್ರಜ್ಞಾತ ಸಮಾಧಿ. ಎರಡನೆಯದು ಸವಿತರ್ಕ ಸಂಪ್ರಜ್ಞಾತ ಸಮಾಧಿ. ಹಾಗೆ ಮನಸ್ಸಿನೊಳಗಿನ ಎಲ್ಲ ವೃತ್ತಿಗಳನ್ನು ತೆಗೆದು ಆತ್ಮನ, ದೇವನ ಅನುಭವಿಸುವುದು ನಿರ್ವಿತರ್ಕ, ನಿರ್ವಿಚಾರ ಸಂಪ್ರಜ್ಞಾತ ಸಮಾಧಿ. ವೃತ್ತಿಗಳಿರುವಾಗಲೆ ಆತ್ಮದ ಭಾನ ಹೊಂದಿರುವುದು ಸವಿತರ್ಕ, ಸವಿಚಾರ ಸಂಪ್ರಜ್ಞಾತ ಸಮಾಧಿ! ವಿತರ್ಕ, ವಿಚಾರಗಳ ಇಡುವ ತೆಗೆವ ಗೊಡವೆ ಇಲ್ಲದೆ, ಮನಸ್ಸು ಅಮನಸ್ಕಾದರೆ ಪರಮಶಾಂತವಾದರೆ ಆತ್ಮಾನುಭೂತಿ ಉಂಟಾಗುತ್ತದೆ. ಇದು ಅಸಂಪ್ರಜ್ಞಾತ ಸಮಾಧಿ! ಧ್ಯಾನದ ಪರಾಕಾಷ್ಠೆ.

ಇನ್ನೊಂದು ವಿಧವಾಗಿ ಧ್ಯಾನವನ್ನಾಚರಿಸಬಹುದು. ಲಿಂಗವು ದೇವನ ಕುರುಹು. ಅದು ಮೂರು ಬಗೆಯಾಗಿದೆ. ನೇತ್ರ ದೃಶ್ಯ ಕುರುಹಾಗಿದ್ದರೆ ಅದು ಇಷ್ಟಲಿಂಗ. ಮನೋದೃಶ್ಯ ವೃತ್ತ್ಯಾತ್ಮಕ ಕುರುಹಾಗಿದ್ದರೆ ಅದು ಪ್ರಾಣಲಿಂಗ. ಕೇವಲ ಭಾವಗೋಚರವಾಗಿದ್ದರೆ ಅದು ಭಾವಲಿಂಗ. ವೃತ್ತ್ಯಾತ್ಮಕ ರೂಹಿಲ್ಲದ ಕೇವಲ ಅಸ್ತಿತ್ವಭಾವ! ಇಷ್ಟಲಿಂಗದಲ್ಲಿ ದೃಷ್ಟಿ ಸ್ಥಿರವಾದರೆ, ಮನಸ್ಸು ಮಗ್ನವಾದರೆ ಅದು ವಿತರ್ಕ ಸಂಪ್ರಜ್ಞಾತ ಸಮಾಧಿ (ಧ್ಯಾನ).

ಪ್ರಾಣಲಿಂಗದಲ್ಲಿ ಮನವು ಮಗ್ನವಾದರೆ ಅದು ವಿಚಾರ ಸಂಪ್ರಜ್ಞಾತ ಸಮಾಧಿ (ಧ್ಯಾನ). ಭಾವಲಿಂಗದಲ್ಲಿ ಮನವು ಅಡಗಿದರೆ ವೃತ್ತಿ ವಿರಹಿತ ಅಸಂಪ್ರಜ್ಞಾತ ಸಮಾಧಿ! ವ್ಯಷ್ಟಿಪ್ರಜ್ಞೆ ಸಂಪೂರ್ಣ ಅಡಗಿ, ಅರಿವ ಮನ ಮಹಾಮೌನವಾಗಿ ಧ್ಯಾತೃಕಲ್ಪನೆ ಕೂಡ ತನುಗೊಂಡರೆ (ಕರಗಿದರೆ) ಅದು ಸಹಜಸಮಾಧಿ ಮಹಾಲಿಂಗದಲ್ಲಿ.

ದೃಷ್ಟಾಂತದಿಂದ ಅರಿಯಬಹುದಾದರೆ ತೊಟ್ಟಿಲಲ್ಲಿ ಆಡುವ ಮಗು, ತಾಯಿ ತೂಗುತ್ತಿದ್ದಾಳೆ, ಹಾಡು ಹಾಡುತ್ತ. ಕಾಲ ಸರಿಯುತ್ತದೆ. ತಾಯಿಯ ಹಾಡು ಕೇಳುತ್ತ ಕೇಳುತ್ತ ಮಗು ಮೌನವಾಗುತ್ತದೆ. ಮಲಗಿ ಆನಂದಿಸುತ್ತದೆ. ತೂಗುತ್ತ ತೂಗುತ್ತ ತಾಯಿ ತನಗರಿವಿರದಂತೆ ನಿಶ್ಯಬ್ದ ನಿದ್ರೆಯಲ್ಲಿ ಪ್ರವೇಶಿಸುತ್ತಾಳೆ. ಆಗ ಮಗು ಇಲ್ಲ, ತಾಯಿ ಇಲ್ಲ, ತೊಟ್ಟಿಲಿಲ್ಲ, ತೂಗುವಿಕೆ ಇಲ್ಲ. ಅಷ್ಟೇ ಏಕೆ? ಅವರವರ ವ್ಯಕ್ತಿಪ್ರಜ್ಞೆ ಕೂಡ ಅಡಗಿದೆ. ಆನಂದ ಘನಾನುಭವದಲ್ಲಿ ಸಮರಸಗೊಂಡಿದೆ. ಇದುವೇ ಅಸಂಪ್ರಜ್ಞಾತ ಸಮಾಧಿ ಸ್ಥಿತಿ!

ಸಮಗ್ರ ಜೀವನವೆ ಧ್ಯಾನಯೋಗವಾಗದಿರದು. ಪರವಸ್ತುವಿನ ಅನಂತಾಸ್ತಿತ್ವದ ಅರಿವಿನೊಂದಿಗೆ ನಡೆಸಲಾಗುವ ಪವಿತ್ರ ಬದುಕು ಧ್ಯಾನಯೋಗಕ್ಕಿಂತ ಬೇರೆಯೇನಲ್ಲ. ಶರಣರದು ಅಂತಹ ಬದುಕು. ಅವರದು ಹಗಲು ರಾತ್ರಿ ದೇವ-ನೆನಹು. ದಿನವಿಡೀ ಸತ್ಯಶುದ್ಧ ಕಾಯಕ, ಪ್ರಸಾದೋಪಭೋಗ, ಸತ್ಸಂಗ-ಅನುಭಾವ-ಸಂಗ! ಬೇರೆ ಆಸೆಗಳಿಲ್ಲ, ಆಮಿಷಗಳಿಲ್ಲ, ಅಹಂ-ಮಮಗಳಿಲ್ಲ. ಐನ್‌ಸ್ಟೀನ್‌ರಂಥ ವಿಜ್ಞಾನಿಗಳು, ಎಡಿಸನ್‌ರಂಥ ಸಂಶೋಧಕರು, ರವೀಂದ್ರರಂಥ ಮಹಾಕವಿಗಳು, ಗಾಂಧಿಯವರಂಥ ಅನಾಸಕ್ತ ಕರ್ಮಯೋಗಿಗಳು ತಮ್ಮ ಸಮಗ್ರ ಜೀವನವನ್ನು ಸತ್ಯದ ಆರಾಧನೆಗೆ ನಿವೇದಿಸಿ ತನ್ಮಯರಾದವರು. ಅವರದೂ ಸಹಜ ಧ್ಯಾನಯೋಗ!

ಸಂತರು, ಜ್ಞಾನಿಗಳು ಬದುಕುವ ರೀತಿ ಬೇರೆಯೆ! ಅವರ ಅಂತರಂಗ ಧ್ಯಾನಪೂರ್ಣ. ಬಹಿರಂಗದಲ್ಲಿ ಕಾರ್ಯವ್ಯಾಪ್ತಿ. ಅಲ್ಲಮಪ್ರಭುಗಳು ದೇಶವನ್ನೆಲ್ಲ ತಿರುಗಾಡಿದರು, ನೂರಾರು ಸಾವಿರ ಜನರಿಗೆ ಉಪದೇಶಿಸಿದರು; ಜನರ ತಪ್ಪುತಡೆಗಳನ್ನು ತಿದ್ದಿದರು; ಸಾಧಕರಿಗೆ ಸರಿಯಾದ ಮಾರ್ಗದರ್ಶನ ಮಾಡಿದರು. ಹೊರಗಿಷ್ಟು ಅವ್ಯಾಹತವಾಗಿ ಕಾರ್ಯಶೀಲರಾದರು ಅವರ ಮನಸ್ಸು ಮಾತ್ರ ಬಯಲ ಭಾವಿಯಾಗಿತ್ತು! ಅವರು ಒಳಗೆಲ್ಲ ಬಟ್ಟಬಯಲು. ಹೊರಗೆ ಲೋಕಸಂಗ್ರಹರತರು. ಅವರದು ಭವ್ಯ ಬಾಳು, ದಿವ್ಯ ನಡೆ!

ಝೆನ್ ಗುರು. ಆತನ ಹತ್ತಿರ ಒಬ್ಬ ವಿದ್ವಾಂಸ ಬಂದ. "ಗುರುಗಳೇ, ನಾನು ಸತ್ಯ ಕಾಣಬೇಕು. ನಿರ್ವಾಣವನ್ನನುಭವಿಸಬೇಕು. ಅದಕ್ಕಾಗಿ ಸಾಧನೆ ಹೇಳಿ" ಎಂದು ವಿನಂತಿಸಿದ. ಗುರು ನುಡಿದರು : "ಹಾಗಾದರೆ ಈ ಬೆಟ್ಟದ ತುದಿಯಲ್ಲಿ ಕುಳಿತುಕೊ. ಏನು ಕಾಣುತ್ತದೆಯೋ ಅದನ್ನು ಧ್ಯಾನಚಿತ್ತದಿಂದ ನೋಡುತ್ತಿರು." ಸಾಧಕ ವಿದ್ವಾಂಸ ಕುಳಿತ ಸೂರ್ಯನ ನೋಡುತ್ತ. ಕೆಲ ಕ್ಷಣದಲ್ಲಿ ಸೂರ್ಯ ಮುಳುಗಿದ. ಚಂದ್ರ ಕಂಡ. ಚಂದ್ರನನ್ನು ಧ್ಯಾನಿಸತೊಡಗಿದ. ಕೆಲ ಗಂಟೆಗಳಲ್ಲಿ ಚಂದ್ರ ಮುಳುಗಿದ. ಮೇಘ ಆಕಾಶವನ್ನು ಆವರಿಸಿತು. ಎಲ್ಲೆಡೆ ಕರಾಳ ಕತ್ತಲೆ. "ಗುರುಗಳೇ, ನನಗೀಗ ಏನೂ ಕಾಣುತ್ತಿಲ್ಲ. ಏನು ಧ್ಯಾನಿಸಲಿ?" ಎಂದ. ಆಗ ಗುರುಗಳು ಹೇಳಿದರು "ಏನೂ ಕಾಣದಷ್ಟೇ? ಏನೂ ಕಾಣದಿರುವ ಆ ಶೂನ್ಯವನ್ನೇ

ಧ್ಯಾನಿಸು!" ಆತ ಶೂನ್ಯಧ್ಯಾನಕ್ಕೆ ತೊಡಗಿದ. ಕಣ್ಣು ತೆರೆದಿದೆ. ಮನಸ್ಸು ಶೂನ್ಯವಾಗಿದೆ. ನಿಸ್ತರಂಗವಾಗಿದೆ. ಪರಮ ಪ್ರಶಾಂತ ನಿರ್ವಾಣದ ಅನುಭವ ! ಅಲ್ಲಿ ನಾನು ಇಲ್ಲ ; ಅನ್ಯವಿಲ್ಲ. ಕಾಣುವ ಕಾಣದಿರುವ ಭಾವವಿಲ್ಲ. ಎಲ್ಲವೂ ನಿರ್ವಾಣವಾಗಿದೆ ! ಕೇವಲ ಪ್ರಜ್ಞೆ!

ಏನು ಕಾಣಿಸುತ್ತದೆ ಅದನ್ನು ನೋಡುವುದು. ಕರದ ಲಿಂಗ ನೋಡುವಾಗ ಲಿಂಗ ಕಾಣದೆ ಒಂದು ಮಗುವಿನ ಮುಖ ಕಂಡರೆ ಅದನ್ನೇ ನೋಡುವುದು. ಹೇಗೆ? ಲಿಂಗದ ಭಾವದಲ್ಲಿ. ರಾಗದ್ವೇಷಾದಿ ದ್ವಂದ್ವರಹಿತನಾಗಿ, ನಾನು ನನ್ನದು ಎಂಬ ಉಭಯ ಕಲ್ಪನೆ ಇರದೆ! ಆ ಕ್ಷಣಕ್ಕೆ ಮಗುವಿನ ಮುಖ ಸರಿದು ಹೆಂಡತಿಯ ಮುಖ ಬಂತೆನ್ನಿ. ಆಗಲೂ ಅಷ್ಟೆ ! ನಿರಾಮಯವಾಗಿ ನೋಡಿ, ಲಿಂಗದೃಷ್ಟಿಯಿಂದ ನೋಡಿ. ರಾಗವಿಲ್ಲದೆ, ದ್ವೇಷವಿಲ್ಲದೆ ! ಇಂತು ಯಾವ ಚಿತ್ರ ಮನಸ್ಸಿನಲ್ಲಿ ಕಂಡರೇನು? ಎಲ್ಲವನ್ನೂ ಹಾಗೆ ಪವಿತ್ರ ಧ್ಯಾನದೃಷ್ಟಿಯಿಂದ ನೋಡಿ. ಯಾವುದೂ ಬಾಧಕವಾಗದು. ಧ್ಯಾನವೃತ್ತಿ ವಿಚ್ಛಿನ್ನವಾಗದು. ಸಮಾಧಿ ಸಹಜ ಸಿದ್ಧ.

ಇನ್ನೊಂದು ಬಗೆಯ ಧ್ಯಾನಪದ್ಧತಿ ಅಲ್ಲಮರ ವಚನದಲ್ಲಿದೆ. ಅದು ಪ್ರಾಣಲಿಂಗ ಧ್ಯಾನ. ಲಿಂಗವನ್ನೊಮ್ಮೆ ನೋಡುವುದು, ತನ್ನನ್ನೊಮ್ಮೆ ಅರಿಯುವುದು. ಲಿಂಗವನ್ನು ನೋಡುವಾಗ ತಾನು ಕಾಣಬೇಕು, ತನ್ನನ್ನರಿವಾಗ ಲಿಂಗ ತೋರಬೇಕು. ತನ್ನೊಳಗೆ ಲಿಂಗ! ಲಿಂಗದೊಳಗೆ ತಾನು! ಈ ರೀತಿ ತೀವ್ರ ಸಾಧನೆ ನಡೆದರೆ ತಾನು, ಲಿಂಗ ಒಂದಾಗಿ ಕಾಣುವುದು. ಇದುವೇ ಪ್ರಾಣಲಿಂಗಾನುಭೂತಿ! ಇಂತಹ ಹಲವು ಧ್ಯಾನಪದ್ಧತಿಗಳ ನೋಡಿದ್ದೇವೆ. ಸಾರವಾಗಿ ಹೇಳುವುದಾದರೆ:

ಮೊದಲು ಪೃಥ್ವಿಯ ನೋಡುವುದು. ಅದನ್ನೂ ಮೀರಿ ಜಲವ ನೋಡುವುದು. ಅದನ್ನೂ ಮೀರಿ ಅಗ್ನಿಯ ನೋಡುವುದು. ಅದನ್ನೂ ಮೀರಿ ವಾಯುವ ನೋಡುವುದು. ಅದನ್ನೂ ಮೀರಿ ಆಕಾಶ ಈಕ್ಷಿಸುವುದು. ಆ ಆಕಾಶವನ್ನೂ ಮೀರಿ ನಿಂತಾಗ ಕಾಲ, ರಾಗಾದಿ ಭಾವನೆಗಳು ಮರೆಯಾಗುತ್ತವೆ. ಎಲ್ಲ ಮರೆಯಾದ ನಂತರ ಏನು ಅನುಭವಕ್ಕೆ ಬರುತ್ತದೆಯೋ ಅದೇ ಪರಮ ಆತ್ಮಾನುಭೂತಿ ! ಇದು ಪೃಥ್ವಿಯಿಂದ ಆತ್ಮನವರೆಗೆ ಏರುವ ಕ್ರಮ. ಇದು ಉದ್ಧರಣ. ಇದು ಧ್ಯಾನ. ಇದು ಅಂಗಸ್ಥಳಾರೋಹಣ. ಈ ಆತ್ಮಾನುಭೂತಿಯ ಪಡೆದು ಕ್ರಮಕ್ರಮವಾಗಿ ಏರಿದ ಮಾರ್ಗದಲ್ಲಿಯೇ ಕೆಳಗಿಳಿದು ಬಂದರೆ ಅದು ಅವತರಣ! ಲಿಂಗಸ್ಥಲಸಾಧನ! ಭಕ್ತನಿಂದ ಐಕ್ಯನವರೆಗೆ ಏರಿದವ ಸಾಮರಸ್ಯಯೋಗಿ. ಅಲ್ಲಿಂದ ಇಳಿದು ಬಂದವ ಶಿವಯೋಗಿ. ಅವನಿಂದ ಲೋಕಸಂಗ್ರಹ. ಆತ ಗುರು.

ಈ ಧ್ಯಾನಯೋಗದಲ್ಲಿರುವ ಚಿಂತನವಿಷ್ಟು: ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶವನ್ನು ಮೀರಿ ಯಾವ ವಸ್ತು ಇದೆ ಅದು ಭಗವಂತ. ಎಲ್ಲಿ ಹೋದರೆ ಕಾಲ ನಿಂತುಹೋಗುತ್ತದೆ ಅದು ದೇವರು. ಎಲ್ಲಿ ಹೋದರೆ ದೇಶ ಮರೆಯಾಗುತ್ತದೆ ಅದು ದೇವರು. ಎಲ್ಲಿ ಹೋದಾಗ ವಸ್ತು ಕಾಣಬರುವುದಿಲ್ಲ ಅದು ದೇವರು. ಅದು ನಿಷ್ಕಲ ದೇವರು. ಈ ನಿಷ್ಕಲ ದೇವನಿಂದಲೆ ಈ ಜಗತ್ತು ಬಂದಿದೆ. ಆದ್ದರಿಂದ ಇದು ಭಗವಂತನ ರೂಪು. ಈ ದೃಷ್ಟಿ ಸಮನಿಸಿದರೆ ಜಗತ್ತಿನಲ್ಲಿ ಭವ್ಯ ಭಗವತ್ ಬಾಳನ್ನು ಬಾಳುತ್ತೇವೆ. ಈ ಭಗವದ್ ಬದುಕೇ ಧ್ಯಾನಜೀವನ.

❑

# ನಾನು ಕಂಡ ಅಪರೂಪದ ಸ್ವಾಮೀಜಿ

**ಡಾ. ಎಲ್. ಬಸವರಾಜು**

1949-50ರ ಸಾಲಿನಲ್ಲಿ ಬಿ.ಎ. ಆನರ್ಸ್ ವಿದ್ಯಾಭ್ಯಾಸಕ್ಕೆಂದು ಮೈಸೂರಿಗೆ ಬಂದೆ. ಆಗಿನಿಂದಲೂ ನಾನು ಅವರನ್ನು ಬಲ್ಲೆ. ವಿದ್ಯಾಭ್ಯಾಸ ಮುಗಿಸಿ ಯುವರಾಜ ಕಾಲೇಜಿನ ಅಧ್ಯಾಪಕನಾದೆ. ಆ ಸಮಯದಲ್ಲಿ ಅವರ ಪರಿಚಯವಾಯಿತು. ಅಷ್ಟೊತ್ತಿಗಾಗಲೇ ಒಂದು ದಶಕಕ್ಕೂ ಮೀರಿದ ಅಲ್ಪಕಾಲದ ಆದರೆ ಮಹತ್ವದ ಅವರ ಸೇವೆ ಮೈಸೂರು ಸುತ್ತಮುತ್ತ ಹರಡಿತ್ತೆಂಬುದನ್ನು ಕೇಳಿ ತಿಳಿದಿದ್ದೆ. ಒಂದು ಹದಿಹರೆಯದ ಚೇತನ ತನ್ನದೆನ್ನುವುದನ್ನೆಲ್ಲಾ ತೊರೆದು ಇತರರನ್ನು ತಣಿಸುವ ಜ್ಞಾನಾನ್ನದಾಸೋಹಕ್ಕೆ ತೊಡಗಿತ್ತೆನ್ನುವುದು ಎಂಥ ಮಹತ್ತರವಾದ ವಿಚಾರ!

ಮಹಾರಾಜರಿಂದ ಆನೇಕರೋಟಿ ಜಾಗವನ್ನು ಕ್ರಯಕ್ಕೆ ತೆಗೆದುಕೊಂಡಾಗ ಅಲ್ಲಿ ಚಿಕ್ಕದೊಂದು ಮನೆಯಿತ್ತು. ಅಲ್ಲಿ ಅವರಿದ್ದರು. ಆವಾಗಲೇ ನನ್ನನ್ನು ಕರೆಯಿಸಿಕೊಂಡು ಉಪನ್ಯಾಸ ಮಾಡಿಸುತ್ತಿದ್ದರು. ಸಮಾಲೋಚನೆ ನಡೆಸುತ್ತಿದ್ದರು. ಸಮಾಲೋಚನೆ ಎಂದರೆ ಒಬ್ಬ ವಿದ್ವಾಂಸ ಒಂದು ದೊಡ್ಡ ಪರಂಪರೆಯ ಗುರು ಏನೇನು ಸಮಾಲೋಚಿಸಬಹುದೋ ಅದೆಲ್ಲಾ ನಮ್ಮಿಬ್ಬರ ನಡುವೆ ನಡೆಯುತ್ತಿತ್ತು. ಅರಮನೆ ಪಂಚಗವಿಮಠದ ಗೌರೀಶಂಕರ ಸ್ವಾಮಿಗಳು ಕಾಶಿಯಿಂದ ಬಂದು ಮೈಸೂರಿನಲ್ಲೇ ಉಳಿದಿದ್ದ ವೇಳೆಯಲ್ಲಿ ಅವರ ಬಳಿ ಇವರು, ಇವರ ಬಳಿ ಅವರು ಬಂದು ಹೋಗುತ್ತಿದ್ದುದು ನನಗೆ ಗೊತ್ತು. ರಾಜೇಂದ್ರ ಸ್ವಾಮಿಗಳ ಹಿರಿಯ ಗುರುವರ್ಯರಾದ ಮಂತ್ರಮಹರ್ಷಿಗಳವರೂ ಗೊತ್ತು. ಈಗಿನವರೂ ಗೊತ್ತು. ಅಕ್ಕಮಹಾದೇವಿಯ ಬಗ್ಗೆ ಗೌರೀಶಂಕರ ಸ್ವಾಮಿಗಳು ಒಂದು ಕಾವ್ಯ ಬರೆದಿದ್ದರು. ಅದು ಪೂರ್ಣಗೊಂಡ ಕೃತಿಯಲ್ಲವಾದರೂ ಅದನ್ನು ಬೆಳಕಿಗೆ ತರುವ ಹಿನ್ನೆಲೆಯಲ್ಲಿ ಸುತ್ತೂರಿನ ಅಂದಿನ ಆ ಹಿರಿಯ ಕಿರಿಯ ಗುರುದ್ವಯರು ನನ್ನೊಡನೆ ಚರ್ಚಿಸಿದ್ದರು. "ಘನಲಿಂಗಿದೇವರ ವಚನಗಳು" ಪುಸ್ತಕ ಹೊರತರುವಾಗಲೂ ಇದೇ ರೀತಿಯ ಸಮಾಲೋಚನೆ ನಡೆಸಿದ್ದೇನೆ. ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಅದನ್ನು ಅತ್ಯುತ್ತಮವಾಗಿ ಪರಿಷ್ಕರಿಸಿ ಸಂಪಾದಿಸಿ ಅತ್ಯುತ್ತಮ ಮುನ್ನುಡಿಯೊಡನೆ ಪ್ರಕಟಿಸಿದ್ದಾರೆ. ಧರ್ಮ ಸಾಹಿತ್ಯ ಮುಂತಾದ ವಿಚಾರಗಳಲ್ಲಿ ನಿಕಟ ಸಂಪರ್ಕ ಇಟ್ಟುಕೊಂಡಿದ್ದೆ. ಪ್ರೀತಿಯ ಶಿಷ್ಯನಾಗಿ, ವಿದ್ವಾಂಸನಾಗಿ ನನ್ನನ್ನು ವಿಶ್ವಾಸದಿಂದ ಕಾಣುತ್ತಿದ್ದರು. ಬಹಳ ದೊಡ್ಡ ಮನಸ್ಸಿನವರು. ನಾವು ಸ್ವಾಮಿಗಳನ್ನು ಕಂಡರೆ ಹೇಗೆ ಭಕ್ತಿ ಗೌರವ ಪ್ರೀತಿ ಇರುತ್ತಿತ್ತೋ ಹಾಗೆ ಅವರಿಗೆ ವಿದ್ವಜ್ಜನರನ್ನು ಕಂಡರೆ ಅಪಾರ ಪ್ರೀತಿ. ಅವರ ಬಳಿ ಕುಳಿತಿದ್ದೆ ಎನ್ನುವುದೇ ನನಗೆ ಜೀವನಸಾರ್ಥಕ್ಯ ದೃಷ್ಟಿಯಿಂದ ಮಹತ್ತರವಾದುದು.

ಅವರು ಓದಲು ಮೈಸೂರಿಗೆ ಬಂದ ಕೆಲವೇ ವರ್ಷಗಳಲ್ಲಿ ಸುತ್ತೂರಿನ ಸ್ವಾಮಿಗಳು ಮೈಸೂರಿನಲ್ಲಿ ಒಂದು ಹಾಸ್ಟೆಲ್ ತೆರೆದರು ಎನ್ನುವುದು ಸಾಮಾನ್ಯ ಸಂಗತಿಯಲ್ಲ. ಮುಂದೆ ಅನೇಕ ಹಾಸ್ಟೆಲ್, ಶಿಕ್ಷಣ ಸಂಸ್ಥೆಗಳು, ವಿವಿಧ ಸಂಘಸಂಸ್ಥೆಗಳು, ಆಸ್ಪತ್ರೆ – ಹೀಗೆ ಸಮಾಜ ಹಿತದೃಷ್ಟಿಯ ಆಶಯದೊಡನೆ ಜೆಎಸ್‌ಎಸ್ ನಾಮಫಲಕ ಹೊತ್ತ ಸಂಘಸಂಸ್ಥೆಗಳ ಸಮೂಹವೇ ಮೈಸೂರು ನಗರವೋ ಎಂಬಂತಾಗಿದೆ. ಇದು ಹೀಗೆ ಮಹತ್ತಾಗಿ ಬೆಳೆಯಲು ಸುತ್ತೂರು ಪರಂಪರೆಯೂ ಒಂದು ಕಾರಣ. ಶ್ರೀ ಶಿವರಾತ್ರಿ ರಾಜೇಂದ್ರರು ಬೆಳೆದ ಬೀಜವನ್ನು ತಿಂದು ಮುಗಿಸಲಿಲ್ಲ, ಬಿತ್ತಿದರು. ಮತ್ತೆ ಮತ್ತೆ ಹೆಚ್ಚು ಬಿತ್ತಿದರು. ಮತ್ತೆಯೂ ಬಿತ್ತಿ ಬಿತ್ತಿ ಬೆಳೆದರು. ಇದರಿಂದ ಇದೇನು ಮೈಸೂರು ನಗರವೋ ಸುತ್ತೂರು ಹಾಸ್ಟೆಲ್, ವಿದ್ಯಾಸಂಸ್ಥೆ, ಸಂಘಸಂಸ್ಥೆಗಳ ಪುಣ್ಯಕ್ಷೇತ್ರವೋ ಎನ್ನುವಂತಾಯಿತು. ಮಠ ಎಂದರೇನು? ಛಾತ್ರನಿಲಯ ಎಂದರ್ಥ. ಅವರು ಬರೇ ಛಾತ್ರನಿಲಯ ಮಾಡಲಿಲ್ಲ. ಇಡೀ ಮೈಸೂರನ್ನೇ ಛಾತ್ರನಿಲಯ ಮಾಡಿದರು. ಗೌರೀಶಂಕರರು ಮತ್ತು ಶಿವರಾತ್ರಿ ರಾಜೇಂದ್ರರು ಇಬ್ಬರೂ ಮನೆಯಿಲ್ಲದ ಮಠಾಧಿಪತಿಗಳು. ಮೈಸೂರು ಸಂಸ್ಥಾನದ ಮಹಾಗುರುವರ್ಯರು. ಮೈಸೂರು ಪ್ರಜೆಗಳ ಜಗದ್ಗುರುಗಳಾದರು.

ಇದೆಲ್ಲಾ ಸಾಧಿಸಿದ ರಾಜೇಂದ್ರ ಸ್ವಾಮಿಗಳ ಶಕ್ತಿ, ಶಕ್ತಿಗೂ ಮೀರಿದ ಶ್ರಮ, ಶ್ರಮಕ್ಕೂ ಮೀರಿದಂಥ ಶಿಷ್ಯಪ್ರೇಮ ಬಹಳ ಅಪೂರ್ವವಾದದ್ದು. ಈ ಮಾತಿಗೆ ಇಂದು ಸುತ್ತೂರು ಮಠ ಸಾಗರಾಂತವಾಗಿ ಬೆಳೆದಿರುವುದೇ ಸಾಕ್ಷಿ. ಹೀಗೆ ನಾನು ಯುವಕನಾಗಿದ್ದಾಗಿನಿಂದ ಈಗ ಮುದುಕನಾದಾಗಲೂ ಅವರ ಪ್ರೀತಿ ಗೌರವ ತ್ಯಾಗದ ಬಗ್ಗೆ ಮೆಚ್ಚಿಗೆ ಎಂದಿನಂತೆಯೇ ಇದೆ. ಅವರು ಇನ್ನಷ್ಟು ಕಾಲ ಬದುಕಬೇಕಿತ್ತು ಎನ್ನುವುದು ನಮ್ಮದೇ ಅಲ್ಲ, ಇಡಿಯಾಗಿ ಬೆಳೆಯಬೇಕಾದ ತರುಣರ ಆಸೆಯೂ ಆಗಿತ್ತು. ಆಸ್ತಿ ಮೇಲೆ ಆಸ್ತಿ ಮಾಡುವುದು ಸುಲಭ. ಆದರೆ ಮೊಟ್ಟಮೊದಲಿನ ಆಸ್ತಿ ಮಾಡುವುದೆಂದರೆ ಅದು ದೈವಕೃಪೆ. ಸ್ವಾಮಿಯ ಕೃಪೆ ಭಕ್ತರ ಪ್ರೇಮ ಇಲ್ಲದೆ ಇಂತಹದ್ದು ಸಾಧ್ಯವಿಲ್ಲ. ಹೀಗೆಲ್ಲಾ ಮಾತನಾಡಿ ಮಾನವಪ್ರೇಮವನ್ನೇ ಮುಗಿಸುವುದಕ್ಕಾಗುವುದಿಲ್ಲ ಎಂದ ಮೇಲೆ ಸನ್ಯಾಸಿಯ ತಪ ಯೋಗವನ್ನು ಬಲ್ಲಂಥವನು ರಾಜೇಂದ್ರರ ಶಿಷ್ಯವಾತ್ಸಲ್ಯವನ್ನು ಮಾತನಾಡಿ ಮುಗಿಸಲು ಸಾಧ್ಯವೇನು? ಅವರು ಬರೇ ಮಾತನಾಡಿದವರಲ್ಲ. ಏನು ಒಂದು ಜೀವಿ ತ್ಯಾಗದಿಂದ ಮಾಡಬಹುದು ಎನ್ನುವುದನ್ನು ತೋರಿಸಿಕೊಟ್ಟವರು. ಇದೇ ಅವರ ಸಂದೇಶ. ಒಬ್ಬ ಸನ್ಯಾಸಿ ಯೋಗ ಮಾಡುತ್ತಾನೆ ಎಂದರೆ ಮೂಗು ಹಿಡಿದು ಕೂರುವುದಲ್ಲ. ತನ್ನ ತನು-ಮನ-ಧನವನ್ನು ಶಿಷ್ಯಕೋಟಿಗೆ ಹಂಚಿ ಮುಕ್ತ ಮನಸ್ಸಿನವನಾಗಿರುತ್ತಾನೆ. ನಿರಂಜನನಾಗಿರುತ್ತಾನೆ. ಆದ್ದರಿಂದಲೇ ನಾವು ಅವರನ್ನು ಶ್ರೀಮನ್ನಿರಂಜನ ಜಗದ್ಗುರು ಇತ್ಯಾದಿ ಸೇರಿಸಿ ಸಂಬೋಧಿಸುವುದು. ಅವರು ಇಂದು ಇಲ್ಲದ್ದರಿಂದಲೇ ಅವರನ್ನು ನಾವು ಅಧಿಕವಾಗಿ ಸ್ಮರಿಸಿಕೊಳ್ಳುತ್ತಿದ್ದೇವೆ. ಆದರೂ ಅದು ವಾಸ್ತವಕ್ಕಿಂತ ಕಡಿಮೆ. ನಾನು ಕಂಡ ಅಪರೂಪದ ಸ್ವಾಮೀಜಿಯವರಲ್ಲಿ ಅವರೊಬ್ಬರು.

**ಕೃಪೆ : 'ಘನ–ಮನ' (ಜೆಎಸ್‌ಎಸ್ ಗ್ರಂಥಮಾಲೆ ಪ್ರಕಟಣೆ)**

# ಆತ್ಮಾವಲೋಕನಕ್ಕೆ ಸಕಾಲ

**ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ**

ಶರಣ ಸಾಹಿತ್ಯ ಪರಿಷತ್ತಿನ ಸ್ಥಾಪಕರಾದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳನ್ನು ನೆನೆಯುತ್ತಾ, ಶರಣ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರಾದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಗೆ ಗೌರವಪೂರ್ವಕ ನಮಸ್ಕಾರಗಳು.

ಇಲ್ಲಿ ನೆರೆದಿರುವ ಹರಗುರುಚರಮೂರ್ತಿಗಳೆ, ಜನಪ್ರತಿನಿಧಿಗಳೆ, ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ಘಟಕದ ಪದಾಧಿಕಾರಿಗಳೇ, ಸಾಹಿತ್ಯಾಭಿಮಾನಿಗಳೆ,

ಸ್ವಂತ ಆಸಕ್ತಿಯಿಂದ ವಚನಗಳನ್ನು ಓದಿಕೊಂಡಿರುವ ನನಗೆ ಮೈಸೂರು ನಗರದ ಶರಣಸಾಹಿತ್ಯ ಪರಿಷತ್ತಿನ ಮೊದಲ ಸಮ್ಮೇಳನದ ಅಧ್ಯಕ್ಷನಾಗುವ ಸಂದರ್ಭ ಬಂದೀತೆಂಬ ಕಲ್ಪನೆಯೂ ಇರಲಿಲ್ಲ. ಈ ಗೌರವದ ಸ್ಥಾನವನ್ನು ಒಪ್ಪಿಕೊಂಡು ಈಗ ಮಾತಾಡುತ್ತಿರುವುದಕ್ಕೆ ಮೂರು ಕಾರಣಗಳಿವೆ. ಮೊದಲನೆಯದು, ಈ ಆಹ್ವಾನವನ್ನು ನೀಡಿದ ಆಪ್ತರ ಮಾತಿಗೆ ಇಲ್ಲವೆನ್ನಲಾಗದ ಗೆಳೆತನ. ಎರಡನೆಯದು, ಶರಣಧರ್ಮ, ಶರಣಸಾಹಿತ್ಯ, ಶರಣ ಸಂಘಟನೆಗಳಲ್ಲಿ ಆಸಕ್ತರಾದವರೊಡನೆ ನನ್ನ ಮನಸ್ಸಿನ ಮಾತುಗಳನ್ನು ಮುಕ್ತವಾಗಿ ಆಡಬಹುದು ಅನ್ನುವ ಆಸೆ. ಮೂರನೆಯದು, ಎಪ್ಪತ್ತರ ದಶಕದ ಮಧ್ಯಭಾಗದಲ್ಲಿ ನನ್ನ ತಂದೆ ಓ.ಎನ್. ಲಿಂಗಣ್ಣಯ್ಯನವರು, ಪಂಡಿತಾರಾಧ್ಯರು, ಶಿವನಂಜಪ್ಪನವರು ಮೊದಲಾದವರು ಶಿವರಾತ್ರಿ ರಾಜೇಂದ್ರಸ್ವಾಮಿಗಳವರನ್ನು ಭೇಟಿ ಮಾಡಿ ಶರಣ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸುವ ಅಗತ್ಯವನ್ನು ಕುರಿತು ಮಾತನಾಡಿದ್ದರು. ಅದು ರೂಪವನ್ನೂ ಪಡೆಯುವ ಹೊತ್ತಿಗೆ ನನ್ನ ತಂದೆಯವರು ಇಲ್ಲವಾದರು. ಆನಂತರ ಡಾ. ಎಚ್. ತಿಪ್ಪೇರುದ್ರ ಸ್ವಾಮಿ, ಗೊರುಚ, ಅಪ್ಪಾರಾವ್ ಅಕ್ಕೋಣೆ, ಬಸವರಾಜ ಸಾದರ, ಪ್ರೊ. ಮಲೆಯೂರು ಗುರುಸ್ವಾಮಿ, ಈಗ ಡಾ. ಸೋಮಶೇಖರ್ ಅವರುಗಳ ನೇತೃತ್ವದಲ್ಲಿ ಶರಣ ಸಾಹಿತ್ಯ ಪರಿಷತ್ತು ಬೆಳೆದು ನಾಡಿನಾದ್ಯಂತ ಶಾಖೆಗಳನ್ನು ಹೊಂದಿರುವುದು

---

ದಿನಾಂಕ 23.3.2025ರಂದು ಮೈಸೂರು ಕಲಾಮಂದಿರದಲ್ಲಿ ನಡೆದ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣ.

ಮಾತ್ರವಲ್ಲದೆ ಅಖಿಲ ಭಾರತ ವ್ಯಾಪ್ತಿಯನ್ನೂ ಪಡೆದಿದೆ. ಇಂಥ ಸಂಸ್ಥೆಯ ಜನ್ಮಸ್ಥಳವಾದ ಮೈಸೂರಿನ ಜಿಲ್ಲಾ ಮತ್ತು ನಗರ ಘಟಕಗಳು ಏರ್ಪಡಿಸಿರುವ ಈ ಸಮ್ಮೇಳನದ ಅಧ್ಯಕ್ಷನಾಗುವ ಅವಕಾಶ ಸಾಧಕನೂ ಅಲ್ಲದ, ಅನುಭಾವಿಯೂ ಅಲ್ಲದ, ಒಪ್ಪಿತ ಅರ್ಥದಲ್ಲಿ ಭಕ್ತನೂ ಅಲ್ಲದ, ಕೇವಲ ವಚನಗಳ ನಡುವೆ ಕಳೆದು ಹೋಗಿರುವ ನನಗೆ ದೊರೆತದ್ದು ನನ್ನ ತಂದೆಯವರ ಕನಸು ನನಸಾದ ಸಂತೋಷದಲ್ಲಿ ಪಾಲ್ಗೊಳ್ಳುತ್ತಿರುವ ತೃಪ್ತಿಯನ್ನು ನನಗೆ ತಂದುಕೊಟ್ಟಿದೆ.

೧

ಶರಣ ಸಾಹಿತ್ಯದ ನಿಜವಾದ ವಿಸ್ತಾರ ಹಾಗೂ ಪ್ರಾಮುಖ್ಯಗಳು ನಮಗಿನ್ನೂ ಸಂಪೂರ್ಣವಾಗಿ ಅರಿವಾಗಿಲ್ಲ. ಶರಣರು ಸೃಷ್ಟಿಸಿದ ಸಾಹಿತ್ಯವನ್ನು ಸಂಭ್ರಮಿಸಿ ಹೆಮ್ಮೆ ಪಡುತ್ತೇವೆಯೇ ಹೊರತು ಅದು ಬದುಕಿಗೆ ಎಷ್ಟು ಮುಖ್ಯ ಅನ್ನುವತ್ತ ನಮ್ಮ ಗಮನ ಹೆಚ್ಚಾಗಿ ಹರಿದಿಲ್ಲ. ಅದು ಎತ್ತುವ ಪ್ರಶ್ನೆಗಳನ್ನು ಕುರಿತು ನಮ್ಮಲ್ಲಿ ಇನ್ನೂ ಅರಿವು ಮೂಡಿದಂತೆ ಕಾಣುವುದಿಲ್ಲ. ಆಧುನಿಕಪೂರ್ವ ಕಾಲದಲ್ಲೂ ನಮ್ಮ ಕಾಲದಲ್ಲೂ ಶರಣರ ಬಗ್ಗೆ ಸೃಷ್ಟಿಯಾದ ಸಾಹಿತ್ಯ ದೊಡ್ಡ ಪ್ರಮಾಣದಲ್ಲಿದೆ. ಆದರೆ ಈ ಸಾಹಿತ್ಯದ ಬಗ್ಗೆ ಭಕ್ತಿ, ಅಭಿಮಾನಗಳೇ ಮೇಲುಗೈಯಾಗಿದೆಯೇ ಹೊರತು ಅವು ಎತ್ತುವ ಪ್ರಶ್ನೆಗಳನ್ನು ಕುರಿತು ನಾವು ಚರ್ಚಿಸಿದ್ದು ಕಡಿಮೆಯೇ. ನಮ್ಮ ಹಿರಿಯರು ಸೃಷ್ಟಿಸಿರುವ ಸಂಪತ್ತನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವುದಿರಲಿ, ಅದು ಎಷ್ಟು ಅಮೂಲ್ಯವೆಂಬ ಅರಿವೂ ಇಲ್ಲದ ಮುಗ್ಧ ಮಕ್ಕಳಂತೆ ಆಗಿದ್ದೇವೆ ಎಂದು ಒಮ್ಮೊಮ್ಮೆ ಅನ್ನಿಸುತ್ತದೆ.

ಸುಮಾರು ಎರಡು ಸಾವಿರ ವರ್ಷಗಳಷ್ಟು ಇತಿಹಾಸ ಹೊಂದಿರುವ ಕನ್ನಡದಲ್ಲಿ ಮೊದಲ ದೊಡ್ಡ ಪಲ್ಲಟ ನಡೆದದ್ದು ಹನ್ನೆರಡನೆಯ ಶತಮಾನದ ಶರಣರ ನಡೆ ಮತ್ತು ನುಡಿಗಳ ಮೂಲಕ. ಅದು ಕನ್ನಡದ ಬದುಕು ಬದಲಾಗುವಂತೆ ಮಾಡಿತು. ಹಾಗೆ ಬದಲಾದದ್ದು ಮತ್ತೆ ಹಳೆಯ ಜಾಡನ್ನೇ ಹಿಡಿದದ್ದು ಮಾತ್ರ ದುರಂತ. ಹನ್ನೆರಡನೆಯ ಶತಮಾನದ ಆ ಸುಮಾರು ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಎಷ್ಟೆಲ್ಲ ದೊಡ್ಡ ಬದಲಾವಣೆಗಳಾದವು! ನಾನು ಮತ್ತು ನನ್ನ ಅನುಭವ ಅನ್ನುವುದು ಕನ್ನಡದಲ್ಲಿ ಮೊಟ್ಟಮೊದಲು ನುಡಿರೂಪ ತಾಳಿತು. ವಚನಗಳಲ್ಲಿ ಕಾಣುವಷ್ಟು 'ನಾನು', 'ನನ್ನ' ಎಂಬ ಉತ್ತಮಪುರುಷದ ಬಳಕೆ ಅದುವರೆಗಿನ ಕನ್ನಡದಲ್ಲಿ ಇಲ್ಲವೇ ಇಲ್ಲವೆಂಬಷ್ಟು ಕಡಿಮೆ. ಈ 'ನಾನು' ಬೇರೆ ಬೇರೆ ಕಸುಬುಗಳನ್ನು ಮಾಡುತ್ತಿದ್ದ, ಬೇರೆ ಬೇರೆ ಸಾಮಾಜಿಕ ವಲಯಗಳಿಗೆ ಸೇರಿದ, ಜಾತಿಗಳ ಜನರ ಅನುಭವದಿಂದ ರೂಪು ಪಡೆದು ಹೊಮ್ಮಿದ ಮಾತು. ಧರ್ಮವೆಂಬುದು ಕೇವಲ ಆಚರಣೆಗಳ ಮೊತ್ತವಲ್ಲ, ದೇವರು ಎಲ್ಲೋ ಇರುವ ವ್ಯಕ್ತಿಯೋ, ಕಾಣಬಹುದಾದ, ಹಿಡಿಯಬಹುದಾದ ವಸ್ತುವೋ ಅಲ್ಲ. ನಮಗೆ ಬೇಕಾದ

ದೇವರನ್ನು ನಾವೇ ಇಷ್ಟದೈವವಾಗಿ ಸೃಷ್ಟಿ ಮಾಡಿಕೊಳ್ಳುತ್ತೇವೆ. ದೇವರು ಕೂಡ ಮನುಷ್ಯನಿಗೆ ಆಗಬೇಕಾದ ಅನುಭವವೇ ಹೊರತು ಬೇರೇನೂ ಅಲ್ಲ ಎಂದು ಶರಣರು ಹೇಳಿದರು.

ಮಾಗಿಯ ಹುಲ್ಲಿನ ಸೋಂಕಿನಂತೆ
ತನು ಪುಳಕಿತಳಾದಳವ್ವೆ.
ನುಡಿ ತೊದಳು ಆತನ ಒಲವೆ ಆಧಾರವಾಗಿದ್ದಳವ್ವೆ.
ಬಿಳಿಯ ತುಂಬಿ ಕುಂಕುಮ ರಸದಲ್ಲಿ ಬಂಡುಂಡಂತೆ.
ಮಹಾಲಿಂಗ ಗಜೇಶ್ವರನಲ್ಲಿ
ತನ್ನಲ್ಲಿ ತಾನೆ ರತಿಯಾಗಿರ್ದಳವ್ವೆ

ಎಂಬ ಗಜೇಶ ಮಸಣಯ್ಯನವರ ವಚನವನ್ನೇ ನೋಡಿ. ದೇವರ ಅನುಭವ 'ಮಾಗಿಯ ಹುಲ್ಲಿನ ಸೋಂಕಿನಂತೆ' ಎಂಬ ವರ್ಣನೆಯೇ ಬಹಳ ಆಪ್ತವಾಗಿದೆ. 'ಗುಡಿಸಿದ ಹಿಕ್ಕೆಯಲ್ಲಿ ಬಂದು ಸಿಕ್ಕಿದೆಯಲ್ಲಾ' ಎಂಬ ವೀರಗೊಲ್ಲಾಳರ ವಚನ ದೇವರ ಬಗ್ಗೆ ಅಚ್ಚರಿಯನ್ನು ವ್ಯಕ್ತಪಡಿಸುತ್ತದೆ. ಮಾದಾರ ಧೂಳಯ್ಯನವರು ಅಟ್ಟೆಯ ಚುಚ್ಚುವ ಉಳಿಯ ಮೊನೆಯಲ್ಲಿ ದೇವರನ್ನು ಕಾಣುತ್ತಾರೆ. ಬಸವಣ್ಣನವರಂತೂ ಜಗದಗಲ, ಮುಗಿಲಗಲ, ಮಿಗೆಯಗಲವಾದ, ಪಾತಾಳದಿಂದ ಅತ್ತತ್ತ ಶ್ರೀಪಾದವೂ ಬ್ರಹ್ಮಾಂಡದಿಂದ ಅತ್ತತ್ತ ಶ್ರೀಮಕುಟವೂ ಇರುವ ತಮ್ಮ ಕೂಡಲಸಂಗಮನನ್ನು ಅಂಗೈಯ ಚುಳುಕಿನಲ್ಲಿ ಕಾಣುತ್ತಾರೆ. ಯಜ್ಞ ಯಾಗಗಳನ್ನು ಮಾಡಿ, ಬಲಿಯನ್ನು ಕೊಟ್ಟು, ಪರಲೋಕದ ದೈವಗಳನ್ನು ಒಲಿಸಿಕೊಳ್ಳುವುದು ಅಗತ್ಯವಿಲ್ಲ, ದೊಡ್ಡ ದೇವಸ್ಥಾನಗಳಲ್ಲಿ ವೈಭವೋಪೇತವಾದ ಪೂಜೆಯನ್ನು ಮಾಡಿಸಿ, ದೇವರನ್ನು ದರ್ಶನ ಮಾಡುವ ಅಗತ್ಯವಿಲ್ಲ. ಕಾಶಿ ರಾಮೇಶ್ವರಗಳ ತೀರ್ಥಯಾತ್ರೆ ಅಗತ್ಯವಿಲ್ಲ, ದೇವರನ್ನು ನಾವಿರುವಲ್ಲಿಯೇ ನಮ್ಮ ಅನುಭವಕ್ಕೆ ತಂದುಕೊಳ್ಳಬೇಕು ಎಂದು ಶರಣರು ಹೇಳಿಕೊಟ್ಟರು. ಪುರಾಣಗಳ ಶಿವನಲ್ಲ, ಆಚರಣೆಗಳಿಗೆ ಒಲಿಯುವ ದೇವರಲ್ಲ, ಕಣ್ಣಿಗೆ ಕಣ್ಣು ಬೇಡುವ ದೇವರಲ್ಲ, ಬುದ್ಧಿಪೂರ್ವಕವಾಗಿ ಶ್ರಮಪಟ್ಟು ತಿಳಿಯಬೇಕಾದ ತತ್ವಚಿಂತನೆಯ ದೇವರಲ್ಲ, ತನ್ನ ಕಸುಬಿಗೆ, ತನ್ನ ವ್ಯಕ್ತಿತ್ವಕ್ಕೆ ಹೊಂದುವ ಸದಾ ನಮ್ಮ ದೇಹದ ಮೇಲೇ ಇರುವ ನಮ್ಮ ನಮ್ಮ ಇಷ್ಟದೈವವನ್ನು ಜನಕ್ಕೆ ನೀಡಿದ್ದು ಶರಣರ ಕ್ರಾಂತಿಯ ದೊಡ್ಡ ಸಾಧನೆ.

'ಎನಗೆ ಕಾಯವಿಲ್ಲದಿದ್ದಡೆ ಚೆನ್ನಮಲ್ಲಿಕಾರ್ಜುನ ಒಲಿಯುವ ಪರಿಯೆಂತು' ಎಂದು ಅಕ್ಕಮಹಾದೇವಿ ಕೇಳುತ್ತಾರೆ.

ಮನ ಮನ ಬೆರಸಿದಲ್ಲಿ ತನು ಕರಗದಿದ್ದಡೆ,
ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದಡೆ,
ಕಂಡಾಗಳಶ್ರುಜಲಂಗಳು ಸುರಿಯದಿದ್ದಡೆ,

ನುಡಿವಲ್ಲಿ ಗದ್ಗದಂಗಳು ಪೊಣ್ಮದಿದ್ದಡೆ,
ಕೂಡಲಸಂಗಮದೇವರ ಭಕ್ತಿಗಿದು ಚಿಹ್ನ
ಎನ್ನಲ್ಲಿ ಇವಿಲ್ಲಾಗಿ, ಆನು ಡಂಬಕ ಕಾಣಿರೇ.

ಎಂದು ಬಸವಣ್ಣನವರು ಹೇಳುತ್ತಾರೆ. 'ಈರೇಳು ಭುವನಂಗಳು ಕಣ್ಣ ಕರಿಯ ನಾಳದೊಳಡಗಿದ್ದವು' ಎಂದು ಅಲ್ಲಮಪ್ರಭು ನುಡಿಯುತ್ತಾರೆ. ಈ ಉದಾಹರಣೆಗಳೇ ಸಾಕು, ಭಕ್ತಿಯ ಭಾವವಿರಲಿ, ಐಕ್ಯದ ಅನುಭವವಿರಲಿ, ಸೃಷ್ಟಿಯನ್ನು ಕುರಿತ ತಾತ್ವಿಕ ಚಿಂತನೆಯೇ ಇರಲಿ, ಅವೆಲ್ಲವೂ ದೇಹದ ಮೂಲಕವೇ ಆಗಬೇಕು. ಅಧ್ಯಾತ್ಮವೆಂದರೆ ದೇಹವನ್ನು ನಿರ್ಲಕ್ಷಿಸಿದ ಸಾಧನೆಯಲ್ಲ ; ದೇಹವು ದೇವಾಲಯದಷ್ಟೇ, ಅಥವಾ ದೇವಾಲಯಕ್ಕಿಂತ ಪವಿತ್ರ ಅನ್ನುವುದು ಶರಣರ ನಿಲುವು.

ಶರಣರು ವಿವರಿಸಿದ ದಿನನಿತ್ಯದ ವರ್ತನೆಗಳನ್ನೇ ನೋಡಿ. ಕೊಂಡಗುಳಿ ಕೇಶಿರಾಜ ಮತ್ತು ಪಾಲ್ಕುರಿಕೆ ಸೋಮನಾಥ ಪಟ್ಟಿ ಮಾಡುವ ಅರುವತ್ತುನಾಲ್ಕು ಶೀಲಗಳಲ್ಲಿ ಮುಖ್ಯವಾದ ಕೆಲವು ಹೀಗಿವೆ: ಜಾತಿಸೂತಕ, ಜನನಸೂತಕ, ರಜಸ್ಸೂತಕ, ಪ್ರೇತಸೂತಕ, ಉಚ್ಚಿಷ್ಟ ಸೂತಕ – ಈ ಐದು ಸೂತಕಗಳನ್ನು ಪಾಲಿಸಬಾರದು; ಶುಭವಾರ, ಶುಭ ತಿಥಿ, ಶುಭಲಗ್ನ, ಮುಂತಾದ ಜೋತಿಷಿಗಳು ಪ್ರತಿಪಾದಿಸುವ ಕರ್ಮಕಾಂಡವನ್ನು ತ್ಯಜಿಸಬೇಕು; ಸೋಮವಾರ, ವ್ಯತೀಪಾತ (ಸೋಮವಾರದಂದು ಬರುವ ಹುಣ್ಣಿಮೆ), ಸಂಕ್ರಾಂತಿ, ಶಿವರಾತ್ರಿ, ಗ್ರಹಣಕಾಲದಲ್ಲಿ ಉಪವಾಸ ಮುಂತಾದ ವ್ರತಗಳನ್ನು ಆಚರಿಸಬಾರದು; ತೀರ್ಥಕ್ಷೇತ್ರಗಳಿಗೆ ಸ್ಥಾವರಲಿಂಗ ಪೂಜೆ ಮಾಡುವ ಉದ್ದೇಶದಿಂದ ಹೋಗಬಾರದು ಮತ್ತು ಇರುವುದೆಲ್ಲವೂ ಶಿವನೆಂದು ತಿಳಿದರೂ ಜಗತ್ತು ಮಿಥ್ಯೆಯೆಂಬ ನಿಲುವನ್ನು ಒಪ್ಪಿಕೊಳ್ಳಬಾರದು ಎಂಬ ಶೀಲಗಳನ್ನು ಹೇಳುತ್ತಾರೆ. ಇದಕ್ಕೆ ಬದಲಾಗಿ ಇಲ್ಲದ ಸಂಗತಿಯನ್ನು ನುಡಿಯುವ ಮಾತನ್ನು ಶಬ್ದಸೂತಕವೆನ್ನುತ್ತಾರೆ. ಬಲಿ ಕೊಡುವ ಕುರಿ ಕಣ್ಣೀರು ಸುರಿಸಿದರೆ ಕೂಡಲಸಂಗಮ ತಕ್ಕದ್ದು ಮಾಡುವ ಅನ್ನುತ್ತಾರೆ. ಇಂದಿನ ದಿನವೇ ಶುಭದಿನವೆನ್ನುತ್ತಾರೆ. ಕಾಯವೇ ಕೈಲಾಸವೆನ್ನುತ್ತಾರೆ. ಇಂಥವನ್ನು ಮನಃಪೂರ್ವಕವಾಗಿ ಆಚರಣೆಗೆ ತಂದರೆ ಮನಸ್ಸು ಎಷ್ಟೊಂದು ಜಂಜಡ, ತಿಕ್ಕಾಟಗಳಿಂದ ಪಾರಾಗುತ್ತದೆ ಅಲ್ಲವೇ !

ಕೊಂಡಗುಳಿ ಕೇಶಿರಾಜ ಹನ್ನೆರಡನೆಯ ಶತಮಾನದ ಕೊನೆಯ ಭಾಗದವನು, ಪಾಲ್ಕುರಿಕೆ ಸೋಮನಾಥ ಹದಿಮೂರನೆಯ ಶತಮಾನದ ಮಧ್ಯಭಾಗದವನು. ಅವರು ಪಟ್ಟಿ ಮಾಡುವ ಶೀಲಗಳನ್ನು ನೋಡಿದರೆ ಬಸವಾದಿ ಶರಣರ ಕ್ರಾಂತಿ ಆಗಲೇ ಸ್ಥಾಪಿತ ಹಿತಾಸಕ್ತಿಯ ಮತವಾಗುತ್ತಿತ್ತೋ ಅನ್ನುವ ಪ್ರಶ್ನೆ ಮೂಡುತ್ತದೆ. ಯಾಕೆಂದರೆ ಅವರು ಕೊಡುವ ಶೀಲಗಳ ಪಟ್ಟಿಯಲ್ಲಿ ಶಿವಭಕ್ತರಲ್ಲಿ ಜಾತಿಭೇದ ಎಣಿಸಬಾರದು ಎನ್ನುವ ಶೀಲವೂ ಸೇರಿದೆ. ಮನುಷ್ಯರೆಲ್ಲರ ಅನುಭವಕ್ಕೆ ಸಲ್ಲುವ ದೇವರನ್ನು ತೋರಿದ, ಎಲ್ಲರಿಗೆ ಆಗುವ ಅನುಭವಗಳ ಆಧಾರದ

ಮೇಲೆ ಹದವರಿತ, ಹದುಳದ ಬಾಳುವೆಯ ದಾರಿಯನ್ನು ತೋರಿದ ಬಸವಾದಿ ಶರಣರ ವಿಶಾಲ ಮನೋಧರ್ಮ ಆಗಲೇ ಕುಂಠಿತವಾಗತೊಡಗಿತ್ತೇ ಅನ್ನುವ ಪ್ರಶ್ನೆಯೂ ಮೂಡುತ್ತದೆ.

ಇಂದು ನಾವೆಲ್ಲರೂ ಬಹಳ ಸುಲಭವಾಗಿ ಹನ್ನೆರಡನೆಯ ಶತಮಾನವೆಂದು, ಕಣ್ಣಾರೆ ಕಂಡವರಂತೆ ಮಾತಾಡುತ್ತೇವೆ. ಆದರೆ ಇಪ್ಪತ್ತನೆಯ ಶತಮಾನದಲ್ಲಿ ಎಸ್. ಶಿವಣ್ಣನವರಂಥ ಹಸ್ತಪ್ರತಿ ವಿದ್ವಾಂಸರು, ಕಲ್ಬುರ್ಗಿಯವರಂಥ ಸಂಶೋಧಕರು ತಿಳಿಸಿಕೊಟ್ಟಿರುವ ಹಾಗೆ ಒಬ್ಬೊಬ್ಬ ವಚನಕಾರರ ಪ್ರತ್ಯೇಕ ಹಸ್ತಪ್ರತಿಗಳು ನಮಗೆ ದೊರೆತಿಲ್ಲ, ಸ್ತೋತ್ರ ವಚನ, ಆಚರಣೆಯ ವಚನ, ಸಕಲ ಪುರಾತನರ ವಚನ, ಬೆಡಗಿನ ವಚನ, ಶೀಲಸಂಪಾದನೆಯ ವಚನ, ಶೂನ್ಯಸಂಪಾದನೆ ಇಂಥ ಬೇರೆ ಬೇರೆ ಸಂಕಲನಗಳಲ್ಲಿ ವಚನಗಳು ನಮಗೆ ದೊರೆತಿವೆ. ಶಿವಗಣಪ್ರಸಾದಿ ಮಹದೇವಯ್ಯನವರು ಸಂಪಾದಿಸಿದ ಮೊಟ್ಟ ಮೊದಲ ಶೂನ್ಯಸಂಪಾದನೆಯಲ್ಲೇ ಸುಮಾರು ಎಂಬತ್ತು ಮತಗಳ ಪ್ರಸ್ತಾಪ ಬರುತ್ತದೆ. ಒಂದೊಂದು ಮತವೂ ತಾತ್ವಿಕವಾಗಿ ಒಂದಿಷ್ಟು ಭಿನ್ನತೆಯನ್ನು ಹೊಂದಿರುತ್ತದೆ ಅನ್ನುವುದು ನಮಗೆ ತಿಳಿದಿದೆ. ನಮಗೆ ದೊರೆಯುವ ಅತ್ಯಂತ ಹಳೆಯ ಹಸ್ತಪ್ರತಿಯೇ ಸುಮಾರು ಹದಿನಾಲ್ಕನೆಯ ಶತಮಾನದ ಕೊನೆಯ ಭಾಗದ್ದು ಎಂದು ವಿದ್ವಾಂಸರು ಹೇಳುತ್ತಾರೆ. ಹಾಗಾಗಿ ಬಸವಾದಿ ಶರಣರ ನಂತರದ ಶತಮಾನಗಳಲ್ಲಿ ವಚನಗಳು ಮತ್ತೆ ಮತ್ತೆ ಕಾಲದ ಅಗತ್ಯಕ್ಕೆ ತಕ್ಕ ಹಾಗೆ ಪರಿಷ್ಕಾರಗೊಂಡವು, ಹೊಸ ಪರಿಕಲ್ಪನೆಗಳು ಮೂಡಿ ಬೆಳೆದವು. ಬಸವ, ಅಲ್ಲಮ, ಅಕ್ಕ, ಚನ್ನಬಸವ ಇಂಥ ಪ್ರಮುಖರ ಬದುಕಿನ ಬಗ್ಗೆ ಐತಿಹಾಸಿಕ ವಿವರಗಳು ಸಿಗುವಂತೆಯೇ ಅವರನ್ನು ಪುರಾಣವ್ಯಕ್ತಿ ಗಳನ್ನಾಗಿಸುವ ಚರಿತ್ರೆಗಳೂ, ಪುರಾಣಗಳೂ ಬೆಳೆದವು. ಶೂನ್ಯಸಂಪಾದನೆಯಂತೂ ಉತ್ತರ ಪ್ರತ್ಯುತ್ತರ ರೂಪದಲ್ಲಿ ವಚನಗಳನ್ನು ಜೋಡಿಸಿದ, ಆ ಜೋಡಣೆಗೆ ಅನುಕೂಲವಾಗುವಂತೆ ವಚನಗಳನ್ನು ಅಲ್ಪ ಸ್ವಲ್ಪ ತಿದ್ದಿದ ಕೃತಿ. ಹೀಗಾಗಿ ನಮ್ಮಲ್ಲಿ ಈಗ ಅವರವರು ತಮ್ಮ ಮನಸಿನಲ್ಲಿ ತಮ್ಮ ಇಷ್ಟಕ್ಕೆ ತಕ್ಕ ಹಾಗೆ ಮೂರ್ತಿಗೊಳಿಸಿಕೊಂಡ ಬಸವಾದಿ ಶರಣರು ಇದ್ದಾರೆ. ಹಾಗೆಯೇ ನಮ್ಮ ಕಲ್ಪನೆಯ ಹನ್ನೆರಡನೆಯ ಶತಮಾನಗಳು ಭಿನ್ನಭಿನ್ನ ರೂಪಗಳಲ್ಲಿ ಬೆಳೆದು ನಿಂತಿವೆ. ವಚನಗಳನ್ನು ಸ್ವಲ್ಪ ಗಮನವಿಟ್ಟು ಓದುವ ಯಾರಿಗೇ ಆಗಲಿ ಬಸವ, ಅಕ್ಕ, ಅಲ್ಲಮರಂಥ ಹಿರಿಯರ ವಚನಗಳಲ್ಲಿ ಒಂದೇ ರೀತಿಯ ಕನಿಷ್ಠ ಮೂರು ವಚನಗಳು ಎದುರಾಗುತ್ತವೆ. ಯಾಕೆ ಹೀಗೆ ಅನ್ನುವುದನ್ನು ಯೋಚನೆ ಮಾಡಿದರೆ ಕನ್ನಡ ಮನಸ್ಸು ಹಲವು ಶತಮಾನಗಳ ಕಾಲ ವಚನಪಠ್ಯಗಳನ್ನು ತನ್ನ ಅಗತ್ಯಕ್ಕೆ ತಕ್ಕ ಹಾಗೆ ಬಳಸಿ, ಬೆಳೆಸಿರುವುದೇ ಕಾರಣವೆಂದು ಹೊಳೆಯುತ್ತದೆ. ವಚನಗಳನ್ನು ನಾವು ಸಾಂಸ್ಕೃತಿಕ ದೃಷ್ಟಿಯಿಂದ ನೋಡಲು ಸಾಧ್ಯವಾದಾಗ ಮಾತ್ರ ಇದು ಕನ್ನಡ ಸಂಸ್ಕೃತಿ ಬೆಳೆದ ಬಗೆಯ ಗುರುತೂ ಆಗುತ್ತದೆ.

ವಚನಗಳು ಎಷ್ಟು ವೈವಿಧ್ಯಮಯವಾಗಿವೆ ಎಂದರೆ ಅವುಗಳಲ್ಲಿ ಕೆಲವೊಮ್ಮೆ ಪರಸ್ಪರ ವಿರುದ್ಧವೆಂಬಂತೆ ತೋರುವ ವಿಚಾರಗಳೂ ಮಂಡನೆಯಾಗುತ್ತವೆ. ಇದು ಖಂಡಿತ ವಚನಗಳ ದೋಷವಲ್ಲ, ತಮ್ಮ ಕಾಲದ ಬದುಕಿಗೆ ವಚನಗಳನ್ನು ಅಳವಡಿಸಿಕೊಳ್ಳಲು ಕನ್ನಡ ಮನಸ್ಸು ನಡೆಸಿದ ಪ್ರಯತ್ನದ ಕುರುಹುಗಳು. ಈಗ ನಾವು ವಚನಗಳನ್ನು ಬಿಡಿಬಿಡಿಯಾದ ರಚನೆಗಳೆಂಬಂತೆ, ಭಾಷಣದಲ್ಲಿ ಬಳಕೆಯಾಗುವ ಕೊಟೇಶನ್‌ಗಳಂತೆ, ಸುಭಾಷಿತಗಳಂತೆ ಪರಿಗಣಿಸಿದ್ದೇವೆ ಅನಿಸುತ್ತದೆ. ಆದರೆ ಲಭ್ಯವಿರುವ ಸುಮಾರು ಇಪ್ಪತ್ತು ಸಾವಿರ ವಚನಗಳ ವೈವಿಧ್ಯ ದಿಗ್ಭ್ರಮೆ ಹುಟ್ಟಿಸುತ್ತದೆ. ಅಲ್ಲಿ ಆತ್ಮನಿರೀಕ್ಷಣೆ, ಆತ್ಮಪರೀಕ್ಷಣೆಗಳಿವೆ, ಆಚಾರದ ವಿವರಣೆಗಳಿವೆ, ವಿಚಾರಗಳ ಮಂಥನವಿದೆ, ಸಮಾಜದ ವಿಮರ್ಶೆ ಇದೆ, ತಾತ್ವಿಕ ಚಿಂತನೆ ಇದೆ, ನಮ್ಮ ದೈನಂದಿನ ಬದುಕಿನ ಸಮಸ್ಯೆಗಳ ಪರಿಶೀಲನೆಯೂ ಇದೆ.

ವಚನಗಳನ್ನು ಆಧುನಿಕರಿಗೆ ತಲುಪಿಸಿದ ಹಿರಿಯರಾದ ಫ.ಗು. ಹಳಕಟ್ಟಿಯವರು 'ವಚನಶಾಸ್ತ್ರ ಸಾರ'ವೆಂದು ವಚನಗಳನ್ನು ಮಂಡಿಸಿದರು. ಸುಮಾರು ಎರಡು ದಶಕಗಳ ನಂತರ ಎಂ.ಆರ್. ಶ್ರೀನಿವಾಸಮೂರ್ತಿಯವರು 'ವಚನಧರ್ಮಸಾರ'ವೆಂಬ ಕೃತಿಯನ್ನು ರಚಿಸಿ ವಚನಗಳನ್ನು ಕನ್ನಡದ ಉಪನಿಷತ್ತುಗಳೆಂದು ಕರೆದರು. ಸ್ವಾತಂತ್ರ್ಯಾನಂತರ ನವೋದಯ ಸಾಹಿತ್ಯ ರಚನೆಯಾಗುತ್ತಿದ್ದ ಹೊತ್ತಿನಲ್ಲಿ, ಆನಂತರ ಅರವತ್ತರ ದಶಕದಲ್ಲಿ ವಚನವನ್ನು ಕಾವ್ಯವೆಂದು ಪರಿಗಣಿಸುವ ದೃಷ್ಟಿ ಬೆಳೆಯಿತು. ಎಪ್ಪತ್ತರ ದಶಕದ ಕೊನೆಯ ಹೊತ್ತಿಗೆ ಹಲವು ಸಾಮಾಜಿಕ ಚಳವಳಿಗಳು ರೂಪುಗೊಂಡ ಹೊತ್ತಿನಲ್ಲಿ 'ಕಾಯಕಜೀವಿಗಳ' ಚಳವಳಿ ಎಂಬ ನುಡಿಗಟ್ಟು ರೂಪುಗೊಂಡು ವಚನಗಳ ಸಾಮಾಜಿಕ ಕ್ರಾಂತಿಯ ಅಂಶ ಮುನ್ನೆಲೆಗೆ ಬಂದಿತು. ಅಂದರೆ, ನಮ್ಮ ಮತ್ತು ನಮ್ಮ ಹಿರಿಯ ತಲೆಮಾರಿನ ಅವಧಿಯಲ್ಲೇ ವಚನಗಳನ್ನು ನೋಡುವ ನಾಲ್ಕು ಬೇರೆ ಬೇರೆಯ ದಾರಿಗಳು ರೂಪುಗೊಂಡವು. ನೋಟ ಹೇಗೋ ವಚನವೂ ಹಾಗೇ ಅರ್ಥವಾಗುತ್ತದೆ.

೨

ನಮ್ಮ ಹಿರಿಯ ತಲೆಮಾರಿನ ವಿದ್ವಾಂಸರಾದ ಶ್ರೀ ಬಸವನಾಳರು, ಆರ್.ಸಿ. ಹಿರೇಮಠ್ ಅವರು, ಎಂ. ಚಿದಾನಂದಮೂರ್ತಿ, ಎಲ್. ಬಸವರಾಜು, ಎಂ.ಎಂ. ಕಲ್ಬುರ್ಗಿ, ಎಸ್. ಶಿವಣ್ಣ, ವಿದ್ಯಾಶಂಕರ್ ಮೊದಲಾದವರು ವಚನಗಳ ಹಸ್ತಪ್ರತಿಗಳನ್ನು ಪರಿಶೋಧಿಸಿ ಕೊಟ್ಟಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗ, ಗದುಗಿನ ತೋಂಟದಾರ್ಯ ಮಠ ಮತ್ತು ಸುತ್ತೂರಿನ ಶ್ರೀಮಠ, ಚಿತ್ರದುರ್ಗದ ಬೃಹನ್ಮಠ, ಮೂರುಸಾವಿರ ಮಠ, ಶರಣ ಸಾಹಿತ್ಯ ಪರಿಷತ್ತು ಮುಂತಾದ ಸಂಸ್ಥೆಗಳು ಶರಣ ಸಾಹಿತ್ಯದ ಮೂಲ ಆಕರ, ಅನುವಾದಗಳನ್ನು, ಆಧುನಿಕ ಚಿಂತನೆಗಳನ್ನು

ಪ್ರಕಟಿಸಿವೆ. ಬಸವ ಸಮಿತಿ, ಶರಣ ಸಾಹಿತ್ಯ ಪರಿಷತ್ತುಗಳು ಮುಖ್ಯವಾಗಿ ಶರಣ ಸಾಹಿತ್ಯವನ್ನು ವ್ಯಾಪಕವಾಗಿ ಪ್ರಚುರಗೊಳಿಸುವ ಕಾರ್ಯದಲ್ಲಿ ತೊಡಗಿವೆ.

ಇಂಥ ಕಾರ್ಯ ಘನವಾದದ್ದು. ಜನರ ಬದುಕನ್ನು ತಿದ್ದುವಂಥದ್ದು. ಹೀಗೆ ಪ್ರಚಾರ ಕಾರ್ಯವೇ ನಮ್ಮನ್ನು ಸ್ವಸಂತೃಪ್ತಿಯಲ್ಲಿ ಮುಳುಗಿಸಿಬಿಟ್ಟರೆ ಅದು ಅಪಾಯಕಾರಿಯೂ ಆಗಬಹುದು. ಕೆಲವು ವಿಶ್ವವಿದ್ಯಾನಿಲಯಗಳ ಹಿರಿಯ ವಿದ್ವಾಂಸರು ವಚನಗಳ ಬಗ್ಗೆ ಕೆಲಸ ಮಾಡುವುದಕ್ಕೆ ಏನಿದೆ, ಎಲ್ಲ ಮುಗಿದಿದೆ ಅನ್ನುವುದನ್ನು ಕೇಳಿದ್ದೇನೆ. ವಚನಗಳು ಅತಿ ಸುಲಭ, ಎಲ್ಲರಿಗೂ ಅರ್ಥವಾಗುತ್ತವೆ ಅನ್ನುವುದು ಇನ್ನೊಂದು ಭ್ರಮೆ. ನಮ್ಮ ನಮ್ಮ ನೋಟಕ್ಕೆ ತಕ್ಕ ಹಾಗೆ ವಚನಗಳನ್ನು ಬಳಸುತ್ತ 'ಇದೇ ಈ ವಚನದ ಅರ್ಥ' ಎಂದು ಹೇಳುವ ಧಾರ್ಷ್ಟ್ಯವೂ ಬೆಳೆದಿದೆ. ಹಾಗೆ ನೋಡಿದರೆ ಸುಮಾರು ಐವತ್ತು ಜನ ವಿದ್ವಾಂಸರು ಕುಳಿತು ಅರ್ಧ ಶತಮಾನ ಒಟ್ಟಾಗಿ ದುಡಿದರೂ ಮುಗಿಯದಷ್ಟು ಕೆಲಸ ಬಾಕಿ ಉಳಿದಿದೆ. ಆ ಕೆಲಸವನ್ನು ಎರಡು ರೀತಿಗಳಲ್ಲಿ ವಿಂಗಡಿಸಿಕೊಳ್ಳಬಹುದು: ಒಂದು ವಿದ್ವತ್ ಕಾರ್ಯ, ಇನ್ನೊಂದು ವಚನಗಳನ್ನು ಬದುಕಿನಲ್ಲಿ ಅಳವಡಿಸುವ ಅನುಷ್ಠಾನ ಕಾರ್ಯ. ಎರಡನೆಯದು ಪ್ರತಿಯೊಬ್ಬರ ಕರ್ತವ್ಯವಾಗುತ್ತದೆ, ಸಂಘಟನೆಯನ್ನೂ ಬೇಡುತ್ತದೆ. ಆ ಕುರಿತು ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ.

೩

ವಚನಗಳಲ್ಲಿ ಬಳಕೆಯಾಗಿರುವ ಕನ್ನಡ ಪದಗಳೇ ದೊಡ್ಡ ತೊಡಕನ್ನು ಒಡ್ಡುತ್ತವೆ. ಹಳಗನ್ನಡದ ಬಗ್ಗೆ ದೊರೆಯುವಂಥ ನೆರವಿನ ಸಾಹಿತ್ಯ ನಡುಗನ್ನಡದ ರಚನೆಗಳನ್ನು ಕುರಿತು ದೊರೆಯದು. ವಚನಗಳನ್ನು ಅನುವಾದ ಮಾಡುವಾಗ ಈ ಸಮಸ್ಯೆ ಎದುರಾಯಿತು. ಸರಿಹುದುಗಿನ ಸೂಳೆ, ದೀನನ ಮನೆಯಲ್ಲಿ ಹೊನ್ನಿದ್ದಡೆ ಫಲವೇನು, ಚೆನ್ನಮಲ್ಲಿಕಾರ್ಜುನನ ಕಂಡು ತಳವೆಳಗಾದೆನು ಎಂಬಂಥ ಸಾಲುಗಳು, ಎನ್ನ ಮುಂಬಲ್ಲ ಕೊಳ್ಳಾ ಎಂಬ ಸಾಲಿರುವ ವಚನ ಇಂಥವು ಎದುರಾದಾಗ ಹಲವು ದಿನಗಳ ಚರ್ಚೆಯೇ ಬೇಕಾಗುತ್ತಿತ್ತು. ವಚನ ಸಂಪುಟಗಳ ಕೊನೆಯಲ್ಲಿ ಕೊಟ್ಟಿರುವ ಕಠಿಣ ಪದಗಳ ಕೋಶದಲ್ಲಿ ಇಂಥ ಪದಗಳಿಗೆ ವಿವರಣೆ ಸಿಗುವುದೇ ಇಲ್ಲ. ವಚನಗಳಲ್ಲಿ ಎದುರಾಗುವ ಸಂಸ್ಕೃತದ ಪಾರಿಭಾಷಿಕ ಪದಗಳಿಗೆ ವಿವರಣೆ ದೊರೆಯುತ್ತದೆ. ಕನ್ನಡ ಪದಗಳ ವಿವರಣೆಗೆ ಬಹಳ ಕಷ್ಟಪಡಬೇಕಾಗುತ್ತದೆ. ಹಾಗಾಗಿ ಶರಣ ಸಾಹಿತ್ಯದಲ್ಲಿ ಬಳಕೆಯಾಗಿರುವ ನಡುಗನ್ನಡದ ಪದಬಳಕೆಯ ನಿಘಂಟಿನ ತಯಾರಿ ಅಗತ್ಯವಾಗಿ ಆಗಬೇಕಾದ ಕೆಲಸ.

ಬಸವಾದಿ ಶರಣರು ರೂಪಿಸಿದ ಧರ್ಮ ಕನ್ನಡದ ನೆಲದಲ್ಲಿ ರೂಪುಗೊಂಡದ್ದು. ಅವರು ಅನೇಕ ವಿಚಾರಗಳನ್ನು ಹೊಸತಾಗಿ ಕನ್ನಡದಲ್ಲಿ ಹೇಳಿದ್ದಾರೆ. ಈ

ವಿಚಾರಗಳ ಮೂಲ ಸಂಸ್ಕೃತದ್ದೇ ಆಗಿರಬಹುದಾದರೂ ಕನ್ನಡದಲ್ಲಿ ಹೊಸ ಅರ್ಥವನ್ನು ಹೊಳೆಯಿಸಿದ್ದಾರೆ. ಉದಾಹರಣೆಗೆ, 'ಉಳ್ಳವರು ಶಿವಾಲಯವ ಮಾಡುವರು' ಎಂಬ ವಚನವನ್ನು ನೋಡಿ. ದೇಹವನ್ನು ಆಲಯಕ್ಕೆ ಹೋಲಿಸುವುದು ಭಾರತದಲ್ಲಿ ಸಾಮಾನ್ಯ ಸಂಗತಿ ಅನ್ನುವಷ್ಟು ಉದಾಹರಣೆಗಳು ದೊರೆಯುತ್ತವೆ. ಆದರೆ ಅಂಥ ಯಾವ ಉದಾಹರಣೆಯಲ್ಲೂ 'ಉಳ್ಳವರು' ಎಂಬ ಆರ್ಥಿಕ, ಸಾಮಾಜಿಕ ಅಂಶ ಇಲ್ಲ. ಹಾಗಾಗಿ, ಶರಣ ಸಾಹಿತ್ಯದಲ್ಲಿ ಸಿಗುವ ಮುಖ್ಯ ಪರಿಕಲ್ಪನೆಗಳ ಚರಿತ್ರೆಯನ್ನು ತಿಳಿಸುವ ವಿವರಣಾತ್ಮಕ ಕೋಶವೊಂದು ಅಗತ್ಯವಾಗಿ ಬೇಕಾಗುತ್ತದೆ. ಸಂಬಂಧಗಳನ್ನು ಕುರಿತು ವಚನಕಾರರು ವ್ಯಕ್ತಪಡಿಸುವ ನಿಲುವುಗಳೇನು, ಪ್ರಳಯದ ಬಗ್ಗೆ ಏನೇನು ಹೇಳಿದ್ದಾರೆ, ಮಾಯೆಯನ್ನು ಕುರಿತು ಎಷ್ಟೆಲ್ಲ ಅಭಿಪ್ರಾಯ ಭೇದಗಳಿವೆ, ಅರಿವು ಕುರುಹುಗಳ ಚರ್ಚೆಯ ವ್ಯಾಪ್ತಿ ಎಷ್ಟು, ನೆನಹು ಮರಹುಗಳ ಸಂಬಂಧವೇನು ಹೀಗೆ ಶರಣರು ಸೃಷ್ಟಿಸಿದ ಪರಿಕಲ್ಪನೆಗಳನ್ನು ವಿವರಿಸಿ ವಿಶ್ಲೇಷಿಸುವ, ಆಧಾರಗಳ ಮೂಲಕ ತಿಳಿಸಿಕೊಡುವ ಕೋಶದ ರಚನೆ ಅಗತ್ಯವಾಗಿ ಆಗಬೇಕಾಗಿದೆ.

ಆಡುಮಾತಿನ ರೂಪದಲ್ಲಿದ್ದು ಆನಂತರದಲ್ಲಿ ಬರವಣಿಗೆಗೆ ಬಂದ ಸಾಹಿತ್ಯವನ್ನು ಶೋಧಿಸುವ ಕೆಲಸ ಕಲ್ಪಿಸಿಕೊಳ್ಳಲಾಗದಷ್ಟು ಕಷ್ಟದ್ದು. ವಚನಕಾರರು ತಮಗೆ ಇಷ್ಟವಾದ ಮತ್ತೊಬ್ಬ ಶರಣರ ಮಾತನ್ನು ತಮ್ಮ ವಚನದಲ್ಲಿ ಬಳಸುವುದುಂಟು. ವಚನಗಳನ್ನು ತಮ್ಮ ಕೃತಿಯ ಛಂದಸ್ಸಿಗೆ ಒಗ್ಗಿಸಿಕೊಂಡ ಕವಿಗಳಿದ್ದಾರೆ. ನಾಲ್ಕಾರು ಪುಟಗಳಷ್ಟು ವಿಸ್ತಾರವಾಗಿರುವ ಸೃಷ್ಟಿಯ ವಚನವಾಗಲಿ, ಯೋಗಾಂಗ ತ್ರಿವಿಧಿಯಾಗಲಿ ಇದು ಅಕ್ಕಮಹಾದೇವಿಯ ಭಾಷೆಯೇ ಎಂಬ ಅನುಮಾನ ಹುಟ್ಟಿಸುವಂತೆ ಇರುತ್ತದೆ. ತಮ್ಮ ಅನುಭವವೇ ಪ್ರಮಾಣವೆಂದು ದೃಢವಾಗಿ ನಂಬಿದ್ದ ವಚನಕಾರರು ಸುದೀರ್ಘ ಸಂಸ್ಕೃತ ಉಲ್ಲೇಖಗಳನ್ನು ಬಳಸಿದ್ದು ಯಾಕೆ ಅನ್ನುವ ಪ್ರಶ್ನೆಯೂ ಎದುರಾಗುತ್ತದೆ. ಲಭ್ಯವಿರುವ ಹಸ್ತಪ್ರತಿಗಳನ್ನೇ ಕೂಲಂಕಷವಾಗಿ ಗಮನಿಸಿ ಒಂದೇ ಬಗೆಯ ರಚನೆಗಳಂತೆ ತೋರುವ, ರಚನೆಗಳ ಬೆಳವಣಿಗೆ ಹೇಗಾಗಿರಬಹುದು ಅನ್ನುವುದನ್ನು ಸ್ಪಷ್ಟಪಡಿಸುವ, ಇವು ಆನಂತರ ಕಾಲದ ಸೇರ್ಪಡೆಗಳೆಂದು ಗುರುತಿಸುವ ಕೆಲಸ ಗ್ರಂಥಸಂಪಾದನೆಯ ಶಾಸ್ತ್ರಕ್ಕೆ ದೊಡ್ಡ ಸವಾಲು.

ಹನ್ನೆರಡನೆಯ ಶತಮಾನದಿಂದ ಆರಂಭವಾಗಿ ಇಪ್ಪತ್ತನೆಯ ಶತಮಾನದ ಕೊನೆಯವರೆಗೆ ಬಂದ ಶರಣ ಸಾಹಿತ್ಯದ ಎಲ್ಲ ಆಕರ ಗ್ರಂಥಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಿ ಆಸಕ್ತರಿಗೆ ಲಭ್ಯವಾಗುವಂತೆ ಮಾಡುವುದು ಅಗತ್ಯವಾಗಿ ಆಗಬೇಕಾದ ಕೆಲಸ. ನಾವು ಗೆಳೆಯರು ರೂಪಿಸಿದ ವಚನಸಂಚಯದಂತ ಜಾಲತಾಣವು ವಚನಗಳನ್ನು ಹುಡುಕಿಕೊಳ್ಳಲು ಅಥವಾ ಸಂಶೋಧನೆ ನಡೆಸಲು ನೆರವು ನೀಡುತ್ತದೆ. ಹಲವು ಜಾಲತಾಣಗಳಲ್ಲಿ ಶರಣ ಸಾಹಿತ್ಯದ ಪಿಡಿಎಫ್, ಇ–ಬುಕ್‌ಗಳು ದೊರೆಯುತ್ತವೆ.

ಹಾಗೆ ಸ್ಥೂಲವಾಗಿ ನೋಡಿದರೆ ಸುಮಾರು ೨೦೦೦ದಷ್ಟು ಮುದ್ರಿತ ಕನ್ನಡ ಕೃತಿಗಳು ಶರಣ ಸಾಹಿತ್ಯದ ಪ್ರಮುಖ ಆಕರಗಳಾಗಿವೆ. ಅವು ಒಂದು ತಾಣದಲ್ಲಿ ಡಿಜಿಟಲ್ ರೂಪದಲ್ಲಿ ಪರಾಮರ್ಶೆಗೆ ದೊರೆಯುವಂತಾದರೆ ಬಹಳ ಅನುಕೂಲವಾಗುತ್ತದೆ. ವಚನ ಹಸ್ತಪ್ರತಿಗಳ ಡಿಜಿಟಲೀಕರಣಕ್ಕೆ ಸರ್ಕಾರವನ್ನು ಒತ್ತಾಯಿಸುವುದು ಆಗಲೇಬೇಕಾದ ಇನ್ನೊಂದು ಕೆಲಸ. ಇದು ಶೀಘ್ರವಾಗಿ ಮಾಡಬಹುದಾದ, ಬಹಳ ದೊಡ್ಡ ಆರ್ಥಿಕ ಹೊರೆಯನ್ನು ಬೇಡದ ಕೆಲಸ. ಹಾಗೆ ಸಮಕಾಲೀನ ತಂತ್ರಜ್ಞಾನವನ್ನು ಒಳಗೊಳ್ಳದೆ ಹೋದರೆ ಶರಣ ಸಾಹಿತ್ಯ ಮುಂದಿನ ತಲೆಮಾರಿಗೆ ದೊರೆಯುವುದು ಕಷ್ಟವಾದೀತು.

೪

ಕೊನೆಯದಾಗಿ ಎಲ್ಲರ ಜವಾಬ್ದಾರಿಯಾಗಿರುವ ಸಂಗತಿಯ ಬಗ್ಗೆ ಎರಡು ಮಾತು. ಬಳ್ಳಾರಿಯಲ್ಲಿ ೧೯೧೦ರಲ್ಲಿ ನಡೆದ ವೀರಶೈವ ಮಹಾಸಭೆಯ ವರದಿಯ ಪಿಡಿಎಫ್ ಪ್ರತಿಯನ್ನು ಗೆಳೆಯರೊಬ್ಬರು ನೀಡಿದರು. ಹಾನಗಲ್ಲು ಕುಮಾರಸ್ವಾಮಿಗಳು ಮತ್ತು ಅರಟಾಳು ರುದ್ರೇಗೌಡರ ನೇತೃತ್ವದಲ್ಲಿ ನಡೆದ ಸಮ್ಮೇಳನ ಅದು. ಅದರ ವರದಿಯೇ ಸುಮಾರು ಮುನ್ನೂರು ಪುಟದಷ್ಟಿದೆ. ಅದರಲ್ಲಿ ಚರ್ಚೆಗೊಂಡ ಮೂರು ವಿಷಯಗಳು ನನ್ನ ಗಮನ ಸೆಳೆದವು. ಒಂದು, ರಾಜದ್ರೋಹ ನಿಷೇಧ ಪ್ರದರ್ಶನ. ಇನ್ನೊಂದು ಮತಸಿದ್ಧಾಂತವನ್ನು ರಾಜಕೀಯ ಭಾಷೆಯಲ್ಲಿ ಬರೆಯಿಸುವ ಅಗತ್ಯ ಎಂಬ ಚರ್ಚೆ. ಐದು ದಿನಗಳು ನಡೆದ ಆ ಸಮ್ಮೇಳನದ ವಿಷಯವ್ಯಾಪ್ತಿ ಇವತ್ತಿಗೂ ಬೆರಗು ಹುಟ್ಟಿಸುತ್ತದೆ. ಶರಣ ಸಾಹಿತ್ಯ ಪರಿಷತ್ತಿನಂಥ ಸಂಸ್ಥೆಗಳು ಮಾಡಬಹುದಾದ ಕಾರ್ಯಗಳ ಒಂದು ಸೂಚನೆ ಆ ವಿಸ್ತಾರವಾದ ವರದಿಯಲ್ಲಿದೆ. ಶರಣ ಸಾಹಿತ್ಯ ಕೇವಲ ಮತಧಾರ್ಮಿಕ ಸಾಹಿತ್ಯವಲ್ಲ, ನಮ್ಮ ಸಮಕಾಲೀನ ಸಮಸ್ಯೆಗಳ ಮೇಲೂ ಹೇಗೆ ಬೆಳಕು ಚೆಲ್ಲಬಹುದು ಎಂಬುದನ್ನು ಸಾಹಿತ್ಯಕ ಸಾಕ್ಷ್ಯಗಳಿಂದಲೇ ಮನದಟ್ಟು ಮಾಡಿಕೊಳ್ಳಬೇಕು.

ವಚನವೆಂಬುದು ಭಾಷೆ. ಅದು ಸಾಹಿತ್ಯ, ಮತಧರ್ಮಶಾಸ್ತ್ರ ತಾತ್ವಿಕ ಚಿಂತನೆ, ಸಮಾಜ ವಿಮರ್ಶೆ, ಸ್ವಪರಿಶೀಲನೆ ಹೀಗೆ ಬಗೆ ಬಗೆಯ ವಿಷಯಗಳನ್ನು ಕುರಿತದ್ದು. ಕಾಶ್ಮೀರಶೈವದಿಂದ ಹಿಡಿದು ಬೌದ್ಧರು, ತಮಿಳುನಾಡಿನ ಶೈವ, ಲಾಕುಳ, ಪಾಶುಪತ, ನಾಥ, ಸಿದ್ಧರ ಚಿಂತನೆಗಳ ಒಡನಾಟದಿಂದ ವಚನ ಇಂದು ಸಾಹಿತ್ಯ ರೂಪುಗೊಂಡಿದೆ. ಮುಖ್ಯವಾಗಿ ಅದು ಅನುಷ್ಠಾನವನ್ನು ಬಯಸುತ್ತದೆ. ಆ ಅನುಷ್ಠಾನ ಕೇವಲ ಮತೀಯವಾದ ಅನುಷ್ಠಾನವಲ್ಲ, ವೈಚಾರಿಕವಾದ ಅನುಷ್ಠಾನವೆಂಬುದು ನನ್ನ ತಿಳಿವಳಿಕೆ. ಮತೀಯ ಚಿಂತನೆ ಎಂಬುದು ತುಂಬ ಪರಿಮಿತವಾದದ್ದು. ಅಧ್ಯಾತ್ಮ ಅದಕ್ಕಿಂತ ವಿಸ್ತಾರವಾದದ್ದು. ಅನುಭಾವದ ಅರಿವು ಅದನ್ನೂ ಮೀರಿದ್ದು. 'ಅರಿವು'

ಎಂದು ವಚನಕಾರರು ಯಾವುದನ್ನು ಮತ್ತು ಹೇಗೆ ವಿವರಿಸುತ್ತಾರೆ ಅನ್ನುವುದನ್ನು ತಿಳಿಯುವುದೇ ಒಂದು ಹಿರಿದಾದ ಸಾಧನೆಯಾಗುತ್ತದೆ.

ಹದಿನಾಲ್ಕನೆಯ ಶತಮಾನದ ಇಂಗ್ಲಿಷ್ ಕವಿ ಚಾಸರ್ ಮಾಡಿರುವ ವರ್ಣನೆ ನಾವು ಬದುಕುತ್ತಿರುವ ಕಾಲವನ್ನು ಕುರಿತ ಚಿತ್ರಣದಂತಿದೆ. 'ಚಿನ್ನಕ್ಕೇ ತುಕ್ಕು ಹಿಡಿದರೆ ಕಬ್ಬಿಣದ ಗತಿಯೇನು' ಅನ್ನುತ್ತಾನೆ ಆತ. ನಾವು ಚಿನ್ನವೆಂದು ಭಾವಿಸುವ ಆಳುವ ಪ್ರಭುಗಳಿಗೆ ತುಕ್ಕು ಹಿಡಿದಿದೆ. ಧರ್ಮದ ಬಹುತೇಕ ನೇತಾರರಿಗೆ ತುಕ್ಕು ಹಿಡಿದಿದೆ. ಹೀಗಿರುವಾಗ ಸಾಮಾನ್ಯರು ತುಕ್ಕು ಹಿಡಿಯದೆ ಇನ್ನೇನಾಗುತ್ತಾರೆ? ಬಸವಣ್ಣನವರನ್ನು ಬಲ್ಲೆವೆಂದು ಬೀಗುವವರು ದಯೆಯೇ ಧರ್ಮದ ಮೂಲವೆಂಬುದನ್ನು ಮರೆತದ್ದು ಹೇಗೆ? ಮೂಲವೆಂಬ ಮಾತಿಗೆ ಬೇರು ಎಂಬ ಅರ್ಥವೂ ಇದೆ. ಧರ್ಮವು ಮರ, ಅದು ನೆರಳು ಕೊಡುವ, ಆಸರೆಯಾಗುವ ಮರ. ದಯೆ ಅದರ ಬೇರು. ಇಷ್ಟು ಸರಳ ಸಂಗತಿಯನ್ನು ಅರಿಯಲಾಗದೆ ಅನ್ಯಮತದ ಬಗ್ಗೆ ದ್ವೇಷವನ್ನು ಸಾಧಿಸುವುದೇ ಧರ್ಮವೆಂಬ ರಾಜಕೀಯಕ್ಕೆ ಬೆಂಬಲ ಕೊಡುವುದು ಹೇಗೆ?

ಆನೆ ಅಂಕುಶಕ್ಕೆ ಅಂಜುವುದೆ ಅಯ್ಯಾ
ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ.
ಆನೀ ಬಿಜ್ಜಳಂಗಜುವೆನೆ ಅಯ್ಯಾ
ಕೂಡಲಸಂಗಮದೇವಾ,
ನೀನು ಸರ್ವಜೀವದಯಾಪಾರಿಯಾದ ಕಾರಣ
ನಿನಗಂಜುವೆನಲ್ಲದೆ

**– ಬಸವಣ್ಣ**

ಎಂದು ಹೇಳುವಷ್ಟು ದಿಟ್ಟರಾಗಿದ್ದರು ಬಸವಣ್ಣನವರು. ಜೀವದಯಾಪಾರಿಯಾದ ಕೂಡಲಸಂಗಮನ ಬಗ್ಗೆ ಅಂಜಿಕೆ ಇರಬೇಕೇ ಹೊರತು ಬಿಜ್ಜಳನ ಬಗ್ಗೆ ಅಲ್ಲ. ಅಂಥ ಕೆಚ್ಚು ಬಸವಾನುಯಾಯಿಗಳಲ್ಲಿ ಬಂದರೆ ಎಷ್ಟು ಚೆನ್ನ, ಹಾಗೆ ಬಂದಿದ್ದರೆ ಈಗಿನ ಹಾಗೆ ಎಲ್ಲೆಲ್ಲೂ ಬಿಜ್ಜಳರೇ ಕಾಣುತ್ತಿರಲಿಲ್ಲ. ದಯೆಯನ್ನು ಶಾಶ್ವತವಾಗಿ ಇರಿಸಿಕೊಂಡೂ ಆಳುವವರನ್ನು ಎದುರುಹಾಕಿಕೊಳ್ಳುವ ದಿಟ್ಟತನ ಬಸವಣ್ಣನವರಿಗಿತ್ತು. ಹಾಗಾಗಿ ಅವರು ಯುಗದ ಉತ್ಸಾಹವಾದರು. ಅಧಿಕಾರಕ್ಕೆ ಆಸೆಪಡದ, ಅಧಿಕಾರಸ್ಥಾನಗಳಿಗೆ ಅಂಜದ ದಿಟ್ಟ ಬದುಕು ನಮ್ಮದಾಗಲಿ ಅನ್ನುವ ಉದ್ದೇಶದಿಂದ ಶರಣ ಸಾಹಿತ್ಯವನ್ನು ಪ್ರಚಾರ ಮಾಡಬೇಕು. ಅದು ಕೇವಲ ಮತಧರ್ಮಶಾಸ್ತ್ರದ ಪರಿಭಾಷೆಗಳ ವಿವರಣೆಯಾಗದೆ, ನಮ್ಮ ಇಚ್ಛೆಗೆ ತಕ್ಕಂತೆ ವ್ಯಾಖ್ಯಾನಕ್ಕೆ ಒದಗುವ ಕೊಟೇಶನ್‌ಗಳಾಗದೆ ವ್ಯಕ್ತಿಗಳಾಗಿ, ಸಮುದಾಯವಾಗಿ ನಾವು ಬದುಕುವ ರೀತಿಯನ್ನು ಕಲಿಸುವ ಬೋಧನೆಗಳಾಗಬೇಕು. ಶರಣ ಸಾಹಿತ್ಯವನ್ನು ಜನಕ್ಕೆ ತಲುಪಿಸುವುದು ಇಂದು ಆಗಲೇಬೇಕಾದ ಕೆಲಸ.

ಶಾಲೆಕಾಲೇಜುಗಳಲ್ಲಿ ಕಲಿಯಲು ಬರುವ ಯುವ ಮನಸ್ಸುಗಳನ್ನು ಎಷ್ಟು ಸಾಧ್ಯವೋ ಅಷ್ಟು ನಿರ್ಲಕ್ಷ್ಯ ಮಾಡಿದ್ದೇವೆ. ಕಳೆದ ಐವತ್ತು ವರ್ಷಗಳಲ್ಲಿ ಬಂದ ಎಲ್ಲ ಸರ್ಕಾರಗಳೂ ಶಿಕ್ಷಣವನ್ನು ತಮ್ಮ ಶಕ್ತ್ಯಾನುಸಾರ ಹಾಳುಗೆಡವಿವೆ. ಪರೀಕ್ಷೆ, ಅಂಕ ಇವೇ ಮುಖ್ಯವಾಗಿ, ಅದಕ್ಕಿಂತಲೂ ಲಂಚ ಕೊಟ್ಟಾದರೂ ಕೆಲಸ ಮಾಡಿಸಿಕೊಳ್ಳುವ ನೈಪುಣ್ಯವೇ ಮುಖ್ಯವಾಗಿರುವಾಗ, ಈಗಿನ ಶಿಕ್ಷಣೋದ್ಯಮ ನಮ್ಮ ಯುವಕರನ್ನು ಬದುಕಿಗೆ ಸಜ್ಜು ಮಾಡೀತು ಅನ್ನಿಸುವ ನಂಬಿಕೆ ಇಲ್ಲವಾಗಿದೆ. ಸದ್ಯದ ಶಿಕ್ಷಣ ವ್ಯವಸ್ಥೆಯಾಚೆಗೆ ಪುಟ್ಟ ಪುಟ್ಟ ಗುಂಪುಗಳಲ್ಲಿ ಸಾಹಿತ್ಯ, ಸಂಸ್ಕೃತಿ ಮುಂತಾದ ವಿಷಯಗಳನ್ನು ಅಧ್ಯಯನ ಮಾಡುವುದು ಈಗ ದೊಡ್ಡ ಪ್ರಮಾಣದಲ್ಲೇ ನಡೆಯುತ್ತಿದೆ. ಶರಣ ಸಾಹಿತ್ಯ ಪರಿಷತ್ತು ಸಹ ಹಾಗೆ ಜೀವನವಿದ್ಯೆಯನ್ನು ಕಲಿಸುವ ಸಾಧ್ಯತೆಯತ್ತ ಗಮನ ನೀಡಿದರೆ ಒಳ್ಳೆಯದಾಗುತ್ತದೆ.

ಮತ್ತೊಬ್ಬರನ್ನು ಗೆಲ್ಲುವ ಉದ್ದೇಶವಿರದೆ, ಪಾಂಡಿತ್ಯಪ್ರದರ್ಶನದ ಹಂಗಿಲ್ಲದೆ, ನಮ್ಮ ಬದುಕನ್ನು ನಾವು ನೆಟ್ಟಗಿಟ್ಟುಕೊಳ್ಳಲು ತಕ್ಕ ದಾರಿ ಸಿಗುವುದೋ ಎಂದು ಹುಡುಕುವವರಿಗೆ ವಚನಸಾಹಿತ್ಯ ಬಲು ದೊಡ್ಡ ಸಾಧನವಾಗಬಲ್ಲದು. ಸಮ್ಮೇಳನದಂಥ ಸಂಭ್ರಮ, ಒಗ್ಗೂಡುವಿಕೆಗಳೂ ಮುಖ್ಯ. ಅದರಂತೆಯೇ ಮತಧರ್ಮಬೋಧನೆಗೆ ಮಾತ್ರ ಸೀಮಿತವಾಗದೆ, ಆಚರಣೆಗಳನ್ನು ವಿಶೇಷವಾಗಿ ಪ್ರತಿಪಾದಿಸದೆ, ವ್ಯಕ್ತಿಯ, ಸಮುದಾಯದ ಬದುಕು ಕಲ್ಯಾಣವಾಗುವ ಬೋಧನೆಯ ರೂಪುರೇಷೆಗಳನ್ನು ಸಿದ್ಧಪಡಿಸುವುದು ಇಂದಿನ ಅಗತ್ಯವೆಂದು ನನಗೆ ತೋರುತ್ತದೆ. ಸುತ್ತಲೂ ಕವಿದಿರುವ ನಿರಾಸೆ, ಎಲ್ಲೆಲ್ಲೂ ಕಣ್ಣಿಗೆ ರಾಚುವ ಕೊಳಕು, ಜವಾಬ್ದಾರಿ ಕಿಂಚಿತ್ತೂ ಬಯಸದೆ ಅಧಿಕಾರಕ್ಕೆ ಹಂಬಲಿಸುವ ಹುಂಬತನ, ದೇಶದಲ್ಲಿ ಕೇವಲ ಶೇ. 1ರಷ್ಟು ಮಾತ್ರ ಬಡವರಿದ್ದಾರೆ ಎಂದು ಹೇಳುವ ಹುಚ್ಚು ಧೈರ್ಯ, ನಾಶವಾಗುತ್ತಿರುವ ಪರಿಸರ, ಅಂಗೈಯ ಲಿಂಗದಲ್ಲಿ ಅಲ್ಲ, ಅಂಗೈಯ ಮೊಬೈಲಿನಲ್ಲಿ ಮೈಮರೆಯುವ ಜನಸಮುದಾಯ – ಇವೆಲ್ಲವೂ ಕ್ಷಣಕ್ಷಣವೂ ಕಾಣುತ್ತ ನಿರಾಸೆ ಹುಟ್ಟಿಸುತ್ತಿರುವಾಗ ಹೊಸ ಕಲ್ಯಾಣ ನಿರ್ಮಾಣ ಸಾಧ್ಯವಾದೀತೋ, ಅತ್ತ ನಾವು ಹೆಜ್ಜೆ ಹಾಕಬಹುದೋ ಅನ್ನುವ ಒಂದು ಕ್ಷೀಣ ಆಸೆಯೊಡನೆ ಈ ಮಾತುಗಳನ್ನು ಮುಗಿಸುತ್ತಿದ್ದೇನೆ.

❑

# ಶಬರಶಂಕರ ವಿಲಾಸ–ಟೀಕು : ದ್ವಿತೀಯಾಶ್ವಾಸ

**ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು**

(ಮುಂದುವರಿದಿದೆ)

**ವ** ॥ ಮತ್ತಮಲ್ಲಿ ಸಾಂದ್ರಮರಂದರಸಭರಿತ ಸುರಭಿಯುಕ್ತ ವಿಕಚ ಕುಸುಮ ಮಂಜುಮಂಜರೀ ಪುಂಜದೊಳಿರದೆರಗಿ ಪೊರಮಡದೆ ನಿಲುಂಬಿ ನಿಂದು ನಿಬಿಡಮೆನೆ ಮುಸುಂಕಿದ ಮಧುಮುದಿತ ಮಧುಕರನಂತೆ ಪ್ರತಾಪದಿಂ ಶ್ಯಾಮಳತೆವೆತ್ತು ನಿಜಮೂಲದೊಳ್ಬಳಸಿ ತಳಿರ್ತ ಚೆಂದಳಿರ್ಗಳುಟ್ಟ ಪೀತಾಂಬರದಂತಿರೆ ಕಳಕಂಠಕಳರವಂ ಪಂಚಮಾದಕಂ ಚರದಿಂಚರಮೆನಿಸೆ ಸರಭಸಂ ಪರಿತಂದು ಚಕ್ರಾನಿಲಮೊಲೆದೊಲೆದೆತ್ತಿದ ಪಚ್ಚೆವರಲಂತೆಸೆವ ಪಸುರ್ಮಿಡಿಗಳಿಂ ಕೆಂಬರಲೆಂಬಂತೆ ಸಾರತರವಾದ ದೋರೆವಣ್ಗಳಿಂದಿಂದ್ರನೀಳದಂದಂಬಡೆದು ವಿಳಸಿತಮಾದ ಕಳಿವಣ್ಗಳಿಂ ಮಣಿಗಣಮನೆ ಕಾತೊರಗುವ ಕಲ್ಪಕುಜದಂತೆ ರಾಜಿತಮಾದ ರಾಜಜಂಬೂಕುಜಮುಂ, ಧರಾವಧು ಮಳೆಗರೆದು ಮುನ್ನಂ ತನ್ನನೋವಿದ ಲೇಸನೋಸರಿಸದೆ ನೆನೆದು ಜೀಮೂತವಾಹನಂಗೆ ನಿಜಸುಧಾರಸಮಂ ಮರಕತಕಲಶದೊಳ್ತೀವಿ ನಿಡುದೋಳಂ ನೆಗಪಿ ಮೇಗಣ್ಣೆನೀಡುಂ ನೀಡಿದಪೆಳೆಂಬಂತೆ ರಂಜಿಪ ಬನಾಳಿಕೇರಮುಂ, ರತ್ನಗರ್ಭೆ ತನ್ನ ಸಿರಿಯಂ ಖಚರರ್ಗರುಪಲೆಳಸಿ ಮರಕತಮಣಿಯ ಚಲದ್ಗುಚ್ಛಂಗಳಂ ತೋರಣಂಗಟ್ಟಿದಂತೆ ಪಸುರ್ಗಾಯ್ಗೊಡಂಬೆಗಳಿಂ ಕಂಗೊಳಿಪ ಕೌಂಗುವರಂಗಳುಂ, ವಿಜಯಯಾತ್ರೆಗೆ ತೆರಳಲಜ್ಜುಗಿಪ ಮಕರಧ್ವಜ ಮಹಾರಾಜಂಗೆ ಶುಭಮುಹೂರ್ತದೊಳ್ಮಧುಸಚಿವನಿಂ ಬರಿದು ಪೊಯ್ದಿಂದ್ರಗೋಪದ ಗುಡಾರದಂತೆ ಕಾಂತಮಾದ ಕೆಂದಳಿರ್ತೀವಿದ ಕೆಂಕೆಲ್ಲಿಯುಂ, ಬನಂಬೊಕ್ಕು ಬಾಯಿವಿಡುವ ಬಿರಯಿಗಳ ಬಿಸುಸುಯಿಲ್ ಸುಡೆ ಬಿಕ್ಕನೆ ಬಿರಿದ ರತಿಪತಿಯ ಮಣಿಕರಂಡಕದ ಚಲ್ವಂ ಲಳೆದು ಬೇಡೆವರಿದು ಬೀಜಂಗಳಂ ಸೂಸುವ ಪಣ್ಗಳಿಂ ಸಂಗಳಿಸಿದ ದಾಡಿಮಂಗುಳಂ, ಪೂವಲಿಯಂ ಕೆದರ್ದು ಲತಾನರ್ತಕಿಯರಾಡೆ ಮಧುಕರಂಗಳ್ಪಾಡೆ ಕಳಕಂಠ ಕಾಹಳಿಕಾರವಂ ವಿಜೃಂಭಿಸೆ ಶುಕವಂದಿವೃಂದಂ ಪೊಗಳೆ ಗಂಧವಹಂ ಸುಗಂಧಸಾರಮನುಪಾಯನಂಜೆಯ್ಯೆ ಮಧುಸಚಿವಂ ಮೈವೇರ್ಚಿ ಬೆಸನಂ ಸಾರ್ದು ಸಮ್ಮುಖದೊಳ್ ಸಂಭ್ರಮಿಸಿ ನೆಲಸೆ – ಮಾಕಂದಾದಿ ಸುಭಟರ್ನಿಜಾಸ್ತ್ರಂಗಳಂ ಪಿಡಿದು ಬಳಿಸಂದು ಬಳಸಿ ನಿಂದೋಲಗಿಸೆ

– ಸುರಗಿಯ ವರಾಗಪುಂಜದ ಪೊಂಜಗುಲಿಯೊಳ್ ಪವಡಿಸಿ ಕುಸುಮ ವಿಸರದೆಸಳ ಪೊಸವಸೆಯೊಳೊಸಗೆ ಮಿಗೆ ರತಿಯುವತಿವೆರಸಿ ಗಾಡಿಯಿಂ ಕುಳ್ಳಿರ್ದ ಮದನಮಹೀರಮಣನ ನಯನೋತ್ಸವಕ್ಕೆ ಕಟ್ಟಿದಿರೊಳ್ ಸರಿಯೂಡಿನ ಬಿರುಸುಗಟ್ಟೆ ರಚಿಸಿದ ಕುರುಜೆಂಬಂತಿರಲಲರ್ಪುಡಿಯುಂ ಸೂಸುವ ಕನಕರುಚಿರನಿಚಿತ ಸುಮನೋಗಣದಿನಲಂಕೃತಿವೆತ್ತು ಸೊಂಪುಗರೆವ ಚಂಪಕಪ್ರತಾನಮುಂ, ತನ್ನಂ ಪೊತ್ತು ಮನ್ನಣೆಯಿಂ ಮುನ್ನಂ ಪೊರೆಯೇರಿಸಿ ಪೊರೆದ ಮಣಿಗರ್ಭೆಗಣಿಯರಂ ಬಾಗಿ ಬಳ್ಕಿ ಮಣಿವ ಮಾಣ್ಕೆಯಿಂ ಪಣ್ತು ಬಿಣ್ಪೊನೆಯಿನರಗಿನಿಂದ ರಾಜಕದಳಿಗಳುಂ, ನಿವ್ವೈಕಫಲದಿಂ ಬಲಂಬರಂತಣಿಪಲ್ಸಮರ್ಥಮಾಗಿ ಬಹುಫಲಂಗಳಿನೋರ್ವನಂ ತಣಿಪುವ ವಶ್ಯತರುಗಳುಂ, ನಿಜಸುರಭಿಗೆರಗುವ ಪರಮೆವರಿಯದುರುಗಲವರರವ ವ್ಯಾಜದಿಂ ನಕ್ಕಪುದೆನಿಸಿ ಸುಜನನಂತೆ ಬಹುಕಂಟಕಂಬಡೆದಿರ್ದುಮನ್ಯರ್ಗೆ ಹಿತಮಂ ಸಾರ್ಚಲೆಳಸುವ ಫಲಂಗಳಿಂ ತಳ್ತ ಬಕ್ಕೆವಲಸುಗಳುಂ, ನಂದನದೊಳಂದಂಬಡೆದು ನಲಿದಾಡುವ ಕಲಾಪಿಗಳ ಕೆಳೆತನಕ್ಕೆಳ್ತಂದು ನಿಂದ ಕಾರ್ಮುಗಿಲಂತೆ ಪೆರ್ಮೆವಡೆದ ತರುಣ ತಮಾಲತರುಗಳುಂ, ವನವನಧಿಯ ಬಡಬ ಶಿಖಾವಹನೆನೆ ಮನೋಜ್ಞಮಾಗಿ ಪೂತೊರಗುವ ಕಿಂಶುಕಸಮುದಯಮುಂ, ತಂಬೆಲರೆಂಬ ಪೊಂಬರದನಲರ್ಪೊನ್ನಂ ಪರ್ಣಕರ್ಷೋಫಲದೊಳೊರೆಯೆ ಸುರಿದು ಪರೆದ ಪೊಂಬುಡಿಯಂ ತಿಂಬುವೆತ್ತ ರಜನೀರಜಃಪಿಂಜರ ರಜೋಗಣದಿಂ ಕಟ್ಟಿದಂತರಮಾದ ಸುರಯಿಯುಂ, ಪೂಂದಳಿಗೆ ದೋರಣ ಮನೋರಣದಿಂ ಕಟ್ಟಿದಂತರಲ್ದ ಕುಸುಮಂಗಳಿಂ ಕಂಗೊಳಿಪ ಕರ್ಣಿಕಾರಂಗಳುಂ, ಕುಮುದಾಮೋದದೋಳ್ಪೊರೆದ ಹಿಮಕರಸುಧಾಕಿರಣದ ತಿರುಳಂತೆ ರಮಣೀಯಮಾದ ಪರಿಮಳಮಂ ಕಂದರ್ಪಸಹಚರಂಪರಪೊ ಕರ್ಪೂರಕದಳಿಗಳುಂ, ಗಿಳಿಕರ್ದುಕೆ ಸುರಿದ ಪರಿಪಕ್ವ ಪಳರಸದಿಂ ನೆಲನೆಲ್ಲಮಂ ಪರ್ಬಿ ಪಸರಿಸಿದಂದಂ ಗೊಳಿಪ ಸರಸತರ ದ್ರಾಕ್ಷಾಲತೆಗಳುಂ ಭ್ರಮರನಿವಹ ಪುರಾಕೃತಪುಣ್ಯದುರುಳಿಗಳಂತೆಸೆದ ಬಿರಿಮುಗುಳ್ಗಿಂ ಸಲ್ಲಲಿತಮಾದ ಮಲ್ಲಿಗೆಗಳುಂ, ಮಧುರಸಾಸಕ್ತ ಮಧುಕರವ್ರಜ ಮಧುರರವವ್ಯಾಜದಿಂ ಮಧುರವಂ ಕರಿದು ಬನಸಿರಿಯೋಳ್ನೆರಪಿ ಮಧುದೂತೀ ನಾಮಮಂ ಸಾರ್ಥಕಂ ಮಾಳ್ಪ ಮಾಧವಿಯುಂ, ಬನಗಳ್ತಲೆಯ, ಬಂದಿಗೊಳಗಾದ ಕಮಳಾಕರ ಹಿಮಕರನಾರ್ಯೈಯ್ಯಳಿಳಿತಂದ ತಾರೆಗಳಂ ಪೋಲ್ದ ಪೊಗಳಿಂ ತಳ್ತಯೂಥಿಕೆ ಗಳುಂ, ಬಿರಯಿಗಳುರಮಂ ನಟ್ಟುರ್ಚಿ ರುಧಿರಂಬೊರೆದ ಮದನಶರವಿಸರದಂತೆಸೆವ ಕುಸುಮಸಂದೋಹದಿಂ ಬಂಧುರಮಾದ ಬಂದುಗೆಯುಂ, ಭೃಂಗಭುಜಂಗನಪ್ಪಿ ಚುಂಬಿಸೆ ತೊಟ್ಟನೆ ತೊರೆದ ಬಾಯ್ದೊರೆಯಂತೆ ಬಗೆಗೊಳ್ವಮರಮರಂಮಂ ತುಳ್ಕುವಲರ್ಗಳಿಂ ಲಲಿತಮಾದ ಮಾಲತಿಯುಂ, ಹರಿವಿರೋಧಿಯೆಂದೆನ್ನಂ ಬನಸಿರಿ ಬಹಿಷ್ಕರಿಸಿ ಮಗುಳ್ದೆನ್ನನ್ನಪ್ಪ ಕಂತುವನೆಂತೊಳಕೊಂಡಳೆಂದು ಕನಲ್ದು ಪಲ್ಮೊರೆವಂತೆ ನಿಜಸುಮನಃ

ಪರಿಮಳಮಿಳದ್ಭ್ರಮರಕುಳ ಕಳಕಳರವದಿಂ ಕಲಿತಮಾದ ಕೇತಕಿಯುಂ ಪಿಂಗದೆ ಕಂಗೊಳಿಪ ಪೆಂಪನಾಳ್ದು ತನ್ನೊಳಿರೆ, ತಂಪಿನ ತವರ್ಮನೆಯುಂ ಕಂಪಿನ ಕರಾಗಾರಮುಂ ಭ್ರಮರಗಣಪ್ರಭುಮಂಟಪಮುಂ ಮದನಬಾಣಶಾಲೆಯುಂ ಮದಕಲಾಪಿಗಳ ಲಾಸ್ಯರಂಗಸ್ಥಳಮುಂ ಕೆಂಗಣ್ವಕ್ಕಿಗಳ ಸಂಗೀತಸದನಮುಂ ಮಲಯಾನಿಲನ ವಿಹಾರವೀಧಿಯುಂ ಶುಕದ್ವಿಜಂಗಳಧ್ಯಯನಸದ್ಮಮುಂ ಚೈತ್ರರಾಜನ ರಾಜಧಾನಿಯುಂ ಮದನಮಹೀಪತಿಯ ಮಹಾಶಿಬಿರಮುಂ ವನಲಕ್ಷ್ಮಿಯ ವಿನೋದಮಂದಿರಮುಮೆನಿಸಿ ಸುಮನೋಜನ ಮನೋಜ್ಞತರಮೆನಿಸಿ ಗಿರಿಕಟಕನಂದನಂ ಮುದಂಬೆತ್ತು ಕಂಗೊಳಿಸಿರ್ದುದಂತುಮಲ್ಲದೆ ॥

**ಟೀಕೆ** ॥ ಮತ್ತಂ – ಮತ್ತು, ಅಲ್ಲಿ – ಆ ಬೆಟ್ಟದೊಳು, ಸಾಂದ್ರಪುಂಜದೊಳು – ಸಾಂದ್ರ – ನಿಬಿಡವಾದ, ಮರಂದರಸ – ಬಂಡಿನ, ಭರ – ಅತಿಶಯದಿಂದ, ಭರಿತ – ತುಂಬಿದ, ಸುರಭಿಯುಕ್ತ – ಪರಿಮಳದಿಂ ಕೂಡಿದ, ವಿಕಚ – ಅರಳಿದ, ಕುಸುಮ – ಪುಷ್ಪಗಳ, ಮಂಜು, ಮನೋಹರವಾದ ಮಂಜರೀಗೊಂಚಲ್ಗಳ, ಪುಂಜದೊಳು – ಗುಂಪಿನಲ್ಲಿ, ಇರದೆ – ಸುಮ್ಮನಿರದೆ, ಎರಗಿ – ಬಿದ್ದು, ಪೊರಮಡದೆ – ಹೊರಹೊರಡದೆ, ನಿಲುಂಬಿ – ನಿಶ್ಚೇಷ್ಟವಾಗಿ, ನಿಂದು – ನಿಂತು, ನಿಬಿಡಮೆನೆ – ಅವಿರಳವೆಂಬಂತೆ, ಮುಸುಂಕಿದ – ಮುಸುಕಿದ, ಮಧುಮುದಿತ – ಜೇನಿನಿಂದ ಸಂತಸಗೊಂಡು, ಮಧುಕರನಂತೆ – ದುಂಬಿಯ ಹಾಗೆ (ಮಧುಮಾಸ ಮುದಿತ ವಸಂತ ಮಾಧವನ ಹಾಗೆ), ಪ್ರತಾಪದಿಂ – ಹೆಚ್ಚು ಬಿಸಿಲಿನಿಂದ, ಸಾಮರ್ಥ್ಯದಿಂದ, ಶ್ಯಾಮಳತೆ – ಕಪ್ಪನ್ನು, ನೆತ್ತು – ಪಡೆದು, ನಿಜಮೂಲದೋಳ್ – ತನ್ನ ಬುಡದಲ್ಲಿ, ಬಳಸಿ – ಸುತ್ತಿಕೊಂಡು, ತಳಿರ್ತ – ಚಿಗುರಿದ, ಚಂದಳಿರ್ಗಳ್ – ಕಂಪಲೆಗಳು, ಉಟ್ಟ ಪೀತಾಂಬರದಂತೆ – ಧರಿಸಿದ ಹೊಂಬಟ್ಟೆಯ ಹಾಗೆ, ಇರೆ – ಇರುತಿರಲು, ಕಲಕಂಠ – ಕೋಗಿಲೆಗಳ, ಕಲರವಂ – ಅವ್ಯಕ್ತಧ್ವನಿಯು, ಪಂಚಮಾದ – ವಿಸ್ತೃತವಾದ, ಕಂಚರದ – ಕಂಠಸ್ವರದ, ಇಂಚರಮೆನಿಸೆ – ಇನಿದಾದ ಸ್ವರವೆನಿಸಲು, ಸರಭಸಂ – ವೇಗದಿಂ ಕೂಡುವಂತೆ, ಪರಿತಂದು – ಹರಿದುಬಂದು, ಚಕ್ರಾನಿಲಂ – ಸುಳಿಗಾಳಿಯ, ಒಲೆದೊಲೆದು – ಕದಲಿಸಿ ಕದಲಿಸಿ, ಎತ್ತಿದ – ಹಾರಿಸಿದ, ಪಚ್ಚೆವರಲಂತೆ – ಪಚ್ಚೆಕಲ್ಲುಗಳ ಹಾಗೆ, ಎಸೆವ – ಶೋಭಿಸುವ, ಪಸುರ್ಮಿಡಿಗಳಿಂ – ಹಸುರು ಕಾಯಿಗಳಿಂದಲೂ, ಕೆಂಬರಲೆಂಬಂತೆ – ಕೆಂಪು ಹೂವುಗಳೋಯೆಂಬ ಹಾಗೆ ಸಾರತರಮಾದ – ರಸಮುಳ್ಳದ್ದಾದ, ದೋರೆವಣ್ಗಳಿಂದ – ಅರೆಮಾಗಿದ ಹಣ್ಣುಗಳಿಂದಲೂ, ಇಂದ್ರನೀಲ – ಕಪ್ಪುರತ್ನಗಳ, ಅಂದಂಬಡೆದು – ಸೊಗಸನ್ನು ಹೊಂದಿ, ವಿಲಸಿತಮಾದ – ಪ್ರಕಾಶಿಸುವುದಾದ, ಕಳಿವಣ್ಗಳಿಂ – ಮಾಗಿದ ಹಣ್ಣುಗಳಿಂದಲೂ, ಮಣಿಗಣಮೆನೆ – ರತ್ನಪುಂಜವನ್ನೇ, ಕಾತು – ಫಲಿಸಿ, ಒರಗುವ – ವಾಲಿದ, ಕಲ್ಪಕುಜದಂತೆ – ಕಲ್ಪವೃಕ್ಷದ ಹಾಗೆ, ರಾಜಿತಮಾದ – ಬೆಳಗುತ್ತಿರುವುದಾದ,

ರಾಜಜಂಬೂಕುಜಮಂ – ಅರಸು ನೇರಳೆ ಮರವೂ, ಧರಾವಧು – ಭೂಮಿಯೆಂಬ ಹೆಣ್ಣು, ಮಳೆಗರೆದು – ಮಳೆಯಂ ಸುರಿಸಿ, ಮುನ್ನಂ – ಮುಂಚೆ, ತನ್ನನ್ನು ಓವಿದ – ಸಲಹಿದ, ಲೇಸಂ – ಉಪಕಾರವನ್ನು, ಓಸರಿಸದೆ – ತಪ್ಪದೆ, ನೆನೆದು – ಸ್ಮರಿಸಿ, ಜೀಮೂತವಾಹನಂಗೆ – ಮೇಘವಾಹನನಾದ ಇಂದ್ರನಿಗೆ, ನಿಜ – ತನ್ನ, ಸುಧಾರಸಮಂ – ಅಮೃತರಸವನ್ನು, ಮರಕತಕಲಶದೋಳ್ – ಪಚ್ಚೆಯ ಕೊಡಗಳಲ್ಲಿ, ತೀವಿ – ತುಂಬಿ, ನಿಡುದೋಳಂ – ಉದ್ದವಾದ ಭುಜವನ್ನು, ನೆಗಪಿ – ಎತ್ತಿ, ಮೇಗಣ್ಗೆ – ಮೇಲಕ್ಕೆ, ನೀಡುಂ – ಅಧಿಕಮಾಗಿ, ನೀಡಿದಪಳ್ – ಕೊಡುತ್ತಿರುವಳು, ಎಂಬಂತೆ – ಎಂಬ ಹಾಗೆ, ರಂಜಿಪ – ಸೊಗಸನ್ನುಂಟುಮಾಡುವ, ನಾಳಿಕೇರಮುಂ – ತೆಂಗಿನಮರದ ಹಾಗೆ, ರತ್ನಗರ್ಭೆ – ಮಣಿಗಳು ಬಸುರಲ್ಲಿವುಳ್ಳ ಭೂದೇವಿಯು ತನ್ನ, ಸಿರಿಯಂ – ಭಾಗ್ಯವನ್ನು, ಖಚರರ್ಗೆ – ಆಕಾಶದಲ್ಲಿ ತಿರುಗುವ ದೇವತೆಗಳಿಗೆ, ಅರುಪಲ್ – ಅರಿಕೆ ಮಾಡುವುದಕ್ಕೆ, ಎಳಸಿ – ಬಯಸಿ, ಮರಕತಮಣಿಯ – ಪಚ್ಚೆಗಳ, ಚಲದ್ಗುಚ್ಛಂಗಳಂ – ಕದಲುತ್ತಿರುವ ಗೊಂಚಲುಗಳುಳ್ಳ, ತೋರಣಂಗಟ್ಟಿದಂತೆ – ಅಲಂಕಾರದ ಅಡ್ಡಸರವಾಗಿ ಕಟ್ಟಿದ ಹಾಗೆ, ಪಸುರ್ಗಾಯ್ಗೊಡಂಬೆಗಳಿಂ – ಹಸರು ಕಾಯಿಗಳ ಗೊನೆಗಳಿಂದ, ಕಂಗೊಳಿಪ – ಪ್ರಕಾಶಿಸುವ, ಕೌಂಗುವರಂಗಳುಂ – ಅಡಿಕೆ ಮರಗಳೂ, ವಿಜಯಯಾತ್ರೆಗೆ – ಲೋಕವನ್ನು ಗೆಲ್ಲುವ ಪ್ರಯಾಣಕ್ಕೆ, ತೆರಳಲ್ – ಹೊರಡಲು, ಉಜ್ಜುಗಿಪ – ಉದ್ಯೋಗಿಸುವ, ಮಕರಧ್ವಜ – ಮನ್ಮಥನೆಂಬ, ಮಹಾರಾಜಂಗೆ – ದೊಡ್ಡ ದೊರೆಗೆ, ಶುಭ ಮುಹೂರ್ತದೋಳ್ – ಮಂಗಳಸಮಯದಲ್ಲಿ, ಮಧುಸಚಿವಂ – ಚೈತ್ರ ಮಾಸವೆಂಬ ಮಂತ್ರಿಯು, ಇಂಬರಿದು – ಅನುಕೂಲವಂ ತಿಳಿದು, ಪೊಯ್ದು – ನಿಡಿಸಿದ, ಇಂದ್ರಗೋಪದ – ಭರಣಿ ಹುಳುಗಳಂತೆ, ಚಿತ್ರವರ್ಣವಾದ ಗುಡಾರದಂತೆ, ಪಟಗೃಹದ ಹಾಗೆ, ಕಾಂತಮಾದ – ಚಲುವಾದ, ಕೆಂದಳಿರ್ – ಕೆಂಪು ಚಿಗುರುಗಳು, ತೀವಿದ – ತುಂಬಿದ, ಕೆಂಕೆಲಲ್ಲಿಯುಂ – ಅಸುಗೆಮರವು, ಬನಂಬೊಕ್ಕು – ವನವನ್ನು ಹೊಕ್ಕು, ಬಾಯ್ವಿಡುವ – ಬಾಯಿಬಿಡುವ, ಬಿರಯಿಗಳ – ವಿರಹಿಗಳ, ಬಿಸುಸುಯಿರ್ – ಬಿಸಿಯಾದ ಉಸುರು, ಸುಡೆ – ದಹಿಸಲು, ಬಿಕ್ಕನೆ – ಬೇಗನೆ ಬೆರಿದ – ಶೀಳೀದ, ರತಿಪತಿಯ – ಕಾಮನ, ಮಣಿಕರಂಡಕದ – ರನ್ನದ ಡಬ್ಬಿಯ, ಚೆಲ್ವಂ ತಳೆದು – ಚಲುವಿಕೆಯನ್ನು ಹೊಂದಿ, ಬೀಡೆ – ಬಿಚ್ಚಿಹೋಗುವಂತೆ, ವರಿದು – ಹರಿದು, ಬೀಜಂಗಳಂ ಸೂಸುವ – ಬಿತ್ತುಗಳನ್ನು ಸುರಿಸುವ, ಪಣ್ಗಳಿಂ – ಪಣ್ಗಳಿಂ, ಸಂಗಳಿಸಿದ – ಸಂಘಟಿತಮಾದ, ದಾಡಿಮಂಗಳಂ – ದಾಳಿಂಬೆಯ ಮರಗಳು, ಪೂವಲಿಯಂ – ಪುಷ್ಪಬಲಿಯಂ, ಕೆದರ್ದು – ಚೆಲ್ಲಿ, ಲತಾನರ್ತಕಿಯರ್ – ಬಳ್ಳಿಗಳೆಂಬ ನಟಿಯರು, ಆಡೆ – ಕುಣಿಯಲು, ಮಧುಕರಂಗಳ್ – ತುಂಬಿಗಳು

(ಮುಂದುವರಿಯುವುದು)

# ಗಾನಯೋಗಿ ಪಂಚಾಕ್ಷರಿ ಗವಾಯಿ

**ಡಾ. ರಮಾ ವಿ. ಬೆಣ್ಣೂರ್**

(ಮುಂದುವರಿದಿದೆ)

ಇಂತಹ ಮಹಾನ್ ಧರ್ಮಜ್ಯೋತಿ ಕೊರಗತೊಡಗಿದಾಗ ಸಹಜವಾಗಿಯೇ ಎಲ್ಲರಿಗೂ ಗಾಬರಿಯಾಯಿತು. ಆದರೆ ಗವಾಯಿಗಳಿಗೆ ಇದರ ಸುಳಿವೇ ಇರಲಿಲ್ಲ. ಕೊನೆಗೆ ಮಠದ ಶಿಷ್ಯರೊಬ್ಬರು ಗವಾಯಿಗಳನ್ನು ಭೇಟಿ ಮಾಡಿ "ನಿಮ್ಮನ್ನು ಅಷ್ಟು ಪ್ರೀತಿಯಿಂದ ಸಾಕಿ ಸಲುಹಿದ ಗುರುಗಳಿಗೆ, ವಿದ್ಯೆ ಕಲಿಸಿದ ಮಹಾಸ್ವಾಮಿಗಳಿಗೆ ನೀವು ಪ್ರತಿಯಾಗಿ ನೀಡುವ ಕಾಣಿಕೆ ಇದೇಯೇ! ಚಿಂತೆಯಿಂದ ಗುರುಗಳು ಕೃಶರಾಗುತ್ತಿರುವುದನ್ನು ನೋಡಿ ಇಡೀ ಸಮಾಜವೇ ನಿಮ್ಮ ಮೇಲೆ ಕೋಪಗೊಂಡಿದೆ. ನಿಮಗೆ ಕನ್ಯೆ ಹುಡುಕುವ ಚಿಂತೆಯಲ್ಲಿ ಸ್ವಾಮಿಗಳಿಗೆ ಏನಾಗುತ್ತದೆಯೋ ಹೇಳಲಾಗುವುದಿಲ್ಲ. ಅಂತಹ ಗುರುವಿಗಿಂತಲೂ ನಿಮಗೆ ಲಗ್ನವೇ ದೊಡ್ಡದಾಯಿತೇ?" ಎಂದು ನಿಷ್ಠುರವಾಗಿ ನುಡಿದಾಗ ಪಂಚಾಕ್ಷರಿಗಳು ಹೌಹಾರಿದರು. ಇದರ ಸುಳಿವೇ ಇರದ ಅವರಿಗೆ ಸಿಡಿಲು ಬಡಿದಂತಾಯಿತು. ಮಮ್ಮಲ ಮರುಗಿದ ಅವರು ಗುರುಗಳ ಬಳಿಗೆ ಧಾವಿಸಿದರು. "ನಿಮ್ಮಂತಹ ಗುರುವಿನ ಮನಸ್ಸನ್ನು ನೋಯಿಸಿದ ನಾನು ಪಾಪಿ, ಕ್ಷಣಿಕ ಸುಖಕ್ಕಾಗಿ ಆಸೆಪಟ್ಟೆನಲ್ಲ" ಎಂದು ಗುರುಗಳ ಪಾದಗಳನ್ನು ಪಶ್ಚಾತ್ತಾಪದ ಕಣ್ಣೀರಿನಿಂದ ತೊಳೆದರು. "ನನ್ನ ಮದುವೆಯ ಆಲೋಚನೆಯನ್ನು ಕೈಬಿಡಿ. ನನ್ನಿಂದಾದ ಘೋರ ಅಪರಾಧವನ್ನು ಮನ್ನಿಸಿ" ಎಂದರು. "ನಾನು ಇನ್ನು ಕನಸು ಮನಸಿನಲ್ಲಿಯೂ ಲಗ್ನದ ವಿಚಾರ ಯೋಚಿಸುವುದಿಲ್ಲ" ಎಂದು ಹೇಳಿದಾಗ ಶ್ರೀಗಳವರಿಗೆ ಅಚ್ಚರಿ. ಯಾರದಾದರೂ ಒತ್ತಾಯಕ್ಕೆ ಮಣಿದು ಈ ಮಾತುಗಳನ್ನಾಡುತ್ತಿದ್ದಾರೋ ಎಂಬ ಅನುಮಾನ ಕೂಡ. ಅವರು ಶಿಷ್ಯನಿಗೆ ಸಮಾಧಾನ ಮಾಡುತ್ತಾ "ಬ್ರಹ್ಮಚರ್ಯವನ್ನು ಪಾಲಿಸುವುದು ನಿಜಕ್ಕೂ ಕಷ್ಟದ ಕೆಲಸ. ನಿನ್ನ ಲಗ್ನ ಮಾಡಿಸುವುದು ನನ್ನ ಜವಾಬ್ದಾರಿ. ಬೇರೆಯವರ ಮಾತು ಕೇಳಿ ಬ್ರಹ್ಮಚರ್ಯದ ಪ್ರತಿಜ್ಞೆ ಕೈಗೊಳ್ಳಬೇಡ" ಎಂದು ಬುದ್ಧಿವಾದ ಹೇಳಿದರು. ಅವರ ಮಾತುಗಳನ್ನು ಕೇಳಿ ಕಣ್ಣೀರು ಸುರಿಸುತ್ತಾ ತಮ್ಮ ಅಚಲ ನಿರ್ಧಾರವನ್ನು ಅವರಿಗೆ ಮನದಟ್ಟು ಮಾಡಿದರು ಗವಾಯಿಗಳು. ಅಂದಿನಿಂದ ಕಾಮವಾಸನೆಯೂ ಅವರ ಬಳಿ ಸುಳಿಯದಾಯಿತು. ತ್ರಿಕರಣಪೂರ್ವಕವಾಗಿ ಬ್ರಹ್ಮಚರ್ಯ ವ್ರತದ ಪಾಲನೆಗೆ

ಮೊದಲಿಟ್ಟರು. ಮತ್ತೆಂದೂ ಅದರಿಂದ ವಿಮುಖರಾಗಲಿಲ್ಲ.

ಹೀಗೇ ಹಾನಗಲ್ಲ ಕುಮಾರಸ್ವಾಮಿಗಳ ಮಾತನ್ನು ಆಜ್ಞೆಯೆಂದೇ ಸ್ವೀಕರಿಸುತ್ತಿದ್ದ ಪಂಚಾಕ್ಷರಿ ಗವಾಯಿಗಳು ಗುರುಗಳಂತೆಯೇ ತಾವೂ ಖಾದಿ ವಸ್ತ್ರವನ್ನೇ ತೊಡುತ್ತಿದ್ದರು. ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆಯುವುದೇ ಅವರ ಬಾಳಿನ ಗುರಿಯಾಯಿತು. ಶ್ರೀಗಳು ಅವರಿಗೆ ಬಿದರಿ ಪಟ್ಟದ್ದೇವರಾದ ಶ್ರೀ ಪ್ರಭುಕುಮಾರ ಶಿವಾಚಾರ್ಯರನ್ನು ಕರೆಯಿಸಿ ಅವರಿಂದ ಶಿವದೀಕ್ಷೆಯನ್ನು ಕೊಡಿಸಿದರು. ಅಂದಿನಿಂದ ಗವಾಯಿಗಳು ಗುರು ಲಿಂಗ ಜಂಗಮದಲ್ಲಿ ಶ್ರದ್ಧೆಯಿಂದ ನಡೆದುಕೊಳ್ಳುತ್ತ ವಿಧ್ಯುಕ್ತವಾಗಿ ತ್ರಿಕಾಲಪೂಜೆಯನ್ನು ಮಾಡುತ್ತ ಗುರುಗಳು ತೋರಿಕೊಟ್ಟ ಭಕ್ತಿ–ವಿರಕ್ತಿ ಮಾರ್ಗದಲ್ಲಿ ದೃಢವಾಗಿ ನಡೆಯತೊಡಗಿದರು. ಲಿಂಗವ್ಯಸನಿ, ಜಂಗಮಪ್ರೇಮಿಯಾದರು. ತಮ್ಮ ನಿತ್ಯಾಚರಣೆಯಲ್ಲಿ ಅಷ್ಟಾವರಣವೇ ಪ್ರಾಣ, ಷಟ್ಸ್ಥಲವೇ ಆತ್ಮ ಎಂಬಂತೆ ಬದುಕಲಾರಂಭಿಸಿದರು.

ಅವರು ಪ್ರಾರಂಭಿಸಿದ ಸಂಗೀತಶಾಲೆಗೆ ಬರುವ ವಿದ್ಯಾಕಾಂಕ್ಷಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗತೊಡಗಿತು. 'ಶಾಲೆಯು ಒಂದೆಡೆ ಇರದೆ ಲೋಕಮಧ್ಯದಲ್ಲಿ ಸಂಚರಿಸುತ್ತಿರಲಿ. ನಿನ್ನ ವಿದ್ಯಾಪ್ರಸಾರವು ಸಾರ್ವತ್ರಿಕವಾಗಲಿ' ಎಂದ ಗುರುವಿನ ಆಣತಿಯಂತೆ ಅವರು ತಮ್ಮ ಸಂಗೀತಶಾಲೆಯನ್ನು ಸಂಚಾರಿ ಶಾಲೆಯನ್ನಾಗಿ ಪರಿವರ್ತಿಸಿದರು. ಒಂದೊಂದು ಊರಿನಲ್ಲಿ 2–3 ವರುಷಗಳ ಕಾಲ ನಿಂತು, ಶಿಕ್ಷಣ ನೀಡಿ ಮತ್ತೆ ಮುಂದಿನ ಊರಿಗೆ ಹೊರಡುತ್ತಿದ್ದರು. ನಿಡಗುಂದಿ, ಕೊಪ್ಪ, ಬಂಕಾಪುರ, ರಾಣೆಬೆನ್ನೂರು ತಾಲೋಕಿನ ಲಿಂಗದಹಳ್ಳಿ, ಗಜೇಂದ್ರಗಡ, ಗುಳೇದಗುಡ್ಡ ಹೀಗೆ ತಮ್ಮೊಡನೆ ಸುಮಾರು ಮೂವತ್ತು ಜನ ಅಂಧ ಶಿಷ್ಯರು, ತಂಬೂರಿ, ತಬಲಾ, ಹಾರ್ಮೋನಿಯಂ, ಪಿಟೀಲು, ಸಾರಂಗಿ ಮುಂತಾದ ವಾದ್ಯಗಳು – ಇವನ್ನೆಲ್ಲಾ ಕಟ್ಟಿಕೊಂಡು ಅಪರಿಚಿತ ಸ್ಥಳಗಳಲ್ಲಿ ಅವರು ಸಂಚಾರಿ ಶಾಲೆಯನ್ನು ಹೇಗೆ ನಡೆಸಿದ್ದಿರಬಹುದೆಂಬುದನ್ನು ಊಹಿಸುವುದೂ ಕಷ್ಟ. ಅಷ್ಟು ಜನರ ಊಟ, ವಸತಿ, ಖರ್ಚುಗಳು ಒಂದೇ ಎರಡೇ? ಅವರಿಗಿದ್ದ ಏಕೈಕ ಶ್ರೀರಕ್ಷೆ ಎಂದರೆ ಗುರುವಿನ ಆಶೀರ್ವಾದ. ಅದೇ ಅವರ ನಿಜವಾದ ಸಂಪತ್ತು. ಸಂಗೀತಕಲೆಯನ್ನು ಕರ್ನಾಟಕದಾದ್ಯಂತ ಹರಡಲು ಟೊಂಕ ಕಟ್ಟಿ ನಿಂತ ಮಂದಹಾಸದ ಪಂಚಾಕ್ಷರಿ ಗವಾಯಿಗಳು ಕಣ್ಣಿರುವ ಯಾವ ವ್ಯಕ್ತಿಯೂ ಮಾಡಲಾರದಷ್ಟು ಬೃಹತ್ತಾದ ಕಾರ್ಯವನ್ನು ಮಾಡಿ ಉನ್ನತ ಸಮಾಜಸೇವೆಗೆ ನಾಂದಿ ಹಾಡಿದ್ದಲ್ಲದೆ ಅದೇ ನಿಟ್ಟಿನಲ್ಲಿ ತಮ್ಮ ಶಿಷ್ಯರೂ ಸಾಗುವಂತಹ ಪ್ರೇರಕಶಕ್ತಿಯಾಗಿ ಬೆಳೆದರು. ಸಂಗೀತ ಒಂದೇ ಅಲ್ಲದೆ ಅವರ ಶಾಲೆಯಲ್ಲಿ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯವನ್ನೂ ಕಲಿಸಲು ಏರ್ಪಾಡು ಮಾಡಿದರು. ಸಂಚಾರಿ ಶಾಲೆಯಲ್ಲಿ ಅವರೇ ಮೌಖಿಕವಾಗಿ ಕನ್ನಡ ಮತ್ತು ಸಂಸ್ಕೃತಗಳನ್ನು ಕಲಿಸಿದರೆ, ಖಾಯಂ ಪಾಠಶಾಲೆಯಲ್ಲಿ ಮಹಾಲಿಂಗಯ್ಯನವರು ಕಲಿಸುತ್ತಿದ್ದರು. ಇವರ ಸಂಗೀತಶಾಲೆಯ ಅಭಿವೃದ್ಧಿಯನ್ನು ಕಂಡು ಆ ಕಾಲದ ಅನೇಕ ಮಹನೀಯರು

ಮೆಚ್ಚುಗೆ ಸೂಚಿಸಿದ್ದಾರೆ. ಅವರಲ್ಲಿ ವರಕವಿ ದ.ರಾ. ಬೇಂದ್ರೆ, ಫ.ಗು. ಹಳಕಟ್ಟಿ, ಗರೂಡ ಸದಾಶಿವರಾಯರು ಮುಂತಾದವರಿದ್ದಾರೆ.

ಈ ಸಂಚಾರಿ ಶಾಲೆಗಳನ್ನು ನಡೆಸುವಾಗ ಅವರು ಎದುರಿಸಿದ ಕಷ್ಟನಷ್ಟಗಳೇನೂ ಕಡಿಮೆಯಾಗಿರಲಿಲ್ಲ. ಶಿಷ್ಯರ ಸಂಖ್ಯೆ ನೂರನ್ನು ದಾಟಿದಾಗ ಶಾಲೆಯನ್ನು ನಿರ್ವಹಿಸುವುದು ಅತ್ಯಂತ ದುಸ್ತರವಾಯಿತು. ಆಗ ಅವರ ಶಿಷ್ಯರಾಗಿದ್ದ ಪುಟ್ಟರಾಜ ಗವಾಯಿಗಳ ಸಲಹೆಯಂತೆ 'ಶ್ರೀ ಗುರು ಕುಮಾರೇಶ್ವರ ಕೃಪಾಪೋಷಿತ ನಾಟಕ ಮಂಡಳಿ'ಯನ್ನು ಆರಂಭಿಸಿ ನಾಟಕ ಪ್ರದರ್ಶನಗಳನ್ನು ನೀಡತೊಡಗಿದರು. ಈ ನಾಟಕ ಕಂಪನಿಯು ಹಲವಾರು ಧಾರ್ಮಿಕ, ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸುತ್ತಿದ್ದ ಸಂಚಾರಿ ಸಂಗೀತ ಶಾಲೆಯ ಖರ್ಚುವೆಚ್ಚವನ್ನು ಕೆಲ ಕಾಲ ನಿಭಾಯಿಸಿತು. ಕುಮಾರಸ್ವಾಮಿಗಳು ಬದುಕಿರುವವರೆಗೂ ಈ ಶಾಲೆಯ ಕಷ್ಟಕಾಲದಲ್ಲಿ ನೆರವಾಗುತ್ತಿದ್ದರು. 1930ರಲ್ಲಿ ಅವರು ಲಿಂಗೈಕ್ಯರಾದ ಮೇಲೆ ಶಾಲೆಯ ಪಾಲಿಗೆ ಕಷ್ಟಗಳ ಸರಮಾಲೆಯೇ ಪ್ರಾರಂಭವಾಯಿತೆನ್ನಬೇಕು. ಇದ್ದ ನೂರಾರು ಜನ ಶಿಷ್ಯರಲ್ಲಿ ಬಹುತೇಕ ಮಕ್ಕಳು ಹುಟ್ಟುಕುರುಡರು. ಒಂದು ಮಗು ಕುರುಡನಾಗಿದ್ದರೆ ಅವನನ್ನು ಸಲಹುವುದೇ ಕಷ್ಟ. ಅಂತಹುದರಲ್ಲಿ ಇಷ್ಟೊಂದು ಮಂದಿ ಕುರುಡ ಮಕ್ಕಳು! ಗವಾಯಿಗಳ ಆತ್ಮವಿಶ್ವಾಸವೊಂದೇ ಬೆನ್ನ ಹಿಂದಿನ ಶ್ರೀರಕ್ಷೆಯಾಗಿತ್ತು. ಗದಗದ ಬಳಿಯ ಹೊಂಬಳದಲ್ಲಿ ಮೊಕ್ಕಾಂ ಮಾಡಿದ್ದಾಗ ಗವಾಯಿಗಳ ಆರ್ಥಿಕ ಸ್ಥಿತಿಯೊಡನೆ ಅವರ ಆರೋಗ್ಯವೂ ಕ್ಷೀಣಿಸತೊಡಗಿತು. ಒಂದೇ ಸಮನೆ ನಡೆಸಿದ ಸಂಚಾರವು ಅವರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರತೊಡಗಿತ್ತು.

ಗವಾಯಿಗಳ ತೊಂದರೆಗಳನ್ನು ಗಮನಿಸಿದ ಕೆಲವು ಜನ ಕಲಾಪೋಷಕರು "ಮೈಸೂರು ಅರಸರನ್ನು ಭೇಟಿ ಮಾಡಿದರೆ ನೆರವು ಸಿಗಬಹುದು" ಎಂದು ಸಲಹೆ ನೀಡಿದರು. ಆಯ್ದ ಐವತ್ತು ಮಕ್ಕಳೊಂದಿಗೆ ಅಲ್ಲಲ್ಲಿ ಸಂಗೀತ ಕಾರ್ಯಕ್ರಮ ನೀಡುತ್ತಾ ಅವರು ಬೆಂಗಳೂರಿಗೆ ಬಂದು ತಲುಪಿದರು. ಚಿಕ್ಕಪೇಟೆಯಲ್ಲಿದ್ದ ಗೌಡರ ವೀರಭದ್ರಪ್ಪನವರ ಛತ್ರದಲ್ಲಿ ತಂಗಿದರು. ಗುರುಲಿಂಗಜಂಗಮನಿಷ್ಠರಾಗಿದ್ದ ವೀರಭದ್ರಪ್ಪನವರ ನೆರವಿನಿಂದ ಹಲವಾರು ಕಾರ್ಯಕ್ರಮಗಳು ನಡೆದುವು. ಬೆಂಗಳೂರಿನ ಸಂಗೀತ ವಿದ್ವಾಂಸರ ಪ್ರಶಂಸೆಯೂ ಸಿಕ್ಕಿತು. ಜೊತೆಗೆ ಅವರಿಗೆ 'ಉಭಯ ಗಾಯನಾಚಾರ್ಯ' ಎಂಬ ಬಿರುದನ್ನೂ ನೀಡಿ ಗೌರವಿಸಲಾಯಿತು. ಅಲ್ಲಿಂದ ಮುಂದೆ ಮೈಸೂರನ್ನು ತಲುಪಿದ ಗವಾಯಿಗಳು ಮಹಾರಾಜರ ಧರ್ಮಛತ್ರದಲ್ಲಿ ಬಿಡಾರ ಹೂಡಿದರು.

ಮಹಾರಾಜರ ನೆರವನ್ನು ಕೋರಿ, ಪತ್ರವನ್ನು ಸಿದ್ಧಪಡಿಸಿ ಅದನ್ನು ನೀಡಬೇಕೆಂದಿರುವಾಗ ಮಹಾರಾಜರ ಅನಾರೋಗ್ಯದ ಕಾರಣ ಅದನ್ನು ದಿವಾನರ ಕೈಯಲ್ಲಿ ನೀಡಬೇಕಾಯಿತು. ಯಾರನ್ನೂ ಸುಲಭವಾಗಿ ನಂಬದ ದಿವಾನರು 'ತಾವು

ಶಿವಯೋಗ ಮಂದಿರದವರೆಂದು ನಂಬುವುದು ಹೇಗೆ? ನಿಮ್ಮ ಸಂಚಾರಿ ಶಾಲೆಯು ಶಿವಯೋಗ ಮಂದಿರದ ಅಂಗಸಂಸ್ಥೆ ಎಂದು ಅಲ್ಲಿಂದ ಪ್ರಮಾಣಪತ್ರ ತಂದರೆ, ನಿಮಗೆ ನೆರವು ಸಿಗುತ್ತದೆ' ಎಂದು ಹೇಳಿದರು. ಅದನ್ನು ಕೇಳಿದ ಗವಾಯಿಗಳು ಅಂದೇ ಶಿವಯೋಗ ಮಂದಿರಕ್ಕೆ ಪತ್ರ ಬರೆದರು. ಹದಿನೈದು ಇಪ್ಪತ್ತು ದಿನಗಳಾದರೂ ಉತ್ತರ ಬರಲೇ ಇಲ್ಲ. 50–60 ಮಕ್ಕಳ ಊಟ–ಉಪಹಾರ, ಈಗಾಗಲೇ ಬಹಳಷ್ಟು ಪರಿಚಿತರ ನೆರವು ಪಡೆದಾಗಿದೆ. ತಾವು ಬೇಕಾದರೆ ಉಪವಾಸ ಇರಬಹುದು, ಆದರೆ ತಮ್ಮನ್ನೇ ನಂಬಿ ಬಂದಿರುವ ಮಕ್ಕಳ ಗತಿ ಏನೆಂಬ ಚಿಂತೆ ಗವಾಯಿಗಳವರನ್ನು ಕಾಡತೊಡಗಿತು. ಮೂರು ತಿಂಗಳು ಕಳೆದರೂ ಶಿವಯೋಗ ಮಂದಿರದಿಂದ ಪತ್ರ ಬರಲೇ ಇಲ್ಲ. ಅದೇ ಹೊತ್ತಿಗೆ ಮಹಾರಾಜರ ನಿಧನದ ಸುದ್ದಿ ಬರಸಿಡಿಲಿನಂತೆ ಎರಗಿತು. ಈಗಾಗಲೇ ಸಾವಿರಾರು ರೂಪಾಯಿಗಳ ಸಾಲದ ಹೊರೆಯೂ ಬೆನ್ನೇರಿತ್ತು. ಅದನ್ನು ತೀರಿಸುವ ಚಿಂತೆ, ಮಕ್ಕಳ ಊಟ ವಸತಿಯ ಚಿಂತೆ. ಬಂದ ದಾರಿಗೆ ಸುಂಕವಿಲ್ಲೆಂದು ಗವಾಯಿಗಳು ಊರಿಗೆ ಹಿಂದಿರುಗಿದರು. ಅವರಿಗೆ ಭರವಸೆಯ ಮಾತುಗಳನ್ನಾಡಿ, ನಾಟಕ ಪ್ರದರ್ಶನದ ಮೂಲಕ ಪರಿಸ್ಥಿತಿಯನ್ನು ಸುಧಾರಣೆ ಮಾಡೋಣ ಎಂದು ಸಾಂತ್ವನ ಹೇಳಿದವರು ಅವರ ಶಿಷ್ಯ ಪುಟ್ಟರಾಜ ಗವಾಯಿಗಳೇ. ಅದು ನಿಜವೂ ಆಯಿತು. 'ಶ್ರೀ ಕುಮಾರೇಶ್ವರ ಕೃಪಾಪೋಷಿತ ನಾಟಕ ಮಂಡಳಿ'ಯು ಅವರ ಕೈಬಿಡಲಿಲ್ಲ. ಮಾಡಿದ್ದ ಸಾಲಗಳೆಲ್ಲ ತೀರಿದುವು. ಕ್ರಮೇಣ ಹಲವಾರು ಕಾರಣಗಳಿಂದ ನಾಟಕ ಮಂಡಳಿಯು ನಷ್ಟಕ್ಕೆ ಈಡಾಯಿತು. ಅದು ಗದಗಿನಲ್ಲಿ ಮೊಕ್ಕಾಂ ಹಾಕಿದ್ದಾಗ ಗಾಯದ ಮೇಲೆ ಬರೆ ಎಳೆದಂತೆ ನಾಡಿನಾದ್ಯಂತ ಭೀಕರ ಬರಗಾಲ ಉಂಟಾಯಿತು. ಮಕ್ಕಳು, ಕಲಾವಿದರು ಎಲ್ಲ ಸೇರಿ ಒಟ್ಟು 120ಕ್ಕಿಂತಲೂ ಹೆಚ್ಚು ಜನರ ಹೊಟ್ಟೆಪಾಡು ಹೇಗೆಂಬ ಪ್ರಶ್ನೆ ಎದುರಾಯಿತು. ಕೂಡಿಟ್ಟ ದವಸ ಧಾನ್ಯಗಳು ಕರಗುತ್ತಿದ್ದುವು. ಬರಗಾಲ ತೀರುವವರೆಗೆ ಸಂಚಾರಿ ಸಂಗೀತ ಶಾಲೆಯನ್ನು ಮುಚ್ಚಿ, ವಿದ್ಯಾರ್ಥಿಗಳನ್ನು ಅವರವರ ಊರಿಗೆ ಕಳುಹಿಸುವುದೇ ಉತ್ತಮ ಎಂಬ ಸಲಹೆಯನ್ನು ಗದುಗಿನ ಹಿರಿಯರು ನೀಡಿದಾಗ ಪಂಚಾಕ್ಷರಿಯವರು ನೀಡಿದ ಉತ್ತರ ಅವರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಂತೆ ತೋರುತ್ತದೆ: "ಬರಗಾಲ ಬಂತೆಂದು ನೀವು ಕಣ್ಣಿರುವ ನಿಮ್ಮ ಮಕ್ಕಳನ್ನು ಬೇರೆಡೆಗೆ ಕಳುಹಿಸುತ್ತೀರಾ? ಅಂದಮೇಲೆ ಕಣ್ಣು ಕಾಣದ ಈ ಮಕ್ಕಳನ್ನು ಕಳುಹಿಸಿ ನಾನು ಯಾವ ಪಾಪ ಕಟ್ಟಿಕೊಳ್ಳಲಿ? ಅವರ ಊರುಗಳಲ್ಲಿ ಯಾವ ಪರಿಸ್ಥಿತಿ ಇರುತ್ತದೋ? ಅವರ ಊಟಕ್ಕೂ ತೊಂದರೆ ಇದ್ದರೆ? ಅವರು ಅಲ್ಲಿ ನರಳುವಾಗ ನಾನು ಇಲ್ಲಿ ಹೊಟ್ಟೆತುಂಬ ಉಣ್ಣಲು ಸಾಧ್ಯವೆ? ನಾನು ಉಂಡರೆ, ಅವರೂ ಉಣ್ಣುತ್ತಾರೆ. ಇಲ್ಲವಾದಲ್ಲಿ ಅವರೂ ಉಪವಾಸ ಇರುತ್ತಾರೆ. ನನ್ನ ಸಂಗೀತವಾದ್ಯಗಳನ್ನು ಮಾರಿಯಾದರೂ ಅವರನ್ನು ಸಾಕುತ್ತೇನೆಯೇ ವಿನಾ ಅವರನ್ನು ಅಗಲಿ ಇರಲಾರೆ' ಎಂದು ಗದ್ಗದಿತರಾದರು.

ಶಿಷ್ಯವಾತ್ಸಲ್ಯ ಎಂದರೆ ಇದೇ ಅಲ್ಲವೆ? ಹೊರಗಣ್ಣಿಲ್ಲದಿದ್ದರೂ ಅದೆಂತಹ ವಾತ್ಸಲ್ಯ, ಅಂತಃಕರಣ ಆ ಮಾತೃಹೃದಯದಲ್ಲಿ! ಅವರ ಮಾತುಗಳನ್ನು ಕೇಳುತ್ತಿದ್ದ ಗಣ್ಯರ, ಅಂಧ ಮಕ್ಕಳ ಕಣ್ಣಲ್ಲಿ ನೀರು.

ಗದಗಿನ ಶ್ರೀಮಂತ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದ ಬಸರಿಗಿಡದ ವೀರಪ್ಪನವರದು ಬಡವರಿಗಾಗಿ ಕರಗುವ ಹೃದಯ. ಬರಗಾಲದಲ್ಲಿ ಸಾವಿರಾರು ಜನ ಬಡಬಗ್ಗರಿಗಾಗಿ ಅನ್ನಛತ್ರವನ್ನು ಆರಂಭಿಸಿದುದಲ್ಲದೆ ಅವರಿಗೆ ತಮ್ಮ ಮೋಟಾರು ಕಂಪನಿಯಲ್ಲಿ ಉಚಿತವಾಗಿ ಓಡಾಡುವ ಸೌಕರ್ಯವನ್ನೂ ಒದಗಿಸಿದ್ದರು. ಜನ ಅವರನ್ನು 'ಬರಗಾಲದ ಬಂಧು' ಎಂದೇ ಕರೆಯುತ್ತಿದ್ದರು. ಬದುಕಿನಲ್ಲಿ ಬಡತನವನ್ನು ಉಂಡಿದ್ದ ಅವರಿಗೆ ಕಷ್ಟದ ಬಗ್ಗೆ ಅರಿವಿತ್ತು. ಹೀಗಾಗಿ ಇತರರ ಕಷ್ಟಕ್ಕೆ ಸ್ಪಂದಿಸುವ ಹೃದಯವೈಶಾಲ್ಯವಿತ್ತು. ತಮ್ಮ ಆರೋಗ್ಯವನ್ನೂ ಲಕ್ಷಿಸದೆ ಅಂಧ ಮಕ್ಕಳೊಡನೆ ಊರೂರು ಅಲೆಯುತ್ತಿದ್ದ ಗವಾಯಿಗಳ ಬಗ್ಗೆ ಅವರಿಗೆ ಬಲು ಗೌರವ. ಹದಗೆಡುತ್ತಿದ್ದ ಗವಾಯಿಗಳ ಆರೋಗ್ಯದ ಚಿಂತೆಯಿಂದ ಅವರು ಅದಕ್ಕೊಂದು ಪರಿಹಾರ ಮಾಡಬೇಕೆಂದು ನಿಶ್ಚಯಿಸಿದರು. ಒಮ್ಮೆ ಅವರು, "ಬುದ್ಧೀ, ತಮಗೂ ಐವತ್ತು ವರುಷಗಳಾಯಿತು. ತಮ್ಮ ಆರೋಗ್ಯವನ್ನೂ ನೋಡಿಕೊಳ್ಳಬೇಕಲ್ಲವೆ? ಇನ್ನು ನಾಟಕ ಮಂಡಳಿ ಮತ್ತು ಸಂಚಾರಿ ಶಾಲೆಯನ್ನು ನಿಲ್ಲಿಸಿ. ನಾನು ಒಂದು ಎಕರೆ ಜಮೀನನ್ನು ಕೊಡುತ್ತೇನೆ. ಅಲ್ಲಿ ಕಟ್ಟಡ ಕಟ್ಟಿಸಿಕೊಡುತ್ತೇನೆ. ನೀವು ಇಲ್ಲೇ ನೆಲೆಸಿ. ನಾಟಕ ಮಂಡಳಿಯ ನೇತೃತ್ವವನ್ನು ಪುಟ್ಟರಾಜರಿಗೆ ವಹಿಸಿ' ಎಂದು ಸಲಹೆ ನೀಡಿದರು. ಈ ದಾನಿಗಳ ಮೂಲಕ ಕುಮಾರ ಶಿವಯೋಗಿಗಳೇ ಈ ಮಾತುಗಳನ್ನು ಆಡಿಸುತ್ತಿದ್ದಾರೆ ಎಂಬ ಭಾವನೆ ಗವಾಯಿಗಳಿಗೆ ಉಂಟಾಯಿತು. ಕೃತಜ್ಞತೆಯಿಂದ ಅವರ ಮನವಿಯನ್ನು ಒಪ್ಪಿಕೊಂಡರು. ಹೀಗೆ ಗದುಗಿನ ವೀರೇಶ್ವರ ಪುಣ್ಯಾಶ್ರಮಕ್ಕೆ ನಾಂದಿ ಆಯಿತು. ಆರಂಭದಲ್ಲಿ ಪಂಚಾಕ್ಷರಿಗಳು ನಾಲ್ವತ್ವಾಡದ ವೀರೇಶ್ವರ ಪುರಾಣದ ಪ್ರವಚನ ಮಾಡಿದರು. ಅದರ ನೆನಪಿಗಾಗಿಯೇ ಇದನ್ನು 'ವೀರೇಶ್ವರ ಪುಣ್ಯಾಶ್ರಮ' ಎಂದು ಕರೆಯಲಾಯಿತು. ಇಲ್ಲಿ ನೂರಾರು ಜನ ಅಂಧ, ಅನಾಥ ಬಡ ಮಕ್ಕಳು ಊಟ, ವಸತಿ, ವಸ್ತ್ರಗಳೊಂದಿಗೆ ವಿದ್ಯೆಯನ್ನೂ ಕಲಿತು, ತಮ್ಮ ಬದುಕಿಗೆ ದಾರಿ ಕಂಡುಕೊಂಡಿದ್ದಾರೆ. ಇಲ್ಲಿ ಸಂಗೀತ ಕಲಿತ ಅನೇಕ ವಿದ್ಯಾರ್ಥಿಗಳು ನಾಡಿನಲ್ಲಷ್ಟೇ ಏಕೆ, ದೇಶವಿದೇಶಗಳಲ್ಲೂ ಹೆಸರು ಮಾಡಿ ಕೀರ್ತಿ ಪಡೆದಿದ್ದಾರೆ. ಅವರಲ್ಲಿ ಕೆಲವರನ್ನು ಹೆಸರಿಸಬಹುದಾದರೆ, ಪುಟ್ಟರಾಜ ಗವಾಯಿಗಳು, ಶೇಷಾದ್ರಿ ಗವಾಯಿಗಳು, ಬಸವರಾಜ ರಾಜಗುರು, ಸಿದ್ಧರಾಮ ಜಂಬಲದಿನ್ನಿ, ಅರ್ಜುನ ಸಾ ನಾಕೋಡ, ಮೃತ್ಯುಂಜಯ ಪುರಾಣಿಕ ಮುಂತಾದವರು ಈ ಗುರುಕುಲ ಪರಂಪರೆಯನ್ನು ಬೆಳಗಿಸಿದ್ದಾರೆ. ಪಂಚಾಕ್ಷರ ಗವಾಯಿಗಳು ವಿದ್ಯೆ ಕಲಿಸುವ ಮೂಲಕ ದುಡ್ಡು ಮಾಡಬೇಕೆಂದು ಬಯಸಿದ್ದರೆ, ಬೇಕಾದಷ್ಟು ಹಣ ಗಳಿಸಬಹುದಿತ್ತು. ಆದರೆ ಅವರು ಶಿಷ್ಯರಿಂದ ಎಂದೂ ಏನನ್ನೂ

ಬಯಸಲಿಲ್ಲ. ಉಚಿತವಾಗಿ ವಿದ್ಯಾದಾನ, ಅನ್ನದಾನ ಮಾಡಿ ಪುಣ್ಯವಂತರಾದರು. ಸ್ವರಸಾಧನೆಗೆ ಅತ್ಯಂತ ಮಹತ್ವ ನೀಡುತ್ತಿದ್ದ ಅವರು ಸ್ವರಗಳ ಅಭ್ಯಾಸವೇ ಸಂಗೀತ ಕಲಿಕೆಗೆ ನಾಂದಿ ಎಂದು ಹೇಳಿ, ಅದನ್ನೇ ಶಿಷ್ಯರಿಗೆ ಕಲಿಸುತ್ತಿದ್ದರು. ಅವರು ತಮ್ಮ ಶಿಷ್ಯಕೋಟಿಗೆ ನೀಡಿದ ವಿಶಿಷ್ಟ ಜ್ಞಾನವನ್ನು ನೋಡಿದಾಗ ಇಂದಿನ ವ್ಯಾಪಾರಿ ಶಿಕ್ಷಣ ಒಂದು ವಿಪರ್ಯಾಸದಂತೆ ತೋರುತ್ತದೆ. ಗವಾಯಿಗಳ ಶಿಷ್ಯರು ಅವರಲ್ಲಿಟ್ಟಿದ್ದ ಭಕ್ತಿ, ಗೌರವಗಳ ಕಾರಣವೂ ನಿಚ್ಚಳವಾಗಿ ಕಾಣುತ್ತದೆ. ಪ್ರತಿಫಲದ ಅಪೇಕ್ಷೆ ಇಲ್ಲದೆಯೇ ಕಲಿಸುವ ಗುರುವಿನ ನಿರ್ಮಲ ಮನಸ್ಸಿಗೆ ಸರಿಸಾಟಿ ಉಂಟೆ?

ತಲೆಯ ಮೇಲೊಂದು ಸೂರು ಸಿಕ್ಕಿತಾದರೂ ಪಂ. ಪಂಚಾಕ್ಷರಿ ಗವಾಯಿಗಳ ಆರೋಗ್ಯ ಮಾತ್ರ ಹದಗೆಡುತ್ತಲೇ ಹೋಯಿತು. ಇದುವರೆಗೆ ಬದುಕಿನಲ್ಲಿ ಪಟ್ಟ ಪಾಡು, ಬವಣೆಗಳ ಪರಿಣಾಮದ ಫಲ ಅದು. ಶರೀರದಲ್ಲಿ ರಕ್ತ ಕಡಿಮೆಯಾಗಿ ಕೈಕಾಲುಗಳು ಊದಿಕೊಳ್ಳತೊಡಗಿದುವು. ವೈದ್ಯರು ಬಂದು ಪರೀಕ್ಷಿಸಿ, ಅದನ್ನು ಉದರರೋಗವೆಂದು ಪತ್ತೆ ಹಚ್ಚಿ ಔಷಧ, ಚುಚ್ಚುಮದ್ದುಗಳನ್ನು ತೆಗೆದುಕೊಂಡರೆ ಸರಿಹೋಗುತ್ತದೆ ಎಂದರು. ಆದರೆ ಶಿವಾರ್ಪಿತವಾಗದ ಏನನ್ನೂ ಗವಾಯಿಗಳು ಮುಟ್ಟುತ್ತಿರಲಿಲ್ಲ. ಅಂದಮೇಲೆ ಔಷಧಿ, ಚುಚ್ಚುಮದ್ದುಗಳು ಅವರ ಪಾಲಿಗೆ ನಿಷಿದ್ಧವಾದುವು. ಅವರ ಕಟ್ಟುನಿಟ್ಟಾದ ಆಚಾರ ಪರಿಪಾಲನೆಯಿಂದ ಆರೋಗ್ಯ ಸುಧಾರಿಸುವುದೆಂತು? ಶಸ್ತ್ರಚಿಕಿತ್ಸೆಯೇ ಆಗಬೇಕೆನ್ನುವ ಹಂತಕ್ಕೆ ಬಂದಿತು. ಆದರೆ ಅವರು ಒಪ್ಪಲಿಲ್ಲ. ಶರೀರ ಮತ್ತೂ ಕ್ಷೀಣಿಸತೊಡಗಿತು. ಶಿಷ್ಯರು, ಭಕ್ತರು ಎಲ್ಲರಿಗೂ ಗಾಬರಿಯಾಯಿತು. ಹಾಲಕೆರೆ ಅನ್ನದಾನೀಶ್ವರರ ಬಗ್ಗೆ ಗವಾಯಿಗಳಿಗೆ ಬಹಳ ಭಕ್ತಿ. ಅವರ ಮೂಲಕ ಹೇಳಿಸಿದರೆ ಬಹುಶಃ ಕೇಳಿಯಾರೆಂಬ ಆಸೆಯಿಂದ ಅವರಿಂದಲೂ ಹೇಳಿಸಿ ನೋಡಿದರು. 'ಈ ಕಾಯ ಶಿವನ ಪ್ರಸಾದ. ಅದನ್ನು ಕಾಪಾಡಿಕೊಳ್ಳುವುದು ನಮ್ಮ ಕರ್ತವ್ಯವೇ ಹೊರತು, ಕೆಡಿಸಿಕೊಳ್ಳುವುದಲ್ಲ. ನಿಮ್ಮನ್ನೇ ನಂಬಿರುವ ಈ ನೂರಾರು ಅಂಧ ಮಕ್ಕಳ ಸಲುವಾಗಿಯಾದರೂ ನೀವು ಶಸ್ತ್ರಚಿಕಿತ್ಸೆಗೆ ಒಪ್ಪಿಕೊಳ್ಳಲೇಬೇಕು' ಎಂದರು ಸ್ವಾಮಿಗಳು. ಅದಕ್ಕೆ ಅವರು 'ಹೌದು ಬುದ್ಧಿ, ಶಿವ ನೀಡಿದ ಕಾಯವನ್ನು ಕೆಡಿಸಬಾರದು, ನಿಜ. ಆದರೆ ಅವನ ಕರೆ ಬಂದಾಗ ಹೋಗಬೇಕಲ್ಲದೆ, ಶಸ್ತ್ರಕ್ಕೆ ದೇಹವನ್ನು ಒಪ್ಪಿಸಿ ಬದುಕುವುದು ಸರಿಯೇ? ಶಿವಮಂದಿರದ ಶೀಲಾಚಾರದಲ್ಲಿ ಬೆಳೆದ ದೇಹ, ಶೀಲ ತಪ್ಪಿದ ಮೇಲೆ ಇದ್ದರೆಷ್ಟು, ಬಿಟ್ಟರೆಷ್ಟು?' ಎಂದುಬಿಟ್ಟರು. "ಸ್ವಾಮಿ, ನಿಮ್ಮ ಪಾಪ–ಪುಣ್ಯಗಳನ್ನು ನಮ್ಮ ಪಾದಕ್ಕೆ ಒಪ್ಪಿಸಿ, ಈ ಅನಾಥ ಮಕ್ಕಳ ಸಲುವಾಗಿಯಾದರೂ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಿ. ಅದು ಶುಭ್ರವಾಗಿ ಮಡಿಯಿಂದಲೇ ಆಗುವಂತೆ ಮನೆಯಲ್ಲೇ ನಡೆಸಲು ಏರ್ಪಾಟು ಮಾಡುತ್ತೇವೆ" ಎಂದರು. ಆಗಲೆಂದು ಒಪ್ಪಿದ ಗವಾಯಿಗಳ ಮಾತಿಗೆ ಹಿಗ್ಗಿದ ಎಲ್ಲರೂ ಶಸ್ತ್ರಚಿಕಿತ್ಸೆಗೆ ಮನೆಯಲ್ಲೇ ಸಿದ್ಧತೆ ಮಾಡಿಕೊಳ್ಳಲಾರಂಭಿಸಿದರು. ಇತ್ತ ಗವಾಯಿಗಳು

ಪೂಜೆಯಲ್ಲಿ ನಿರತರಾದರು. ನಿತ್ಯ ಎರಡು ಗಂಟೆ ತೆಗೆದುಕೊಳ್ಳುತ್ತಿದ್ದ ಪೂಜೆ ಅಂದು ಮೂರು ಗಂಟೆಗಳಾದರೂ ಮುಗಿಯಲೊಲ್ಲದು. ಅಂತರ್ಮುಖಿಗಳಾಗಿದ್ದ ಅವರ ಸಹಾಯಕ್ಕೆ ನಿಂತಿದ್ದ ಶಿಷ್ಯರೆಲ್ಲ ಅವರನ್ನು ಬೆರಗಿನಿಂದ ನೋಡುತ್ತಲೇ ಇದ್ದಾರೆ. ಮಂತ್ರವನ್ನು ಪಠಿಸುತ್ತಿದ್ದ ಧ್ವನಿ ಕ್ರಮೇಣ ಕ್ಷೀಣವಾಗುತ್ತಾ ತುಟಿ ಮಾತ್ರ ಚಲಿಸುವುದು ಕಾಣುತ್ತಿದೆ. ಲಿಂಗಕ್ಕೆ ಹೂ, ಪತ್ರಿಗಳನ್ನು ಏರಿಸುತ್ತಲೇ ಇದ್ದಾರೆ. ನಾಲ್ಕೈದು ಗಂಟೆಗಳಾದರೂ ಪೂಜೆ ಮುಗಿಯದುದನ್ನು ಕಂಡ ವೀರಪ್ಪನವರು ಆತಂಕದಿಂದ ವೈದ್ಯರೊಡನೆ ಪೂಜಾಗೃಹವನ್ನು ಹೊಕ್ಕಾಗ ಶಿವನಿಗೆ ಹೂಗಳನ್ನು ಏರಿಸುತ್ತಾ ಬಾಹ್ಯಪ್ರಜ್ಞೆ ಕಳೆದುಕೊಂಡಿರುವ ಗವಾಯಿಗಳನ್ನು ಕಂಡು ಹೌಹಾರುತ್ತಾರೆ. ತಮ್ಮ ತನುಮನವನ್ನು ಲಿಂಗಕ್ಕೆ ಅರ್ಪಿಸಲು ಅಣಿಯಾಗುತ್ತಿರುವ ಈ ಶಿವಯೋಗಿ ಇನ್ನು ಹೆಚ್ಚು ಕಾಲ ಬದುಕಲಾರದೆಂಬ ಸತ್ಯವನ್ನು ವೈದ್ಯರು ಅರಿತರು. ನಿತ್ಯವೂ ಪೂಜೆ ಮುಗಿದ ನಂತರ ಪಾದೋದಕ ತೆಗೆದುಕೊಳ್ಳುತ್ತಿದ್ದ ಗವಾಯಿಗಳನ್ನು ಎಚ್ಚರಿಸಲು ಶಿಷ್ಯ ಅವರ ಕಿವಿಯಲ್ಲಿ 'ಅಜ್ಜಾ, ಪಟ್ಟಾಧ್ಯಕ್ಷರ ಪೂಜೆ ಮುಗಿದಿದೆ. ಪಾದೋದಕ ತೆಗೆದುಕೊಳ್ಳಿ' ಎಂದು ಕೂಗಿದ. ಲಿಂಗಕ್ಕೆ ಹೂ ಏರಿಸುತ್ತಿದ್ದ ಕೈಗಳು ತಟಸ್ಥವಾದುವು. ಲಿಂಗವನ್ನು ವಸ್ತ್ರದಲ್ಲಿ ಕಟ್ಟಿ ಕೊರಳಿಗೆ ಧರಿಸಿಕೊಳ್ಳಲೂ ಆಗದಂಥ ಸ್ಥಿತಿ. ಶಿಷ್ಯರೇ ಕೊನೆಗೆ ಆ ಕೆಲಸವನ್ನೂ ಮಾಡಿ, ಚಾಚಿದ ಕೈಗಳಿಗೆ ಪಾದೋದಕ ನೀಡಿದರು. ಭಕ್ತಿಯಿಂದ ಅದನ್ನು ಸ್ವೀಕರಿಸಿದ ಅವರು ಮತ್ತೆ ಪೂಜೆಗೆ ಉಪಕ್ರಮಿಸಿದರು. 'ಅಂಗೈಯಲ್ಲಿ ಲಿಂಗ ಇಲ್ಲ' ಎಂಬ ಅರಿವೂ ಅವರಿಗೆ ಇರಲಿಲ್ಲ. ಇದೆ ಎಂದೇ ಭಾವಿಸಿದಂತೆ ಮುಷ್ಠಿ ಕಟ್ಟಿದ್ದಾರೆ. 'ಪುಟ್ಟರಾಜರು ಬಂದಿದ್ದಾರೆ' ಎಂಬ ಮಾತನ್ನು ಕೇಳಿದ ಅವರು ಎಷ್ಟೋ ಹೊತ್ತು ಆತನ ತಲೆ ನೇವರಿಸುತ್ತಾರೆ. ಮತ್ತೆ ಮುಚ್ಚಿದ ಮುಷ್ಠಿಗೆ ಪೂಜೆ ಸಲ್ಲಿಸುತ್ತಿರುವ ದೃಶ್ಯ ಎಲ್ಲರ ಕಣ್ಣುಗಳನ್ನು ತೇವವಾಗಿಸುತ್ತಿದೆ. ಇಡೀ ದಿನ ಹೀಗೆಯೇ ಕಳೆಯಿತು. ಪೂಜಿಸುತ್ತಿದ್ದ ಕೈಗಳು ತಟಸ್ಥವಾದುವು. ಶಿವನಾಮ ಜಪಿಸುತ್ತಿದ್ದ ತುಟಿಗಳು ಮೌನವಾದವು. ಧರೆಗೆ ಉರುಳಲಿದ್ದ ಕಾಯವನ್ನು ಶಿಷ್ಯರು ಹಿಡಿದು, ಶಿವಾರ್ಪಿತವಾದ ದೇಹವನ್ನು ಹೊರತಂದರು. ಜೂನ್ 11, 1944ರಂದು ಆ ದಿವ್ಯಚೇತನ ಶಿವನ ಬಳಿಗೆ ತೆರಳಿತು. ಗುರುವಿನ ಆಜ್ಞೆಯಂತೆ ಸಮಾಜಸೇವೆಗಾಗಿ, ಅಂಧರ ಶ್ರೇಯೋಭಿವೃದ್ಧಿಗಾಗಿ ತಮ್ಮ ಇಡೀ ಬದುಕನ್ನು ಮೀಸಲಾಗಿಟ್ಟ ದಿವ್ಯಾತ್ಮ ಅನಂತದಲ್ಲಿ ಲೀನವಾಯಿತು.

ತ್ರಿಭಾಷಾಕವಿಗಳೂ, ಉಭಯಗಾಯನಪ್ರವೀಣರೂ ಆಗಿದ್ದ ಪಂ. ಪಂಚಾಕ್ಷರಿ ಗವಾಯಿಗಳು ಎಂದೂ ಮಕ್ಕಳ ಜಾತಿ, ಮತವನ್ನು ಎಣಿಸಲಿಲ್ಲ. ಅವರಲ್ಲಿ ಅಕ್ಷರಶಃ ಎಲ್ಲ ಜಾತಿಯ ಶಿಷ್ಯರಿದ್ದರು. ಅವರೆಲ್ಲರನ್ನೂ ಒಂದೇ ಸಮಾನವಾಗಿ ಪ್ರೀತಿಯಿಂದ ನೋಡಿಕೊಂಡ ಜೀವ ಅದು. ಅವರ ಸಂಗೀತಕ್ಕೆ ಸಂದ ಬಿರುದುಗಳೆಷ್ಟೋ. ಉಭಯ ಗಾಯನವಿಶಾರದ, ಸಂಗೀತ ಸಾಮ್ರಾಟ, ಲಲಿತಕಲಾ ಪಿತಾಮಹ, ಗಾನಯೋಗಿ,

ಭೂಗಂಧರ್ವಚಂದ್ರ, ಸಂಗೀತ ಸುಧಾನಿಧಿ, ಗಾನಕಲಾನಿಧಿ, ಸಂಗೀತಸಾಗರ ಹೀಗೆ ಅನೇಕ. ಅವರು 1938ರಲ್ಲಿ ನಡೆದ ವೀರಶೈವ ಮಹಾಸಭೆಯ ಸಂಗೀತ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಗವಾಯಿಗಳ ಸಂಗೀತದ ಮೋಡಿಗೆ ಒಮ್ಮೆ ಮರುಳಾದವರು ಅದನ್ನು ಮರೆಯುವಂತೆಯೇ ಇರಲಿಲ್ಲ. ತಮ್ಮ ನಂತರ ವೀರೇಶ್ವರ ಪುಣ್ಯಾಶ್ರಮವನ್ನು ತಮ್ಮಂತೆಯೇ ಅಂಧರಾಗಿದ್ದ ಪುಟ್ಟರಾಜ ಗವಾಯಿಗಳಿಗೆ ಒಪ್ಪಿಸಿ, ಅವರೂ ತಮ್ಮಂತೆಯೇ ಬ್ರಹ್ಮಚರ್ಯದ ವ್ರತವನ್ನು ಪಾಲಿಸಿ ಸಮಾಜಸೇವೆಯನ್ನು ಮಾಡುವ ದಿಕ್ಕಿನಲ್ಲಿ ಹೆಜ್ಜೆ ಇಡುವಂತೆ ನೋಡಿಕೊಂಡರು.

ಎಚ್.ಎಂ.ವಿ. ಗ್ರಾಮೋಫೋನ್ ಕಂಪನಿಯವರು ಇವರ ಹಾಡುಗಳನ್ನು ಧ್ವನಿ ಮುದ್ರಿಸಲು ಮುಂಬಯಿಗೆ ಕರೆಸಿಕೊಂಡಾಗ, ಕನ್ನಡದ ಹಾಡುಗಳನ್ನು ಮಾತ್ರ ತಾವು ಹಾಡುವುದಾಗಿ ಹೇಳಿ, ತಮ್ಮ ಕನ್ನಡಪ್ರೀತಿಯನ್ನು ಮೆರೆದರು. ನಾಟಕಗಳಲ್ಲಿ ತಬಲಾ, ಹಾರ್ಮೋನಿಯಂಗಳನ್ನು ನುಡಿಸುವುದು, ಸಂಗೀತ ನೀಡುವುದು, ಶಿಷ್ಯರೂ ಅದರಲ್ಲಿ ಭಾಗಿಗಳಾಗುವಂತೆ ನೋಡಿಕೊಳ್ಳುವುದಲ್ಲದೆ ಅವರುಗಳ ಸಚ್ಚಾರಿತ್ರ್ಯ ನಿರ್ಮಾಣಕ್ಕೂ ಅಷ್ಟೇ ಪ್ರಾಧಾನ್ಯತೆ ನೀಡಿದ ಅಪರೂಪದ ಗುರು ಅವರು. ಕರ್ನಾಟಕದಲ್ಲಿ ದಕ್ಷಿಣಾದಿಯಲ್ಲದೆ ಉತ್ತರಾದಿ ಸಂಗೀತವೂ ಜನಪ್ರಿಯತೆ ಗಳಿಸುವಲ್ಲಿ ಗವಾಯಿಗಳ ಪರಿಶ್ರಮ ಅಗಾಧವಾಗಿ ಕೆಲಸ ಮಾಡಿದೆ. ಶಿಷ್ಯರನ್ನು ಹುರಿದುಂಬಿಸಿ, ಅವರಿಂದ ನಾಟಕಗಳನ್ನು ಬರೆಯಿಸಿ, ಅದರಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ, ತಾವೇ ಸಂಗೀತದ ಜವಾಬ್ದಾರಿಯನ್ನು ಹೊತ್ತುಕೊಂಡು ನಾಟಕಗಳನ್ನು ಆಡಿಸುತ್ತಿದ್ದುದರಿಂದ ಸಂಗೀತ, ಸಾಹಿತ್ಯ, ನಟನೆ ಮುಂತಾದ ವಿವಿಧ ಪ್ರಾಕಾರಗಳಿಗೆ ಅವರಿಂದ ಅನುಪಮ ಸೇವೆ ಸಂದಿತೆಂದೂ ಹೇಳಬಹುದು. ಅವರಿಗೆ ಬಾಹ್ಯ ಚಕ್ಷುಗಳಿಲ್ಲದಿದ್ದರೇನು? ಅವರ ಒಳಗಣ್ಣಿನ ಬೆಳಕು ಕಿವಿಯ ಶ್ರುತಿಯಾಗಿ ಮಾರ್ಪಟ್ಟಿತ್ತು. ಅವರ ಶಿಷ್ಯರಾಗಿದ್ದ ಪುಟ್ಟರಾಜ ಗವಾಯಿಗಳೂ ಸಹ ಅಪ್ರತಿಮ ಪ್ರತಿಭಾವಂತರು. ಲೇಖಕ, ಗಾಯಕ, ವಾದಕರಲ್ಲದೆ ಗುರುಗಳು ಸ್ಥಾಪಿಸಿದ ಆಶ್ರಮವನ್ನು ಅಭೂತಪೂರ್ವವಾಗಿ ಮುಂದುವರಿಸಿಕೊಂಡು ಹೋದ ಧೀಮಂತರು. ಗುರುಗಳಂತೆಯೇ ಹಲವಾರು ವಾದ್ಯಗಳನ್ನು ನುಡಿಸುವುದರಲ್ಲಿ ನಿಷ್ಣಾತರಾಗಿದ್ದ ಇವರೂ ಸಹ ಉಭಯ ಸಂಗೀತಪದ್ಧತಿಯಲ್ಲೂ ಪಾಂಡಿತ್ಯ ಗಳಿಸಿದ್ದರು.

ಒಟ್ಟಾರೆ ಕರ್ನಾಟಕದ ಉತ್ತರ ಭಾಗವು ಒಂದೆಡೆ ಶಿವಭಕ್ತಿಗೆ, ಶಿವಶರಣರಿಗೆ, ತ್ಯಾಗ, ಔದಾರ್ಯ ಮುಂತಾದ ಜೀವನಮೌಲ್ಯಗಳಿಗೆ, ಅಂತೆಯೇ ಸಂಗೀತದ ಎರಡೂ ಪದ್ಧತಿಗಳಿಗೆ ನೆಲೆವೀಡಾಗಿ ತನ್ನ ಸಾಂಸ್ಕೃತಿಕ ಸುಗಂಧವನ್ನು ಬೀರಲು ಪಂ. ಪಂಚಾಕ್ಷರಿ ಗವಾಯಿಗಳಂತಹ ಅನೇಕ ಹಿರಿಯ ಸಾಧಕರು ನಿಃಸ್ವಾರ್ಥ ಸೇವೆಗೈದಿದ್ದಾರೆ ಎಂಬುದನ್ನು ನಾಡು ಸದಾ ಸ್ಮರಿಸಬೇಕು.

❑

# ಅನುಭವ ಮಂಟಪ ಲಿಂಗಾಯತ ಧರ್ಮದ ಹೃದಯ*

ರೆ. ಸಿ.ಡಿ. ಉತ್ತಂಗಿ ಚನ್ನಪ್ಪ

(ಮುಂದುವರಿದಿದೆ)

ಈ ಅನುಭವ ಮಂಟಪಕ್ಕೆ ರಾಜರು, ಕುಲಜರು, ಧನವಂತರು ಮಾತ್ರವಲ್ಲದೆ ಬಡವರೂ, ಸಕಲ ತರದ ಉದ್ಯೋಗಗಳನ್ನು ಮಾಡುವವರೂ ಸೇರಿಕೊಳ್ಳುತ್ತಿದ್ದರು: ಬಸವನ ಪೂರ್ವದಲ್ಲಿದ್ದ ಜೇಡರ ದಾಸಿಮಯ್ಯನು ನೇಕಾರನು, ಶಂಕರ ದಾಸಿಮಯ್ಯನು ಸಿಂಪಿಗನು, ಅವನ ಸಮಕಾಲೀನನಾದ ಮಡಿವಾಳ ಮಾಚಯ್ಯನು ಅಗಸನು ಮೇದಾರ ಕೇತಯ್ಯನು ಬುಟ್ಟಿ ಹೆಣೆಯುವವನು, ಅಂಬಿಗರ ಚೌಡಯ್ಯನು ಹುಟ್ಟು ಹಾಕುವವನು, ಹಡಪದ ಅಪ್ಪಣನು ಕ್ಷೌರಿಕನು, ಡಕ್ಕೆಯ ಬೊಮ್ಮಣ್ಣನು ಡೊಳ್ಳು ಬಡಿಯುವವನು, ತುರುಗಾಹಿ ರಾಮಣ್ಣನು ದನ ಕಾಯುವವನು, ಸುಂಕದ ಬಂಕಣ್ಣನು ಸುಂಕಿಗನು, ಕಿನ್ನರಿ ಬೊಮ್ಮಣ್ಣನು ಅಕ್ಕಸಾಲಿಗನು, ಒಕ್ಕಲು ಮುದ್ದಯ್ಯನು ಹೊಲ ಮಾಡುವವನು, ಜೋದರ ಮಾದಣ್ಣನು ಸಿಪಾಯಿಯು, ಡೋಹರ ಕಕ್ಕಯ್ಯನು ತೊಗಲುಗಾರನು, ಮಾದರ ಚನ್ನಯ್ಯನು ಮೊಚ್ಚೆಗಾರನು, ತಳವಾರ ಕಾಮಿದೇವನು ತಳವಾರನು, ಗಾಣದ ಕನ್ನಯ್ಯನು ಗಾಣಿಗನು, ವೈದ್ಯ ಸಂಗಣ್ಣನು ಔಷಧಗಾರನು, ಕಿರಾತ ಸಂಗಯ್ಯನು ಬೇಡರವನು, ನುಲಿಯ ಚಂದಯ್ಯನು ಹುಲ್ಲು ಹಗ್ಗ ಮಾಡುವವನು, ಸೂಜಿ ಕಾಯಕದ ರಾಮಿತಂದೆ ಸೂಜಿಗಾರನು, ಮಲಹರ ಕಾಯಕದ ಚಿಕ್ಕದೇವಯ್ಯನು ಹಳೆಯ ಕಂಚು ಹಿತ್ತಾಳೆಯ ಸಾಮಾನುಗಳನ್ನು ಮಾರಲಿಕ್ಕೆ ತೆಗೆದುಕೊಳ್ಳುವವನು, ಬಾಚಿ ಕಾಯಕದ ಬಸವಪ್ಪನು ಬಡಿಗನು, ಸತ್ತಿಗೆ ಕಾಯಕದ ರಾಮಿತಂದೆಯು ಕೊಡೆಹಿಡಿಯುವವನು, ಕನ್ನಡಿ ಕಾಯಕದ ಅಮ್ಮಿದೇವಯ್ಯನು ಕನ್ನಡಿಗಾರನು, ಕದಿರ ಕಾಯಕದ ರೆಮ್ಮವ್ವೆಯು ನೂಲುವವಳು, ಕೊಟ್ಟಣದ ಸೋಮವ್ವೆಯು ಕುಟ್ಟುವವಳು, ಆಯ್ದಕ್ಕಿ ಮಾರಯ್ಯನು ಹೊಲದಲ್ಲಿ ಹಕ್ಕಲಾಯುವವನು, ಇತ್ಯಾದಿ.

ಈ ಪ್ರಕಾರ ಸಕಲ ತರಹದ ಜನರಿಂದ ಸಮ್ಮಿಳಿತವಾಗಿ 12ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಕಂಗೊಳಿಸುತ್ತಿದ್ದ ಶಿವಾನುಭವ ಮಂಟಪವನ್ನು ಈಗಿನ ಕಾಲದ ಸಾಮಾಜಿಕ ಮತ್ತು ರಾಜಕೀಯ ಸುಧಾರಕರು ನೋಡಲನುವಾಗಿದ್ದರೆ ಅವರಲ್ಲಿ ಅನೇಕರು ಹಿರಿಹಿರಿ

---

* ಸಂಪಾದಕರು : ಡಾ. ಎಸ್.ಆರ್. ಗುಂಜಾಳ, ಪ್ರಕಾಶಕರು : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು, 2012.

ಹಿಗ್ಗುತ್ತಿದ್ದರೆಂಬುವುದರಲ್ಲಿ ತಿಲಾಂಶವೂ ಸಂದೇಹವಿಲ್ಲ. ಬಣ್ಣ, ಭಾಷೆ, ಕುಲ, ಜಾತಿ, ಪ್ರಾಯ, ಲಿಂಗ, ಸ್ಥಾನ, ಉದ್ಯೋಗ ಮುಂತಾದ ಭೇದಗಳನ್ನು ಕಿತ್ತೊಗೆದು ಪರಸ್ಪರ ಸಹಪಂಕ್ತಿ ಭೋಜನ, ಲಗ್ನಸಂಬಂಧವಾದ ಕಾರ್ಯ, ಶಿವಾನುಭವ ಇವೇ ಮೊದಲಾದ ಬಿಕ್ಕಟ್ಟಿನ ಪ್ರಸಂಗಗಳಲ್ಲಿ ಭಿನ್ನಭಾವವಿಲ್ಲದೆ ಸರ್ವರನ್ನೂ ಏಕೀಭವಿಸಿ ನಡೆದ ಈ ಸಂಗತಿಯು ಹಿಂದೂ ದೇಶದ ಇತಿಹಾಸದಲ್ಲಿಯೇ ಅದ್ವಿತೀಯವಾಗಿದೆ.

ಈ ಸಂಘವು ವಾಡಿಕೆಯಾಗಿ ಬಸವೇಶ್ವರನ ಅರಮನೆಗೆ ಸಂಬಂಧಿಸಲ್ಪಟ್ಟ ಒಂದು ವಿಶಾಲ ಗೃಹದಲ್ಲಿ ಕೂಡಿಬರುತ್ತಿದ್ದು ಬಹುಶಃ ಕಡೆಯಲ್ಲಿ ಅದಕ್ಕೇನೇ "ಅನುಭವ ಮಂಟಪ" ಎಂದು ಹೆಸರು ಬಂದಿರುವಂತೆ ತೋರುತ್ತದೆ. ಕಲ್ಯಾಣದ ನೆರೆಹೊರೆಯಲ್ಲಿ ಈಗ ದೊರೆಯುತ್ತಿರುವ ಕೆಲವು ಹಾಳುಗವಿಗಳು ಆಯಾ ಶಿವಶರಣರ ಹೆಸರುಗಳಿಂದ ಕರೆಯಲ್ಪಡುತ್ತಿದ್ದು ಅನುಭವ ಮಂಟಪದ ಕುರುಹುಗಳಂತೆ ತೋರುತ್ತಿದ್ದರೂ ಈ ತರಹದ ಹೇಳಿಕೆಯಲ್ಲಿ ನಿಜವು ಎಷ್ಟರ ಮಟ್ಟಿಗಿರುವುದೆಂಬುದನ್ನು ನಿರ್ಧರಿಸಿ ಹೇಳಲಾಗದು. ಹೇಗೆಯೇ ಇರಲಿ, 12ನೆಯ ಶತಮಾನದಲ್ಲಿ ವೀರಶೈವಾಕಾಶದಲ್ಲಿ ನಕ್ಷತ್ರಗಳಂತೆ ಹೊಳೆಯುತ್ತಿದ್ದ ಶಿವಶರಣರ ಸಂಖ್ಯೆಯು 360ಕ್ಕೆ ಮಿಕ್ಕಿರುವುದು.

### 4. ಅನುಭವ ಮಂಟಪವೂ ಅದರ ನಾಯಕರೂ

ಈ ಅನುಭವ ಮಂಟಪದಲ್ಲಿ ಜ್ಞಾನದೃಷ್ಟಿಯಿಂದಲೂ ಕ್ರಿಯಾದೃಷ್ಟಿಯಿಂದಲೂ ವಿಷಯಗಳು ವಿವೇಚಿಸಲ್ಪಡುತ್ತಿದ್ದವು. ಇಲ್ಲಿ ಚರ್ಚಿಸಲ್ಪಡುತ್ತಿದ್ದ ಸಂಗತಿಗಳನ್ನು ಕುರಿತು 15ನೆಯ ಶತಮಾನದಲ್ಲಿ ರಚಿತವಾದ "ಶೂನ್ಯ ಸಂಪಾದನೆ" ಎಂಬ ಗ್ರಂಥದಲ್ಲಿ ನೋಡಿಕೊಳ್ಳಬಹುದು. ಅದರಿಂದ ಆಗಿನ ಕಾಲದ ಚರ್ಚೆಗಳು ಯಾವ ಪ್ರಕಾರವಿದ್ದವೆಂಬುದು ಗೊತ್ತಾಗುತ್ತದೆ. ಗ್ರೀಸ್ ದೇಶದಲ್ಲಿ ಪ್ಲೇಟೋ ಎಂಬುವನ ಉತ್ಕೃಷ್ಟವಾದ ಸಂಭಾಷಣೆಗಳು ಇದೇ ಮಾದರಿಯವುಗಳಾಗಿದ್ದು, ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಸಂವಾದಗಳನ್ನು ಅನೇಕ ವಿಷಯಗಳಲ್ಲಿ ಹೋಲುತ್ತವೆ.

ಲಿಂಗಾಯತ ಧರ್ಮದ ಅಂತರಂಗ ಬಹಿರಂಗಗಳೆನಿಸಿಕೊಳ್ಳುವ ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ ಸಂಬಂಧವಾದ ವಿಷಯಗಳು ಇಲ್ಲಿ ಚೆನ್ನಾಗಿ ಮಥಿಸಲ್ಪಡುತ್ತಿದ್ದು ವಲ್ಲದೆ ಲಿಂಗಾಂಗ ಸಕೀಲಸಂಬಂಧವಾದ ಸೂಕ್ಷ್ಮ ವಿಚಾರಗಳನ್ನು ಕುರಿತು ವಾದವಿವಾದಗಳು ನಡೆಯುತ್ತಿದ್ದವು. ಈ ಆಧ್ಯಾತ್ಮಿಕ ಪೀಠಕ್ಕೆ ಪ್ರಭುದೇವರೇ ಅಧ್ಯಕ್ಷರು, ಇವರಿಗೆ ಅಲ್ಲಮ ಪ್ರಭುವೆಂತಲೂ ಹೆಸರು. ಇವರು ಸಂದರ್ಭಾನುಸಾರ ಅಧ್ಯಕ್ಷಸ್ಥಾನವನ್ನು ವಹಿಸುವರು. ಇವರು ಅನುಭವದ ಅತ್ಯುಚ್ಚ ಸ್ಥಿತಿಯಾದ ಲಿಂಗಾಂಗಸಾಮರಸ್ಯವನ್ನು ಹೊಂದಿದವರು. ಅಂದರೆ ಐಕ್ಯಸ್ಥಲದ ಅನುಭವವನ್ನು ಪಡೆದವರು. ವೀರಶೈವ ಧರ್ಮದಲ್ಲಿ ಷಟ್ಸ್ಥಲಗಳೆಂದು ಆರು ಆಧ್ಯಾತ್ಮಿಕ ಸ್ಥಲಗಳು ಕಲ್ಪಿಸಲ್ಪಟ್ಟಿವೆ. ಅವುಗಳಿಗೆ ಅನುಭವದ

ಆರು ಸೋಪಾನ ಗಳೆಂದರೂ ಸಲ್ಲುವುದು. ಅವು ಯಾವುವೆಂದರೆ – ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ. ಅವುಗಳಲ್ಲಿ ಲಿಂಗಾಂಗಸಾಮರಸ್ಯವೇ ಕೊನೆಯದು. ಈ ಸ್ಥಿತಿಯಲ್ಲಿ ಜೀವನು ಪರಬ್ರಹ್ಮನೊಡನೆ ಐಕ್ಯವಾಗಿ ಆನಂದವನ್ನು ಅನುಭವಿಸುತ್ತಿರುತ್ತಾನೆ. ಪ್ರಭುದೇವರು ಅಂತಹ ಉಚ್ಚಸ್ಥಿತಿಗೆ ಮುಟ್ಟಿದವರಾದುದರಿಂದ ಅವರಿಗೆ ಈ ಪೀಠದ ಮುಖ್ಯ ಪದವಿಯು ಕೊಡಲ್ಪಟ್ಟಿತು.

ಅನುಭವ ಮಂಟಪದ ಮಧ್ಯದಲ್ಲಿ ಒಂದು ಸುಂದರವಾದ ಗದ್ದುಗೆ. ಇದಕ್ಕೆ 'ಶೂನ್ಯಸಿಂಹಾಸನ'ವೆಂದು ಹೆಸರು. ಪ್ರಭುದೇವರು ಈ ಗದ್ದುಗೆಯ ಮೇಲೆ ಕುಳಿತುಕೊಂಡು ಶಿವಾನುಭವವನ್ನು ಮಾಡಿದ್ದರಿಂದ ಅದಕ್ಕೆ ಹೀಗೆಂದು ನಾಮಕರಣವಾಯಿತು. ಬಸವೇಶ್ವರನು ಇದರ ರಚಕನು. ಷಟ್ಸ್ಥಲವನ್ನು ಪ್ರತಿಬಿಂಬರೂಪವಾಗಿ ತೋರಿಸುತ್ತಿದ್ದ ಈ ಗದ್ದುಗೆಯು ಪಾಮರರಿಗೆ ಸಹ ಅವರ ಜ್ಞಾನವನ್ನು ಮಾಡಿಕೊಡುವ ವಸ್ತು ಪಾಠದಂತಿತ್ತು. ಈ ಗದ್ದುಗೆಯನ್ನೇರುವುದಕ್ಕೆ ಆರು ಪಾವಟಿಗೆಗಳು. ಹಿಂದೆ ಹೇಳಿದ ಆರು ಸ್ಥಲಗಳಲ್ಲಿ ಆಧ್ಯಾತ್ಮಿಕ ಅನುಭವವನ್ನು ಪಡೆದ ಶರಣರ ಹೆಸರುಗಳು ಅವರವರ ಅನುಭವಕ್ಕನುಸಾರವಾಗಿ ಆಯಾ ಸ್ಥಲಗಳಿಗೆ ಒಪ್ಪುತ್ತಿದ್ದವು. ಅದರಲ್ಲಿ ಕೆಲವರು ಭಕ್ತಿಯಲ್ಲಿ ಮೇಲಾದವರು. ಕೆಲವರು ಜ್ಞಾನದಲ್ಲಿ ಪ್ರವೀಣರು. ಕೆಲವರು ಅಂತಃಕರಣ ಶುದ್ಧತೆಯಲ್ಲಿ ಹಿರಿದಾದವರು. ಹೀಗೆ ಅವರವರು ವಿಶಿಷ್ಟ ಸದ್ಗುಣಗಳಿಂದ ಪ್ರಕಾಶಿಸುತ್ತಿದ್ದರು. ಆದರೆ ಎಲ್ಲರೂ ಆಧ್ಯಾತ್ಮಿಕ ತತ್ವಗಳನ್ನು ಜೀವನದಲ್ಲಿ ಇಳಿಸಿಕೊಂಡವರೇ, ಬಸವೇಶ್ವರನು ಭಕ್ತಿಯಲ್ಲಿ ಶ್ರೇಷ್ಠನು, ಚನ್ನಬಸವಣ್ಣನು ಜ್ಞಾನದಲ್ಲಿ ಪ್ರಮುಖನು. ಮಡಿವಾಳಯ್ಯನು ಅಂತಃಕರಣಶುದ್ಧತೆಯ ಬಗ್ಗೆ ಪ್ರಸಿದ್ಧನು. ಸಿದ್ಧರಾಮನು ಸಮಾಧಿಯಲ್ಲಿ ಹಿರಿದಾದವನು. ಅಜಗಣ್ಣನು ಐಕ್ಯವನ್ನು ಹೊಂದಿದವನು. ಇವರೆಲ್ಲರಿಗೆ ಹಿರಿಯರು ಪ್ರಭುದೇವರೇ, ಅನುಭವವೇ ಶ್ರೇಷ್ಠವೆಂಬುವುದಕ್ಕೆ ಕೆಲವು ವಚನಗಳು :

ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು
ತವರಾಜದ ನೊರೆತೆರೆಯಂತೆ ಆದ್ಯರ ವಚನವಿರಲು
ಬೇರೆ ಬಾವಿಯ ತೋಡಿ ಉಪ್ಪುನೀರನುಂಬವನ ವಿಧಿಯಂತೆ
ಆಯಿತ್ತೆನ್ನ ಮತಿ, ಕೂಡಲಸಂಗಮದೇವಾ
* * *
ತರುಮರಾದಿಗಳಲ್ಲಿಗೆ ಹೋಗಿ
ಒಂದು ದಿನ ಗುರುಚರಣ ಸೇವೆ ಸಾಲದೆ?
ಆನಂತಕಾಲ ಗುರುಚರಣ ಸೇವೆಯ ಮಾಡುವುದರಿಂದ
ಒಂದು ದಿನ ಲಿಂಗಪೂಜೆ ಸಾಲದೆ?
ಅನಂತಕಾಲ ಲಿಂಗಪೂಜೆಯ ಮಾಡುವುದರಿಂದ
ಒಂದು ದಿನ ಜಂಗಮ ತೃಪ್ತಿ ಸಾಲದೆ?
ಆನಂತಕಾಲ ಜಂಗಮತೃಪ್ತಿಯ ಮಾಡುವುದರಿಂದ

ಒಂದು ನಿಮಿಷ ನಿಮ್ಮ ಶರಣರ ಅನುಭಾವ ಸಾಲದೆ
ಕೂಡಲ ಚೆನ್ನಸಂಗಮದೇವಾ?

* * *

ಪುರಾಣವ ಹೇಳಿದವರೆಲ್ಲ ಪುರಾಣಿಕರು ನೋಡಾ
ಭವಭವದ ಶಾಸ್ತ್ರವ ಹೇಳಿದವರೆಲ್ಲ ಶಾಸ್ತ್ರಿಗಳು ನೋಡಾ
ವೇದಾಂತವ ಹೇಳಿದವರೆಲ್ಲ ವೇದಾಂತಿಗಳು ನೋಡಾ ಭವಭವದಲ್ಲಿ,
ಆದ್ಯರ ವಚನವ ಹೇಳಿದವರೆಲ್ಲ
ಪುರಾತರು ನೋಡಾ ಭವಭವದಲ್ಲಿ
ಕಪಿಲಸಿದ್ಧಮಲ್ಲಿಕಾರ್ಜುನಾ.

* * *

ಎಲ್ಲ ಪುರಾಣಕ್ಕೆ ಹೆಸರುಂಟು.
ನಮ್ಮ ಪುರಾಣಕ್ಕೆ ಹೆಸರಿಲ್ಲ ನೋಡಯ್ಯಾ
ಲಿಂಗದ ಮಹತ್ವವ ಹೇಳಿದಲ್ಲಿ ಲಿಂಗಪುರಾಣವೆನಿಸಿತ್ತು.
ಷಣ್ಮುಖನ ಮಾಹಾತ್ಮ್ಯವ ಹೇಳಿದಲ್ಲಿ
ಸ್ಕಂದಪುರಾಣವೆನಿಸಿತ್ತು.
ವೀರಭದ್ರನ ಮಹಾತ್ಮವ ಹೇಳಿದಲ್ಲಿ
ದಕ್ಷಖಂಡವೆನಿಸಿತ್ತು.
ಶಿವನ ಮಹಿಮೆ, ಕಾಶೀಮಹಿಮೆಯ ಹೇಳಿದಲ್ಲಿ
ಶಿವಪುರಾಣ ಕಾಶೀಖಂಡವೆನಿಸಿತ್ತು.
ಪಾರ್ವತಿಯ ಮಹಾತ್ಮವ ಹೇಳಿದಲ್ಲಿ
ಕಾಳೀಪುರಾಣವೆನಿಸಿತ್ತು.
ನಮ್ಮ ಪುರಾಣ ಹೆಸರಿಡಬೇಕೆಂದಡೆ
ನಿಶ್ಶಬ್ದ ನಿರವಯಲ ಪುರಾಣ ತಾನೆಯಾಯಿತ್ತು ನೋಡಾ.
ಕಪಿಲಸಿದ್ಧಮಲ್ಲಿಕಾರ್ಜುನಾ.

* * *

ವಚಿಸಿ ಅನುಭವಿಯಾಗದವ ಪಿಶಾಚಿಯಯ್ಯಾ
ವಚಿಸಿ ಅನುಭವಿಯಾದವ ಪಂಡಿತನಯ್ಯಾ
ವಿದ್ಯೆಯೆಂಬುದು ಅಭ್ಯಾಸಿಕನ ಕೈವಶ
ಅವಿದ್ಯೆಯೆಂಬುದು ಸರ್ವರಲ್ಲಿ ವಶ
ವಿದ್ಯಾವಿದ್ಯೆಯನರಿತು ಜಗದ್ವೇದ್ಯನಾಗಬಲ್ಲಡೆ
ಮಹಾಪಂಡಿತ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

* * *

ವ್ಯಾಕರಣವನೋದಿದಲ್ಲಿ ಶಬ್ದಶುದ್ಧಿಯಲ್ಲದೆ
ಮನಶುದ್ಧಿಯಾಗಿ ಜ್ಞಾನಶುದ್ಧಿಯಾಗದು.
ಛಂದಸ್ಸು ಸಾಧಿಸಿದಲ್ಲಿ ಕವಿತಾಶುದ್ಧಿಯಲ್ಲದೆ

ಕವಿತೆಯ ಸಾಧಿಸಿ ವ್ಯಾಸನಂತೆ ಚಿರಂಜೀವಿಯಾಗನು.
ಅಷ್ಟಾದಶ ಪುರಾಣವ ಸಾಧಿಸಿದಲ್ಲಿ ವಾಕ್‌ಶುದ್ಧಿಯಲ್ಲದೆ
ಕಪಿಲಸಿದ್ಧ ಮಲ್ಲಿಕಾರ್ಮನ ಮಹಾದೇವಾ
ದೇಹಸ್ವಭಾವ ಶುದ್ಧಿಯಾಗದು ನೋಡಾ ಮಡಿವಾಳ ಮಾಚಯ್ಯ

* * *

ಶರಣನ ಪಡೆ ಅಂತಿಂತೆನಬೇಡ
ಶರಣ ಮಾದರ ಚೆನ್ನಯ್ಯನ ನಡೆ
ಯಾವ ಆಗಮದಲ್ಲಿ ಹೇಳಿತ್ತು?
ಶರಣ ಡೋಹರ ಕಕ್ಕಯ್ಯನ ನಡೆ
ಯಾವ ವೇದದಲ್ಲಿ ಹೇಳಿತ್ತು?
ನಡೆದ ಆಚರಣೆಯ ಸಚ್ಛೀಲ
ನುಡಿದ ವಾಕ್ಯವೇ ಮೋಕ್ಷಪ್ರದಾಯಕ ನೋಡಾ
ಕಪಿಲಸಿದ್ಧಮಲ್ಲಿಕಾರ್ಜುನಾ

## 5. ಅನುಭವ ಮಂಟಪವು ಮಾಡಿದ ಕಾರ್ಯಗಳು

1. ಈ ಸಂಸ್ಥೆಯು ಪ್ರತಿಮಾಪೂಜೆಯಿಂದ ತುಂಬಿದ್ದ ಹಿಂದೂ ದೇಶದಲ್ಲಿ ಈಶ್ವರನನ್ನು ಹೊಸ ರೀತಿಯಿಂದ ಪೂಜಿಸುವುದಕ್ಕೆ ಹಚ್ಚಿತು. ಈ ನೂತನ ಪದ್ಧತಿಗೆ "ಇಷ್ಟಲಿಂಗ ಪೂಜೆ" ಎಂದು ಹೆಸರು. ಆಗಮ ಧರ್ಮವು ವೇದದ ಕರ್ಮಮಾರ್ಗವನ್ನು ತೊರೆದು ಯಜ್ಞವೇದಿಯ ಬದಲಾಗಿ ಸ್ಥಾವರಲಿಂಗ ಪೂಜೆಯನ್ನು ಪ್ರಚಾರದಲ್ಲಿ ತಂದರೆ, ಈ ಸಂಸ್ಥೆಯು ಉಭಯಮಾರ್ಗಗಳನ್ನೂ ಸುಧಾರಿಸಿ ಮೇಲೆ ಹೇಳಿದಂತೆ ಹೊಸದೊಂದು ಮಾರ್ಗವನ್ನು ಕಲ್ಪಿಸಿಕೊಟ್ಟಿತು. ಇದು ಸಾಕಾರ, ನಿರಾಕಾರಗಳೆರಡಕ್ಕೂ ಸಂಬಂಧಿಸಿದ ಮಾರ್ಗವಾಗಿರುವುದರಿಂದ ಒಂದು ತರದ ಸುಧಾರಣೆಯನ್ನು ಮಾಡಿತೆಂದು ಹೇಳಬಹುದು. ಉಪನಿಷತ್ತುಗಳಲ್ಲಿ ನಿರ್ದಿಷ್ಟವಾದ ನಿರಾಕಾರ ಬ್ರಹ್ಮವನ್ನು ಇಷ್ಟಲಿಂಗಾಕಾರದಲ್ಲಿಯೇ, ಅಂದರೆ ರೂಪರಹಿತವಾದ ರೂಪದಲ್ಲಿಯೇ, ಪೂಜಿಸಬೇಕೆಂದು ಇದರ ತಿಳಿವಳಿಕೆಯು. ಇಲ್ಲಿ "ತಿಳಿದಂತೆ ನಡೆಯುವದೇ ಕ್ರಿಯೆ" ಎಂಬ ಶರಣರ ಸೂತ್ರವು ಸಾರ್ಥಕವು. ಇಷ್ಟಲಿಂಗವು ಆತ್ಮಲಿಂಗದ ಪ್ರತಿಚ್ಛಾಯೆಯಾಗಿದ್ದು ವ್ಯಕ್ತಿಗತವಾಗಿರುವುದರಿಂದಲೂ ಅದು ಗುಡಿಯೊಳಗಿನ ಯಾವುದೊಂದು ದೇವತೆ ಇಲ್ಲವೆ ಸ್ಥಾವರಲಿಂಗಗಳಂತೆ ಸಾಮಾನ್ಯವಾಗಿ ಸರ್ವರಿಂದ ಪೂಜಿಸಲ್ಪಡದೆ ಇರುವುದರಿಂದಲೂ 'ಇಷ್ಟಲಿಂಗವು' ಚಿಲ್ಲಿಂಗಕ್ಕೆ ಸಾಂಕೇತಿಕವಾಗಿರುವುದರಿಂದಲೂ ಇಷ್ಟಲಿಂಗಪೂಜೆಯು ಮೂರ್ತಿಪೂಜೆಯಲ್ಲವೆಂದು ವೀರಶೈವ ಸಿದ್ಧಾಂತವು. ಇದಲ್ಲದೆ ಇದು ಅನೇಕ ದೇವೋಪಾಸನೆಯನ್ನು ಖಂಡಿಸಿ ಏಕದೇವೋಪಾಸನೆಯನ್ನು ಸ್ಥಾಪಿಸಿದ್ದರಿಂದ "ದೇವರು ಒಬ್ಬನೇ" ಎಂಬ ಪ್ರಥಮ ಆಜ್ಞೆಯನ್ನು ಹಿಂದೂದೇಶದಲ್ಲಿ ಘಂಟಾಘೋಷವಾಗಿ ಸಾರಿತೆಂದು ಹೇಳಬಹುದು. ಹೇಗೆಯೇ ಇರಲಿ, ಹಿಂದೂ

ಜನರ ರಕ್ತದಲ್ಲಿ ಬೆರೆತುಹೋಗಿರುವ ಮೂರ್ತಿಪೂಜೆಯ ವಿಷಯವಾಗಿ ಈ ಸಂಸ್ಥೆಯು ವಿಶೇಷ ತರದ ಸ್ಥಿತ್ಯಂತರವನ್ನುಂಟುಮಾಡಿತೆಂಬ ಮಾತು ಮಾತ್ರ ನಿರ್ವಿವಾದವಾಗಿದೆ.

2. ಇದು ಲಿಂಗದೀಕ್ಷೆಯ ಮೂಲಕವಾಗಿ ತನ್ನ ಧರ್ಮದ ದ್ವಾರವನ್ನು ಎಲ್ಲಾ ಜಾತಿಯ ಸ್ತ್ರೀಪುರುಷರಿಗೆ ತೆರೆದಿಟ್ಟಿತು. ಆದ್ದರಿಂದ ಹಿಂದೂ ಸಮಾಜದ ಜೀವನದಲ್ಲಿ ಅತಿ ದೊಡ್ಡ ಕ್ರಾಂತಿಯನ್ನುಂಟುಮಾಡಿತೆಂದು ಹೇಳಬೇಕು. ಇದು ನೂರೆಂಟು ಜಾತಿ–ಮತ–ಪಂಥಗಳುಳ್ಳ ಹಿಂದೂ ಸಮಾಜವನ್ನು ಒಂದುಗೂಡಿಸಿ ಅದನ್ನು ಉಚ್ಚ ತರದ ಸಮಾನತ್ವದ ಮೇಲೆ ರಚಿಸಿ, ಕೀಳು ಮೇಲೆನ್ನದೆ ಎಲ್ಲರೂ ಸಮಾನರೆಂದು ಸಾರಿ ಹೇಳಿತು. ಇದರಿಂದ ಸಮಾಜದಲ್ಲಿ ಬಂಧುಭಾವವೂ ಭಗಿನೀಭಾವವೂ ಬೆಳೆಯಿತು. ಸ್ತ್ರೀಯರಿಗೆ ಪುರುಷರಂತೆ ಸಮಾನ ಹಕ್ಕುಗಳು ದೊರೆತವು. ಅದರಿಂದ ಧಾರ್ಮಿಕ ಹಾಗೂ ಸಾಮಾಜಿಕ ವಿಷಯಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಸಂಪೂರ್ಣ ಸ್ವಾತಂತ್ರ್ಯವು ಸಿಕ್ಕಿತು. ಈಗ ವೀರಶೈವರಲ್ಲಿ ರೂಢಿಯಾಗಿರುವ ಅಪ್ಪ, ಅಣ್ಣ, ಅಯ್ಯ, ಅಕ್ಕ ಮುಂತಾದ ನಾಮವಾಚಕಗಳು ಅನುಭವ ಮಂಟಪದ ಕಾಲದಿಂದ ವೀರಶೈವರಲ್ಲಿ ಪ್ರಚಾರಕ್ಕೆ ಬಂದಿದ್ದು ಇನ್ನೂ ಉಳಿದುಕೊಂಡಿರುವ ಅದರ ಕುರುಹುಗಳೆಂದು ಹೇಳಿದರೆ ತಪ್ಪಾಗದು. "ಇಷ್ಟಲಿಂಗ"ಕ್ಕೆ ಒಬ್ಬ ವಿಲಾಯತಿಯ ಪಂಡಿತರು "ಸಾಮಾಜಿಕ ತಗ್ಗುದಿನ್ನೆಗಳನ್ನು ಸಮಮಾಡುವ ಒಂದು ಸಾಧನ" ಎಂದು ಕರೆದಿದ್ದಾರೆ.

3. ಷಟ್ಸ್ಥಲ ಸಿದ್ಧಾಂತದ ಮೂಲಕ ಇದು ಕರ್ಮವಾದದ ಬೇರುಗಳನ್ನು ಸಡಿಲಿಸಿಬಿಟ್ಟಿತು. ಹಿಂದೂ ಧರ್ಮದ ಪ್ರಕಾರ ಕರ್ಮಿಗೆ ಮುಕ್ತಿ ಇಲ್ಲ. ಅದು ಅವನಿಗೆ ಫಲಪದವನ್ನು ಕೊಡಬಹುದಲ್ಲದೆ ನಿತ್ಯಪದವನ್ನು ಕೊಡಲಾರದು. ಅದರಿಂದ 84 ಲಕ್ಷ ಯೋನಿಗಳಲ್ಲಿ ತಿರುಗುತ್ತಿರಬೇಕು. ಅತ್ತ ಕಡೆಯಲ್ಲಿ ಜ್ಞಾನಮಾರ್ಗವು ಮುಕ್ತಿಯನ್ನು ಕೊಡುವುದಾಗಿದ್ದರೂ ಅದು ಜ್ಞಾನಿಗಳಾದ ಬಹು ಕೊಂಚ ಜನರಿಗೆ ಮಾತ್ರ ಸಾಧ್ಯ. ಅವರೂ ಸಹ ಕ್ರಿಯಾಶೂನ್ಯರಾಗುತ್ತ ಕ್ರಿಯೆಯು ಜ್ಞಾನಕ್ಕೆ ಸಾಧನವೆಂದು ತಿಳಿದಿದ್ದರಿಂದ ಹಿಂದೂ ದೇಶವು ಕ್ರಿಯಾಶೂನ್ಯವಾಯಿತು. ಇದನ್ನು ಪರಿಹರಿಸುವುದಕ್ಕಾಗಿ ಭಗವದ್ಗೀತೆಯು ಮಧ್ಯಮಮಾರ್ಗವನ್ನು ಹಿಡಿದು ಕ್ರಿಯೆಯನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೆಂದು, ಅದರಿಂದ ಕ್ರಿಯೆಯನ್ನು ಮಾಡಿದರೂ ಅದರ ಫಲವನ್ನು ಅಪೇಕ್ಷಿಸದಿರುವುದೇ ಕರ್ಮಬಂಧನದಿಂದ ಮುಕ್ತವಾಗುವ ಮಾರ್ಗವೆಂದು "ಕರ್ಮಯೋಗ"ವನ್ನು ಸಾರಿತು. ಮತ್ತೊಂದು ಕಡೆಯಲ್ಲಿ ಭಕ್ತಿಮಾರ್ಗವು ಅನನ್ಯಮನಸ್ಸಿನಿಂದ ಶರಣಾಗತನಾದವನಿಗೆ ಕರುಣಾಸಾಗರನಾದ ದೇವರು ಕೇವಲ ಕೃಪೆಯಿಂದ ಸಕಲ ಪಾಪಗಳನ್ನು ಕ್ಷಮಿಸುವನೆಂದು ಹೇಳಿತು. ಆದರೆ ಈ ವಾದವು, ಮಾಡಿದ್ದನ್ನು ತಿಂದೇ ತೀರಬೇಕೆಂಬ ಕರ್ಮವಾದಕ್ಕೆ ವಿರೋಧವಾಗಿದೆ. ಹೀಗೆ ವಿವಿಧ ವಿಚಾರಗಳುಳ್ಳ ಹಿಂದೂದೇಶದಲ್ಲಿ ಈ ಸಂಸ್ಥೆಯು ಒಂದೇ ಜನ್ಮದಲ್ಲಿ ಮುಕ್ತಿಹೊಂದಲು ಶಕ್ಯವಿದೆ ಎಂದು ತೋರಿಸಿಕೊಟ್ಟದ್ದಲ್ಲದೆ, ಲಿಂಗಧಾರಣದ ಮೂಲಕ ಅದು ಪ್ರತಿಯೊಬ್ಬನ

ಸ್ವತ್ತೆಂದೂ ಪ್ರಕಟಮಾಡಿತು. ಹಿಂದಿನ ಜನ್ಮವುಂಟು, ಆದರೆ ಮುಂದಿನ ಜನ್ಮವಿಲ್ಲವೆಂಬುವುದೇ ವೀರಶೈವ ಸಿದ್ಧಾಂತವು. ಮೋಕ್ಷವಿಚಾರದಲ್ಲಿ ದೇವರ ಕೃಪೆ, ಮನುಷ್ಯನ ಪ್ರಯತ್ನ ಇವೆರಡಕ್ಕೆ ಭೇದಭಾವವು ಇಲ್ಲೆಂದು ತೋರಿಸುವುದೇ ಲಿಂಗಾಂಗ ಸಕೀಲ. ಕರ್ಮಗಳಲ್ಲಿ ಜನ್ಮವನ್ನು ಕೊಡುವ ಬೀಜಶಕ್ತಿಯನ್ನು ನಾಶಮಾಡಿ ಅವೆಲ್ಲವುಗಳನ್ನೂ ಪ್ರಸಾದರೂಪವಾಗಿ ಪ್ರಕಾಶಿಸುವಂತೆ ಮಾಡುವುದೇ ಷಟ್ಸ್ಥಲ ಸಿದ್ಧಾಂತವು. ಪ್ರಾರಬ್ಧಕರ್ಮವನ್ನು ಸಹ ಪ್ರಸಾದರೂಪ ವಾಗಿ ಹೇಗೆ ಭೋಗಿಸಬಹುದೆಂಬುದಕ್ಕೆ ಇದೊಂದು ಬಸವಣ್ಣನವರ ವಚನ.

ಪಂಡಿತನಾಗಲಿ, ಮೂರ್ಖನಾಗಲಿ
ಸಂಚಿತಕರ್ಮ ಉಂಡಲ್ಲದೆ ಮಾಣದು
ಪ್ರಾರಬ್ಧಕರ ಭೋಗಿಸಿದಲ್ಲದೆ ಹೋಗದೆಂದು
ಶ್ರುತಿ ಸಾರುತ್ತೈದಾವೆ ನೋಡಾ.
ತಾನಾದ ಲೋಕದೊಳಗಿದ್ದಡೆಯೂ
ಬಿಡದು ಕರ್ಮಫಲಗೂಡಿ ಕೂಡಲಸಂಗಮದೇವರಿಗೆ
ಆತ್ಮನೈವೇದ್ಯವ ಮಾಡಿದವನೆ ಧನ್ಯ

4. ಆಧ್ಯಾತ್ಮಿಕ ವಿಷಯದಲ್ಲಿ ಸ್ತ್ರೀಯರು ಪುರುಷರಿಗಿಂತ ಯಾವ ರೀತಿಯಿಂದಲೂ ಕಡಮೆಯವರಲ್ಲವೆಂದು ಇದು ತೋರಿಸಿಕೊಟ್ಟಿತು. ಇದರಿಂದ ಸ್ತ್ರೀಯರ ಉನ್ನತಿಯು ವಿಲಕ್ಷಣವಾಗಿ ಆಯಿತು. ಅನೇಕ ಸ್ತ್ರೀಯರು ಶಿವಾನುಭವದಲ್ಲಿ ಪುರುಷರನ್ನು ಹಿಮ್ಮೆಟ್ಟಿಸಿದರು. ಜೈನರಾಗಲಿ, ಬ್ರಾಹ್ಮಣರಾಗಲಿ ಸ್ತ್ರೀಯರಿಗೆ ಹೀಗೆ ಅಧಿಕಾರವನ್ನು ಕೊಟ್ಟಿರಲಿಲ್ಲ. ಜೈನರು ಸ್ತ್ರೀಯರಿಗೆ ಮೋಕ್ಷವೇ ಇಲ್ಲವೆಂದು ಹೇಳುತ್ತಿರುವಲ್ಲಿ ಬ್ರಾಹ್ಮಣರು ಅವರಿಗೆ ಮೋಕ್ಷಕ್ಕೆ ಅಧಿಕಾರವಿದ್ದರೂ ವೇದಗಳನ್ನೋದಲಿಕ್ಕೆ ಅಧಿಕಾರವಿಲ್ಲವೆಂದು ನಿರ್ಬಂಧಪಡಿಸಿದ್ದರು. ಮಹಾದೇವಿಯಕ್ಕ, ಸತ್ಯಕ್ಕ ಮುಂತಾದ ಅತ್ಯುತ್ಕಟ ಶಿವಭಕ್ತಿಯುಳ್ಳ ಮತ್ತು ನಿಷ್ಕಳಂಕ ಹಾಗೂ ಸ್ವತಂತ್ರವಾದ ಶೀಲವುಳ್ಳ ಶಿವಶರಣೆಯರು ಉದ್ಭವವಾಗುವುದಕ್ಕೆ ಈ ಅನುಭವ ಮಂಟಪದಂತಹ ಸಂಸ್ಥೆಗಳು ಹುಟ್ಟಿಸಿದ ಅನುಕೂಲ ವಾತಾವರಣವೇ ಕಾರಣವಾಯಿತು. ಇವರ ಸಂಖ್ಯೆ ಸುಮಾರು 108. ಇವರಲ್ಲಿ ಅನೇಕರ ವಚನಗಳು ಓದತಕ್ಕವುಗಳಾಗಿವೆ. ಇವರು ವೀರಶೈವ ಧರ್ಮಕ್ಕೆ ಮಾತ್ರವೇ ಅಲ್ಲ, ಇತರ ಸ್ತ್ರೀ ಸಮಾಜಕ್ಕೂ ಭೂಷಣಪ್ರಾಯರಾಗಿದ್ದಾರೆ.

5. ಈ ಅನುಭವ ಮಂಟಪದ ವಿದ್ಯುಚ್ಛಶಕ್ತಿಯ ಆಗರದಲ್ಲಿ ಹುಟ್ಟಿದ ಶಕ್ತಿಯ ಮೂಲಕ ಇಡೀ ಸಮಾಜದಲ್ಲಿ ಒಂದು ತರಹದ ಹೊಸ ಜೀವ, ಹೊಸ ಬೆಳಕು, ಹೊಸ ತೇಜ ಮಿಂಚತೊಡಗಿತು. ಅದರ ಪರಿಣಾಮವೇನಾಯಿತೆಂದರೆ ಅತ್ಯಂತ ಪಾಪಿಗಳು, ನೀಚರು ಎಂದಾಗಿರುವರೂ ಕೂಡ ಪಾವನರಾದರು, ಮತ್ತು ಇವರು ತಮ್ಮ ನೀಚತನವನ್ನು ಬಿಟ್ಟುಕೊಟ್ಟು ಒಳ್ಳೆಯ ಮಾರ್ಗವನ್ನು ಅವಲಂಬಿಸಿದರು. ಅನುಭವ ಮಂಟಪದ ಉಷ್ಣತೆಯಿಂದ ಅನೇಕ ಹಸಿ ಇದ್ದಿಲುಗಳು ಹೊತ್ತಿ ಉರಿಯಹತ್ತಿದವು.

6. ಈ ಸಂಸ್ಥೆಯು ಪ್ರತಿಯೊಬ್ಬ ವ್ಯಕ್ತಿಗೆ ವಿಚಾರ ಸ್ವಾತಂತ್ರ್ಯವನ್ನೂ ಆಚಾರ ಸ್ವಾತಂತ್ರ್ಯವನ್ನೂ ಕೊಟ್ಟಿತು. ಅದರಿಂದ ಮಂಟಪಕ್ಕೆ ಸೇರಿದ ಪ್ರತಿಯೊಬ್ಬರೂ ಸ್ತ್ರೀ ಪುರುಷರೆಂಬ ವ್ಯತ್ಯಾಸವಿಲ್ಲದೆ ಶಿವಾನುಭವವನ್ನು ಸಂಪಾದಿಸಿಕೊಳ್ಳುವುದಕ್ಕೆ ಪ್ರಯತ್ನಿಸಲಾರಂಭಿಸಿದರು. ಮತ್ತು ತಾನು ಸಂಪಾದಿಸಿದ ಆಧ್ಯಾತ್ಮಿಕ ಅನುಭವವನ್ನು ಶೂನ್ಯಪೀಠವನ್ನಲಂಕರಿಸಿದ ಆ ಪ್ರಭುದೇವರ ಚರಣಕಮಲಗಳಿಗೆ ಬಹು ವಿನಯದಿಂದ ಸಮರ್ಪಿಸಿದ ಬಳಿಕ ಅಲ್ಲಿದ್ದ ಇತರ ಶಿವಶರಣರು ಇದರ ಯೋಗ್ಯಾ ಯೋಗ್ಯತೆಯನ್ನು ಕುರಿತು ವಾದಮಾಡುವರು. ಅವರವರು ಪಡೆದುಕೊಂಡ ಇಲ್ಲವೆ ಸಂಪಾದಿಸಿದ ಶಿವಾನುಭವಕ್ಕೆ "ಸಂಪಾದನೆ" ಎಂದು ಹೆಸರು. ಇದು ತರುವಾಯದ ಕಾಲದಲ್ಲಿ 'ಅವರವರ ಸಂಪಾದನೆ' ಎಂದು ಕರೆಯಲ್ಪಟ್ಟಿತು. 'ಶೂನ್ಯಸಂಪಾದನೆ' ಎಂಬುದರ ಅರ್ಥವನ್ನು ಈ ಪುಸ್ತಕದ ಕೊನೆಯಲ್ಲಿ ನೋಡಿಕೊಳ್ಳಬಹುದು.

7. ಇದು ಕನ್ನಡದ ವಾಙ್ಮಯದಲ್ಲಿ ಹೊಸ ಜೀವಕಳೆಯನ್ನು ತುಂಬಿತು. ಬಸವನಿಗಿಂತ ಮುಂಚೆ ಕನ್ನಡ ಭಾಷೆಯು ಪ್ರಾಕೃತ, ಸಂಸ್ಕೃತಮಯವಾಗಿದ್ದು ವಿಶಿಷ್ಟ ವರ್ಗದವರಲ್ಲಿ ಮಾತ್ರವೇ ಆದರಣೀಯವಾಗಿತ್ತು. ಆದರೆ ಮುಂದೆ ಸಾಮಾನ್ಯರಿಗೂ ಕನ್ನಡ ಭಾಷೆಯ ಬಗ್ಗೆ ಅಭಿಮಾನ ಹುಟ್ಟಿತು. ಮತ್ತು ಆ ಶಿವಶರಣರ ಹೃದಯದಿಂದ ಹೊರಹೊಮ್ಮಿದ ಮಿಂಚಿನಂತಹ ಉದ್ಗಾರಗಳು ಕನ್ನಡ ವಾಙ್ಮಯದಲ್ಲಿ ಹೊಸ ತೇಜವನ್ನು ಹುಟ್ಟಿಸಿದವು. ಇವುಗಳಿಗೆ ದಕ್ಷಿಣದ ಉಪನಿಷತ್ತುಗಳೆಂದರೂ ಸಲ್ಲುವುದು. 1931 ಡಿಸೆಂಬರದಲ್ಲಿ ಕಾರವಾರದಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಮುಳಿಯ ತಿಮ್ಮಪ್ಪನವರು ಹೇಳಿದ ಮಾತುಗಳು ಇಲ್ಲಿ ಉದಾಹರಿಸತಕ್ಕವುಗಳಾಗಿವೆ: "ಸಾಹಿತ್ಯವು ಲಕ್ಷಣಬದ್ಧವಾಗಿರಬೇಕೆಂದು ಹೋರಾಡಿದ ಮನ್ನಣೆಯು ಜೈನರಿಗೆ, ಸಾಹಿತ್ಯವೆಂದರೆ ಒಬ್ಬಿಬ್ಬರ ಸೊತ್ತಲ್ಲ ಅದು ಜನಸಾಮಾನ್ಯರ ಹಕ್ಕಿನದು ಎಂದು ಅದನ್ನು ಊರಲ್ಲೆಲ್ಲಾ ಹಾಸುಹೊಕ್ಕಾಗಿ ಹೆಣೆದ ಹೆಗ್ಗಳಿಕೆ ವೀರಶೈವರಿಗೆ. ಒಂದು ತಣ್ಣೀರು, ಮತ್ತೊಂದು ಬಿಸಿನೀರು. ಇವೆರಡನ್ನೂ ಸೇರಿಸಿದ ಜಾಣ್ಮೆ ವೈಷ್ಣವರಿಗೆ" ಇತ್ಯಾದಿ.

8. ಪ್ರತಿಯೊಬ್ಬನೂ ಯಾವುದಾದರೊಂದು ಕೈಕೆಲಸವನ್ನು ಕೈಕೊಳ್ಳಬೇಕೆಂದು ಕಾಯಕವನ್ನು ಕಟ್ಟುಮಾಡಿದ್ದರಿಂದ ಉದ್ಯೋಗದ ಗೌರವವು ಬೆಳೆಯಿತು. ತೋರಲಿಕ್ಕೆ ಎಷ್ಟೇ ಕೀಳು ಕೆಲಸವಾದರೂ ಅದು ಈಶಸೇವೆ, ಮಾನವಸೇವೆಯ ದೃಷ್ಟಿಯಿಂದ ಮಾಡಲ್ಪಡಬೇಕಾದ್ದರಿಂದ ಉದ್ಯೋಗವೆಲ್ಲವೂ ಪವಿತ್ರವಾದುದೇ ಎಂಬ ಭಾವನೆಯನ್ನು ಹುಟ್ಟಿಸಿತು. ಉತ್ತಮಕುಲದವರಿಗೆ ಉತ್ತಮ ಕಸಬುಗಳು, ಹೀನಕುಲದವರಿಗೆ ಹೀನ ಕಸಬುಗಳು ಈ ಮೊದಲು ನೇಮಕವಾಗಿದ್ದು ಉತ್ತಮರು ಕೀಳು ಕಸಬಿನವರನ್ನು ಕಡೆಗಣ್ಣಿನಿಂದ ನೋಡುತ್ತಿದ್ದರು. ವಾಸ್ತವವಾಗಿ ಇದು ಹಿಂದೂದೇಶದ ಔದ್ಯೋಗಿಕ ಇತಿಹಾಸದಲ್ಲಿಯೇ ದೊಡ್ಡದೊಂದು ಕ್ರಾಂತಿಯನ್ನುಂಟುಮಾಡಿತೆಂದು ಹೇಳಬೇಕು.

ವೀರಶೈವ ಸಮಾಜದಲ್ಲಿ ಸರ್ವ ತರಹದ ಕಸಬಿನವರೂ ದೊರೆಯುವುದರಿಂದ ಇದು ಆ ಸಮಾಜಕ್ಕೆ ಸ್ವಾವಲಂಬನದ ಮೂಲಾಕ್ಷರಗಳನ್ನೇ ಕಲಿಸಿಕೊಟ್ಟದ್ದರಿಂದ ಈ ದೇಶದ ಅರ್ಥಶಾಸ್ತ್ರವನ್ನೇ ಬೇರೊಂದು ತಳಹದಿಯ ಮೇಲೆ ರಚಿಸಿತೆಂದು ಹೇಳಬಹುದು.

9. ಈ ಸಂಸ್ಥೆಯು ಭಾವುಕತನ, ಮಡಿ–ಮೈಲಿಗೆಗಳ ಕಲ್ಪನೆ, ಪಂಚಸೂತಕ ಮುಂತಾದ ದೋಷಗಳಿಂದಲೂ, ನಿಷ್ಕಾರಣವಾದ ಅಸ್ಪೃಶ್ಯತೆ ಮುಂತಾದ ಹೊಲೆಯಿಂದಲೂ ಸಮಾಜವನ್ನು ಮುಕ್ತ ಮಾಡಿತು. ಲಿಂಗಧಾರಣವಾದ ಬಳಿಕ ಸರ್ವವನ್ನೂ ಪ್ರಸಾದರೂಪವಾಗಿ ಕಾಣಬೇಕಾಗಿ ಉಳಿದ ಮತಗಳಲ್ಲಿ ರೂಢವಾಗಿರುವ ಸೂತಕ ಮುಂತಾದವುಗಳಿಗೆ ಈ ಮತದಲ್ಲಿ ಆಸ್ಪದವಿರುವುದಿಲ್ಲ. ವೀರಶೈವ ಸಮಾಜದಲ್ಲಿ ಕೆಲವು ಮಟ್ಟಿಗೆ ಕಡಿಮೆಯಾಗಿ ತೋರುವ ಈ ತರದ ದೋಷಗಳು ಮಿಕ್ಕ ಹಿಂದೂ ಪಂಥಗಳಲ್ಲಿ ಇನ್ನೂ ಹೇರಳವಾಗಿ ಕಂಡುಬರುವುದರಿಂದಲೂ, ಅವುಗಳಲ್ಲಿ ಆಧುನಿಕ ಆರೋಗ್ಯಶಾಸ್ತ್ರಕ್ಕೆ ಮೀರಿದ ಬಹು ಸೂಕ್ಷ್ಮವಾದ ಕೆಲವು ಮಡಿ–ಮೈಲಿಗೆಯ ನಿಯಮಗಳು ವಿಶೇಷವಾಗಿ ಸ್ತ್ರೀಯರಿಗೆ ಅಂಟಿಕೊಂಡಿರುವುದರಿಂದಲೂ ಹಿಂದೂ ದೇಶದಲ್ಲಿ ಎಂತಹ ಸಮಾಜಸುಧಾರಕರಿಂದಲೂ ಪ್ರಗತಿಯಾಗಲೊಲ್ಲದು.

10. ಇದು ವಿವಿಧ ಅನುಭವಪುಷ್ಪಗಳಿಂದ ಶೋಭಿಸುವ ಒಂದು ವಸ್ತುಪ್ರದರ್ಶನ ಶಾಲೆಯಾಗಿತ್ತು. ಈ ಹೂದೋಟದಲ್ಲಿ ದೇಶದ ಮೇಲಿರುವ ಸಕಲ ತರದ ಅನುಭವದ ಹೂವಿನಗಿಡಗಳು ಸಂಗ್ರಹಿಸಲ್ಪಟ್ಟಿದ್ದವು. ಒಂದೊಂದು ಹೂವಿಗೆ ಒಂದೊಂದು ಸೌಂದರ್ಯ, ಒಂದೊಂದು ತರದ ವಾಸನೆ. ಈ ಅನುಭವ ಮಂಟಪದಲ್ಲಿ ಶಿವಾನುಭವ ಪುಷ್ಪಗಳು ಬಹು ರಮಣೀಯವಾಗಿ ಶೋಭಿಸುತ್ತಿದ್ದವು. ಆಧುನಿಕ ಶಾಸ್ತ್ರಜ್ಞರು ಈ ವಿವಿಧ ಅನುಭವಗಳನ್ನು ಮಾನವಶಾಸ್ತ್ರಾನುಸಾರ ವಿವಿಧ ಜಾತಿಗಳಾಗಿ ವರ್ಗೀಕರಿಸಿದ್ದಾರೆ.

11. ಅನುಭವ ಮಂಟಪವು, ಪ್ರತಿಯೊಬ್ಬನೂ ಸ್ನಾನ ಮಾಡಿ ತನ್ನ ದೋಷಗಳನ್ನೆಲ್ಲ ಕಳೆದುಕೊಳ್ಳುವುದೊಂದು ದೊಡ್ಡ ಜಲಸಂಚಯವೇ ಆಗಿತ್ತು. ಅನೇಕ ಶಿವಶರಣರು ಈ ತೀರ್ಥದಲ್ಲಿ ಸ್ನಾನ ಮಾಡಿ ಅಹಂಕಾರವೇ ಮುಂತಾದ ದೋಷಗಳನ್ನು ದೂರ ಮಾಡಿಕೊಂಡ ಉದಾಹರಣೆಗಳನ್ನು ನಾವು "ಶೂನ್ಯಸಂಪಾದನೆ" ಎಂಬ ಗ್ರಂಥದಲ್ಲಿ ಕಾಣಬಹುದು. ಅನುಭವವೇ ಶುಭ್ರವಾದ ಖಾದಿ, ಅನುಭವದ ಅರಿದಾಟವೇ ಸಾಬೂನು. ಅನುಭವದ ಮಂಟಪವೇ ಕೊಳ ಎಂಬಂತಿತ್ತು.

12. ಜ್ಞಾನ, ಭಕ್ತಿ ಮತ್ತು ಕರ್ಮ ಈ ಮೂರರೊಳಗೆ ಯಾವುದು ಹೆಚ್ಚಿನದೆಂಬ ವಾದವನ್ನು ಇದು ನಿಲ್ಲಿಸಿಬಿಟ್ಟಿತು. ಮತ್ತು, ಅವು ಮೂರೂ ಸಮವಾಗಿಯೇ ಮಹತ್ವದವುಗಳೆಂಬುದನ್ನು ಸಾರಿ ಹೇಳಿತು. ಗುರು, ಲಿಂಗ, ಜಂಗಮವೆಂಬವುಗಳೇ ಇದರ ಬಾಹ್ಯ ಕುರುಹುಗಳು. ಭಗವದ್ಗೀತೆಯು ಕೂಡ ಬಹುಶಃ ಇದೇ ತರಹದ ಉಚ್ಚ ತತ್ವವನ್ನು ಹೇಳುತ್ತಿದ್ದರೂ ಅದರಲ್ಲಿ ಈ ವಿಷಯವು ವೀರಶೈವ ಧರ್ಮದಲ್ಲಿ ಹೇಳಲ್ಪಟ್ಟಷ್ಟು ಸೂಕ್ಷ್ಮವಾಗಿಯೂ, ಸ್ಪಷ್ಟವಾಗಿಯೂ ನಿರ್ದೇಶಿಸಿಲ್ಲವೆಂದು ಹೇಳಬೇಕು.

13. ಇದು ಗೃಹಸ್ಥಾಶ್ರಮಕ್ಕೆ ಬಹಳ ಗೌರವವನ್ನು ಕೊಟ್ಟಿತು. ಜೈನ, ಬೌದ್ಧಾದಿ ಧರ್ಮಗಳು ಸನ್ಯಾಸಕ್ಕೆ ಬಹಳ ಮನ್ನಣೆಯನ್ನು ಕೊಟ್ಟದ್ದರಿಂದ ಸಮಾಜದ ಮೇಲೆ ನಿವೃತ್ತಿಯ ಪರಿಣಾಮವೇ ಬಹಳವಾಗಿ ಆಗಿತ್ತು. ಆ ಭಾವನೆಯನ್ನು ಕಿತ್ತುಹಾಕಿ ಸಮಾಜವನ್ನು ಸುಧಾರಿಸಿ ಸನ್ಯಾಸಿಯಂತೆ ಗೃಹಸ್ಥನೂ ಮೋಕ್ಷಕ್ಕೆ ಅಧಿಕಾರಿಯೆಂದು ಈ ಸಂಸ್ಥೆಯು ಘಂಟಾಘೋಷವಾಗಿ ಸಾರಿತು. ವೀರಶೈವ ಮತೋದ್ಧಾರಕನಾದ ನಿಜಾರ್ಥದಲ್ಲಿ ಸಂಸ್ಥಾಪಕನಾದ ಬಸವೇಶ್ವರನೂ ಸ್ವತಃ ಗೃಹಸ್ಥಾಶ್ರಮಿಯೇ.

14. ಯಾವ ಅಸ್ಪೃಶ್ಯರು ಮಾನವ ಜಾತಿಗಿರುವ ತಮ್ಮ ಹಕ್ಕುಗಳನ್ನು ಕಳೆದುಕೊಂಡು ಇದುವರೆಗೆ ಹಿಂದೂ ಸಮಾಜದ ಹೊರಗೆ ನಿಂತುಕೊಂಡಿರುವರೋ, ಯಾವ ಜನರ ಉದ್ಧಾರದ ಮೇಲೆ ಹಿಂದೂ ದೇಶದ ಭಾವೀ ರಾಜಕೀಯ ಸ್ಥಿತಿಯು ಅವಲಂಬಿಸಿ ಕೊಂಡಿರುವುದೋ ಅಂತಹ ಅಸ್ಪೃಶ್ಯರನ್ನು ಈ ಸಂಸ್ಥೆಯು ಬಿಗಿದಪ್ಪಿ ಅವರೊಡನೆ ಸಹಪಂಕ್ತಿಭೋಜನ, ಲಗ್ನಸಂಬಂಧವಾದ ವ್ಯವಹಾರವನ್ನು ಮಾಡಿದ್ದಲ್ಲದೆ ಅವರಿಗೆ ಆತ್ಮೋನ್ನತಿಯ ಶಿಕ್ಷಣವನ್ನು ಕೊಟ್ಟಿತೆಂಬುದು ಬಹು ಆಶ್ಚರ್ಯಕರವಾದ ಸಂಗತಿಯಾಗಿದೆ. ಇಪ್ಪತ್ತನೆಯ ಶತಮಾನದಲ್ಲೂ ಈ ವಿಷಯವು ಇಷ್ಟು ಕಠಿಣವೆನಿಸಿರುವಲ್ಲಿ 800 ವರುಷಗಳ ಪೂರ್ವದಲ್ಲಿದ್ದ ಶಿವಶರಣರು ಇದನ್ನು ಸಹಜವಾಗಿ ಆಚಾರದಲ್ಲಿ ತಂದದ್ದನ್ನು ನೋಡಿದರೆ ಆಧುನಿಕ ಸುಧಾರಕರೆಲ್ಲರೂ ತಲೆಬಾಗಿಸಬೇಕಾಗುವುದು. ಈ ಸಂಸ್ಥೆ ಕೊಟ್ಟ ಆಧ್ಯಾತ್ಮಿಕ ಶಿಕ್ಷಣವು ಎಷ್ಟು ಉಚ್ಚ ತರಗತಿಯದಾಗಿತ್ತೆಂಬುದು ಅವರವರು ತಮ್ಮ ತಮ್ಮ ಕಾಯಕಗಳ ದ್ವಾರಾ ಹೇಳಿರುವ ವಚನಗಳಿಂದ ತಿಳಿದುಬರುತ್ತದೆ.

**1. ತುರುಗಾಹಿ ರಾಮಣ್ಣನ ವಚನ**

ಕೋಲೊಂದರಲ್ಲಿ ಹಲವು ಕುಲದ ಗೋವುಗಳ ಚಲಿಸದೆ ನಿಲಿಸುವಂತೆ
ಏಕಚಿತ್ತನಾಗಿ ಸರ್ವವಿಕಾರಂಗಳ ಕಟ್ಟುವಡೆದು
ಇಂದ್ರಿಯಂಗಳ ಇಚ್ಛೆಯಲ್ಲಿ ತ್ರಿವಿಧವ ಹಿಡಿದಿರುವವರ
ಸಂದಿಯಲ್ಲಿ ನುಸುಳದೆ
ವಸ್ತುವಿನ ಅಂಗದಲ್ಲಿಯೆ ತನ್ನಂಗ ತಲ್ಲೀಯವಾಗಿಪ್ಪುದೆ
ಮಹಾನಿಜದ ನೆಲೆ.
ಗೋಪತಿನಾಥ ವಿಶ್ವೇಶ್ವರ ಲಿಂಗವನರಿವುದಕ್ಕೆ ಇದೆ ಬಟ್ಟೆ!

ಮೂರು ಬೆಟ್ಟದ ತಪ್ಪಲಿನ ಮಧ್ಯದಲ್ಲಿ
ಆಡುವ ಹಿಡಿದು ಮೇಯಿಸುತ್ತಿರಲಾಗಿ
ಅಡ್ಡಬೆಟ್ಟದಲ್ಲಿ ದೊಡ್ಡ ಹುಲಿ ಹುಟ್ಟಿ ಹಾಯಿತ್ತು ಹಸುವ;
ಉದ್ದಿನ ಬೆಟ್ಟದಲ್ಲಿ ಭದ್ರಗಜ ಬಂದು
ಹೊತ್ತು ಎತ್ತ;
ಮಧ್ಯದ ಬೆಟ್ಟದಲ್ಲಿ ಹುಟ್ಟಿದ ತೋಳ ಹಿಡಿಯಿತ್ತು ಕರುವಿನ ಕೊರಳ
ಹುಲಿ ಗಜ ತೋಳನ ಉಡು ನುಂಗಿತ್ತ ಕಂಡೆ
ಗೋಪತಿನಾಥ ವಿಶ್ವೇಶ್ವರಲಿಂಗವನರಿಯಲಾಗಿ!

**2. ಮೇದಾರ ಕೇತಯ್ಯಗಳ ವಚನ**

ಒಂದು ಬಿದಿರಿಂಗೆ ಕವೆ ಮೂರು
ಆ ಕವೆಯ ಒಳಗೆ ಲಕ್ಕ ಸಿಬಿರು.
ಮೂರು ಕವೆಯ ಕೊಚ್ಚಿಸಿ, ಬಿಲ್ಲ ಸಿಕ್ಕ ಬಿಡಿಸಿ
ಸೀಳಿದ ಬಿದಿರ ಹೊರೆಹೊರೆಯಲ್ಲಿ ನೆಯಿದೆ
ತೊಟ್ಟಿಲ ಸಂದ ಕಾಣದಂತೆ
ನಾಲ್ಕು ಕಾಲನಿಕ್ಕಿ
ಅಂದಅಂದವಾದ ತೊಟ್ಟಿಲ ದಂಡೆಯನಿಕ್ಕಿ
ಕಟ್ಟುವದಕ್ಕೆ ಶ್ರುತದೃಷ್ಟವೆಂಬೆರಡು
ದಾರದಲ್ಲಿ ತೊಟ್ಟಿಲ ಕಟ್ಟಿ
ಗವರೇಶ್ವರಲಿಂಗಕ್ಕೆ ಹುಟ್ಟುಗೆಟ್ಟು ಹೋಗಾ
ಎಂದು ಜೋಗುಳವಾಡಿದೆ!

**3. ಮಾದಾರ ಚನ್ನಯ್ಯನ ವಚನ**

ಸ್ಥೂಲ ಸೂಕ್ಷ್ಮ ಕಾರಣವೆಂಬ ಮೂರು ಕಂಬವ ನೆಟ್ಟು
ಆಗುಚೇಗೆಂಬ ದಡಿಗೋಲಿನಲ್ಲಿ
ಅಗಡದ ಎಮ್ಮೆಯ ಚರ್ಮವ ತೆಗೆದು
ಉಭಯನಾಮವೆಂಬ ನಾರಿನಲ್ಲಿ ತಿತ್ತಿಯನೊಪ್ಪುವ ಮಾಡಿ
ಭಾವವೆಂಬ ತಿಗುಡಿಯಲ್ಲಿ
ಸರ್ವಸಾರವೆಂಬ ಖಾರದ ನೀರ ಹೊಯಿದು
ಅಟ್ಟೆಯ ದುರ್ಗುಣ ಕೆಟ್ಟು
ಮೆಟ್ಟಡಿಯವರಿಗೆ ಮುಟ್ಟಿಸಬಂದೆ
ಮೆಟ್ಟಡಿಯ ತಪ್ಪಲ ಕಾಯದೆ
ಮೆಟ್ಟಡಿಯ ಬಟ್ಟೆಯ ನೋಡಿಕೊಳ್ಳಿ
ಕೈಯುಳಿಕತ್ತಿ ಅಡಿಗೂಂಟಕ್ಕಡಿಯಾಗಬೇಡ
ಅರಿ ನಿಜಾತ್ಮರಾಮರಾಮನಾ.

15. ಮತ್ತೊಂದು ಅತ್ಯಂತ ಮಹತ್ವದ ವಿಷಯವೇನೆಂದರೆ ಇದರಲ್ಲಿ ಮುಳ್ಳಾವಿಗೆಯ ಕಾಯಕವೆಂಬುದೊಂದು ಪ್ರಾಯಶ್ಚಿತ್ತದ ಹೊಸ ತರಹದ ವಿಧಿಯು ಪ್ರಚಾರದಲ್ಲಿ ತರಲ್ಪಟ್ಟದ್ದು. ಪಾಪಿಗಳಾದವರು ತಮ್ಮ ಪಾಪದ ಬಗ್ಗೆ ಪಶ್ಚಾತ್ತಾಪ ಪಡುವಂತೆ ನಿರಪರಾಧಿಗಳಾದ ಶಿವಭಕ್ತರು ಮೊಳೆಗಳ ಮೇಲೆ ಉಪವಾಸವೇ ನಿಂತುಕೊಳ್ಳುವುದು. ಪಾಪಮಾಡಿದವನು ಒಬ್ಬನು, ದುಃಖ ಅನುಭವಿಸುವವನು ಇನ್ನೊಬ್ಬನು. ಕರ್ಮವಾದಕ್ಕೂ ಮಾನವ ಸ್ವಭಾವಕ್ಕೂ ವಿರೋಧವಾಗಿ ತೋರುವ ಈ ಆತ್ಮಶುದ್ಧತೆಯ ತತ್ವವು ಜಗತ್ತಿನಲ್ಲಿ ಸುಧಾರಿಸಿದ ಇತರ ಯಾವ ಸಮಾಜಗಳಲ್ಲಿಯೂ ಪ್ರಚಾರದಲ್ಲಿದ್ದಂತೆ ಕಂಡು ಬರುವುದಿಲ್ಲ.

ಈ ಮಂಟಪವು ಪ್ರಾಚೀನಕಾಲದ ಅಶೋಕನ ಸಭೆಯನ್ನು ಇಲ್ಲವೆ ತಮಿಳರ ಸಂಗಮವನ್ನು ನೆನಪಿಗೆ ತರುತ್ತದೆ. ಅಥವಾ ಉಪನಿಷತ್ಕಾಲದ ಜನಕರಾಯನ ಇಲ್ಲವೇ

ಮೊಗಲರ ಕಾಲದ ಅಕಬರನ ಧಾರ್ಮಿಕ ಸಭೆಯನ್ನು ಹೋಲುತ್ತದೆ. ಆದರೆ ಇವೆಲ್ಲವುಗಳಿಗಿಂತಲೂ ಅನುಭವಮಂಟಪದ ವಿಶೇಷವೇನೆಂದರೆ ತತ್ವವೂ, ಕೃತಿಯೂ ಏಕಾರ್ಥವಾಗಿರುವುದೇ. ಸ್ವಲ್ಪದರಲ್ಲಿ ಹೇಳಿದರೆ ಅನುಭವ ಮಂಟಪವು ಹಿಂದೂದೇಶದ ಧಾರ್ಮಿಕ ಇತಿಹಾಸದಲ್ಲಿ ಅಪೂರ್ವವಾದ ಒಂದು ಸಂಸ್ಥೆ ಎಂದು ಹೇಳಬೇಕು.

ಈ ಪುಟ್ಟ ಪುಸ್ತಕವನ್ನು ಓದುವವರಿಗೆ ವೀರಶೈವ ಧರ್ಮದಲ್ಲಿರುವ ವಿಚಾರಗಳು ಆಗಮಧರ್ಮದಲ್ಲಿ ಇಲ್ಲವೆ ವೈಷ್ಣವ ಮುಂತಾದ ಇತರ ಹಿಂದೂ ಭಕ್ತಿಪಂಥಗಳಲ್ಲಿ ದೊರೆಯಬಹುದಾಗಿದ್ದರೂ ಇವುಗಳನ್ನು ಕೃತಿಯಲ್ಲಿ ತಂದ ಶ್ರೇಯಸ್ಸು 12ನೆಯ ಶತಮಾನದ ವೀರಶೈವರಿಗಲ್ಲದೆ ಮತ್ತಾರಿಗೂ ದೊರೆಯದು.

**6. ಶೂನ್ಯಸಂಪಾದನೆ**

"ಶೂನ್ಯ"ವೆಂಬುವ ಶಬ್ದವು ಬೌದ್ಧರ ಗ್ರಂಥಗಳಲ್ಲಿ ವಿಶೇಷವಾಗಿ ಬರುವುದರಿಂದ ಇದು ಅಲ್ಲಿಂದ ತೆಗೆದುಕೊಂಡದ್ದೆಂದು ಅನೇಕರು ಊಹಿಸಬಹುದು. ಆದರೆ ಅದಕ್ಕೂ ಇದಕ್ಕೂ ಅರ್ಥದಲ್ಲಿ ಬಹಳ ವ್ಯತ್ಯಾಸವಿದೆ. "ಶೂನ್ಯಸಂಪಾದನೆ" ಎಂದರೆ ಯಾವುದು ವಾಙ್ಮನಕ್ಕೆ ಆಗೋಚರವಾಗಿದ್ದು ಬುದ್ಧಿಗೆ ಕೇವಲ ಶೂನ್ಯವಾಗಿ ತೋರುವುದೋ ಅಂತಹ ಪರಬ್ರಹ್ಮವಸ್ತುವನ್ನು ಅನುಭವದಿಂದ ಸಂಪಾದಿಸುವುದೇ ಶೂನ್ಯಸಂಪಾದನೆ. ಇದರಿಂದ ವೀರಶೈವರ ಶೂನ್ಯವೆಂದರೆ ಬುದ್ಧನ ನಿರ್ವಿಕಾರ ಶೂನ್ಯವಲ್ಲ; ಅದ್ವೈತದ ಜಗನ್ಮಿಥ್ಯಾತ್ವದ್ದಲ್ಲ; ದ್ವೈತದ ಜೀವಪರಮಾತ್ಮರ ಭೇದವಲ್ಲ; ಅದು ಶಕ್ತಿವಿಶಿಷ್ಟಾದ್ವೈತವೇ. ಜಗತ್ತೂ ಜೀವನೂ ಪರಬ್ರಹ್ಮನಂತೆ ಸತ್ಯವಸ್ತುಗಳೆಂದೂ ಕೊನೆಗೂ ಅವೆಲ್ಲವೂ ಪರಬ್ರಹ್ಮನಲ್ಲಿ ಲೀನವಾಗಿ ಅವನಲ್ಲಿಯೇ ಅಡಗಿಕೊಂಡಿರುವುವೆಂದೂ ಅದು ಹೇಳುತ್ತದೆ. ಈ ಅವ್ಯಕ್ತ ಸ್ಥಿತಿಗೆ ವೀರಶೈವ ಧರ್ಮದಲ್ಲಿ 'ನಿಷ್ಕಲ'ವೆಂದೆನ್ನುತ್ತಾರೆ. ಪದಾರ್ಥಕ್ಕೂ ಅದರೊಳಗಿನ ಶಕ್ತಿಗೂ, ಲೋಹಚುಂಬರಕ್ಕೂ ಅದರ ಆಕರ್ಷಣಶಕ್ತಿಗೂ, ಸೂರ್ಯನಿಗೂ ಅದರ ಕಿರಣಗಳಿಗೂ ಇರುವ ಸಂಬಂಧವೇ ಜೀವಬ್ರಹ್ಮರ ಸಂಬಂಧವು. ಶೂನ್ಯಸಂಪಾದನೆಯಲ್ಲಿ ಅನುಭವಕ್ಕೆ ಬರಬೇಕಾದ ಇನ್ನೊಂದು ವಿಷಯವೇನೆಂದರೆ, ಜೀವನು ತನ್ನ ವ್ಯಕ್ತಿತ್ವವನ್ನು ಪರಬ್ರಹ್ಮದಲ್ಲಿ ಸಂಪೂರ್ಣವಾಗಿ ಅಡಗಿಸಿ ಶೂನ್ಯತ್ವವನ್ನು ಸಂಪಾದಿಸುವನು. ಆ ಶೂನ್ಯವು ಅಂದರೆ ಪರಶಿವನು ಸಂಪಾದನೆಯಾಗಬೇಕಾದರೆ ಇದಕ್ಕೆ ವಿರೋಧವಾಗಿ ತತ್ಪೂರ್ವದಲ್ಲಿ ಸಂಪಾದಿಸಲ್ಪಟ್ಟಿರುವ ಅಹಂಕಾರವು ಮೊಟ್ಟಮೊದಲು ಶೂನ್ಯವಾಗಬೇಕು. ಇಲ್ಲಿ ವೀರಶೈವ ಪರಿಭಾಷೆಯನ್ನು ಪ್ರಯೋಗಿಸಿದರೆ ಅಂಗಾಂಗವೆಲ್ಲ ಲಿಂಗಾಂಗಕ್ಕೆ ಮಾರ್ಪಾಟಾಗ ಬೇಕೆಂಬುದೇ. ಇದಕ್ಕೆ ಆಧುನಿಕ ಮನಶ್ಶಾಸ್ತ್ರವು "ಸಬ್ಲಿಮೇಷನ್" (ಔನ್ನತ್ಯ, ಉದಾತ್ತೀಕರಣ) ಹೆಸರು ಕೊಟ್ಟಿರುವುದು. ಈ ಐಕ್ಯಸ್ಥಿತಿಯನ್ನು ಇಲ್ಲವೆ ಲಿಂಗಾಂಗ ಸಾಮರಸ್ಯದ ಅನುಭವವನ್ನು ಯಾವ ತತ್ತ್ವ, ಸಿದ್ಧಾಂತದ ಭಾಷೆಯಿಂದಲೂ ವಿವರಿಸಿ ಹೇಳಲಶಕ್ಯವು.

❑

# ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಚನಗಳು

ರಂಗನಾಥ್ ಮೈಸೂರು

ಪ್ರತಿಭೆ ಗುರುತಿಸುವ ಸೂಕ್ಷ್ಮ ನೋಟ
ಮಂತ್ರಮುಗ್ಧಗೊಳಿಸುವ ನಗೆಯ ಮಾಟ
ಜಗದ ಕರುಣೆಯೆಲ್ಲ ಒಟ್ಟಾಗಿ ಕುಳಿತಿಹುದಿಲ್ಲಿ
ಮಮತೆಯ ಮಲ್ಲಿಗೆಯ ಘಮಘಮಿಸುತ್ತ
ಶಿರಬಾಗಿ ಕರಮುಗಿವೆ ಪೊರೆಯಯ್ಯಾ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಜಗವೆಲ್ಲ ಮುನಿದರೂ ಚಿಂತೆಯಿಲ್ಲ ಎನಗೆ
ಕಾಯಲು ಗುರುವೆ ನೀನಿರುವೆಯಲ್ಲ
ಅರಿವು ಎನಗಿಲ್ಲ ಮಂದಮತಿ ನಾನಯ್ಯ
ನಿನ್ನಡಿಯ ಎಡೆಯಲ್ಲಿ ತಾವನೀಡಿ ಸಲಹಯ್ಯ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ಬಯಕೆಗಳ ಬಂಧನದಿ ಬಳಲಿ ತೊಳಲಿರುವೆ
ಸಿಗದ ಮೃಗಜಲವ ಬಯಸಿ ಬೆಂದಿರುವೆ
ನಿನ್ನನುಗ್ರಹದ ಜಲಧಿಯೊಳಗೆನ್ನ ಮುಳುಗಿಸಿ
ಮೇಲೆತ್ತಿ ಆಸೆಗಳ ಬಲೆಬಿಡಿಸಿ ಎನ್ನ ಉದ್ದರಿಸಯ್ಯಾ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಆಡುವ ಕೂಸೊಂದು ಅಮ್ಮನ ಕರೆದಂತೆ
ತಂಪಾದ ತಿಂಗಳನು ಚುಕ್ಕೆ ತಾರೆಗಳನಿಟ್ಟಂತೆ
ವಸುಂಧರೆಯು ಹಸಿರು ಅಂಬರವುಟ್ಟು ನಲಿವಂತೆ
ನಿರ್ಮಲ ಭಕ್ತಿಭಾವದಲಿ ಕರಮುಗಿದು ಕರೆವೆ
ಬಂದೆನ್ನ ಮನದ ಅಂಗಳದಿ ಕುಳಿತು
ಹರಸೆನ್ನ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಮೊರೆವ ಸಾಗರ ಬತ್ತಿಹೋಗಲು ಬಹುದು
ಸುರಿವ ಜಲಪಾತ ಸೊರಗಿಹೋಗಲು ಬಹುದು
ಕರದಲ್ಲಿ ಕುಣಿವ ಝಣಝಣ ಕಾಂಚಾಣ
ಕರಗಿಹೋಗಲೂ ಬಹುದು
ನಿನ್ನನುಗ್ರಹದ ಅಮೃತ ಭಾಂಡವೊಂದು
ಅಕ್ಷಯವಾಗುವಂತೆನ್ನ ಹರಸಯ್ಯಾ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಕಣ್ಣತುಂಬೆಲ್ಲ ಕರುಣೆಯ ಬೆಳಕ ಪ್ರಭೆ
ಸಮಯಕ್ಕೂ ಎಚ್ಚರಿಸುವ ನಿಖರ ನಡೆ
ಆಡುವ ಮಾತೆಲ್ಲವೂ ಕಾರಣಿಕವಾಗುವ ನುಡಿ
ನಿನ್ನ ಬಣ್ಣಿಸಲು ಅಳವುಂಟೆ ಎನಗೆ
ಮಂದಮತಿಯು ನಾನು ಭಕ್ತಿಯಲಿ ಪೊಡಮುಡುವೆ
ಪ್ರೀತಿಯಲಿ ಪೊರೆಯಯ್ಯಾ ಸುತ್ತೂರು ಸಿರಿ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಧರ್ಮ ಯಾವುದಾದರೇನು ದಯೆಮುಖ್ಯ
ಎಂದವರು ನೀವು
ಕುಲ ಯಾವುದಾದರೇನು ಕಾಯಕ ಮುಖ್ಯ
ಎಂದವರು ನೀವು
ಮತ ಯಾವುದಾದರೇನು ಮಾನವೀಯತೆ ಮುಖ್ಯ
ಎಂದವರು ನೀವು
ಮನದ ಗುಡಿಗೆ ಮೌಲ್ಯಗಳ ತೋರಣ ಕಟ್ಟಿ
ಒಳಗೆ ನಿರಾಕಾರ ನಿರ್ಗುಣ ಲಿಂಗರೂಪಿ
ಶಿವನ ಪೂಜಿಸುವ ಭಕ್ತರ ನಿತ್ಯ ಹರಸುವ
ಚಿದಾನಂದ ರೂಪಿ ಸದಾ ಎನ್ನ ಕಾಯಯ್ಯ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

(ಮುಂದುವರಿಯುವುದು)

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

### ಶಿವಕುಮಾರ ಶ್ರೀಗಳು ಅಪರೂಪದ ಚೇತನ

ಶಿವಕುಮಾರ ಶ್ರೀಗಳು ಅಪರೂಪದ ಚೇತನ ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 1ರಂದು ತುಮಕೂರು ಶ್ರೀ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 118ನೇ ಜಯಂತಿಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ನಾಡಿನ ತುಂಬಾ ಶಿವಕುಮಾರ ಶ್ರೀಗಳನ್ನು ಸ್ಮರಿಸಲಾಗುತ್ತಿದೆ. ಅವರ ಜೀವನ ಮತ್ತು ಸಾಧನೆ ಅಪರೂಪವಾದುದು. ಅವರು ಶರಣರ ನುಡಿಗಳಂತೆ ಬದುಕಿದವರು. ಕೇವಲ ವಿದ್ಯಾರ್ಥಿನಿಲಯವನ್ನು ಮಾತ್ರ ಸ್ಥಾಪಿಸದೆ, ಅಲ್ಲಿಗೆ ಬಂದ ಮಕ್ಕಳಿಗೆಲ್ಲ ಮಾತೃವಾತ್ಸಲ್ಯದ ತಾಯಿಯ ಮಮತೆಯನ್ನು ಧಾರೆ ಎರೆದರು. ಅವರ ಸ್ಮರಣೆ ಜೀವನದ ಪುಣ್ಯ ವಿಶೇಷ ಎಂದು ಜನರು ಭಾವಿಸಿದ್ದಾರೆ. ಬದುಕಿದ್ದಾಗಲೇ ನಡೆದಾಡುವ ದೇವರು ಅಂತ ಕರೆಸಿಕೊಂಡ ಅಪರೂಪದ ಸಂತರು. ಅವರು ಕರ್ಮಭೂಮಿಯನ್ನು ಬೃಹತ್ ಆಧ್ಯಾತ್ಮಿಕ ಕೇಂದ್ರವಾಗಿ ಬೆಳೆಸಿದರು ಎಂದು ಹೇಳಿದರು.

ಕೇಂದ್ರದ ರಕ್ಷಣಾ ಸಚಿವರಾದ ಶ್ರೀ ರಾಜನಾಥ್ ಸಿಂಗ್‌ರವರು ಸಂತರ ಮಾರ್ಗದಿಂದ ಆತ್ಮನಿರ್ಭರ ಭಾರತ ನಿರ್ಮಾಣ ಸಾಧ್ಯವಾಗುತ್ತದೆ. ದಕ್ಷಿಣ ಭಾರತವು ದೇಶದ ಅಧ್ಯಾತ್ಮಿಕತೆಗೆ ದೊಡ್ಡ ಮಾರ್ಗದರ್ಶನ ನೀಡಿದೆ. ಅದಕ್ಕೆ ಶಂಕರಾಚಾರ್ಯರು ನಿದರ್ಶನರಾಗಿದ್ದಾರೆ. ನಾವೆಲ್ಲರೂ ಭಾರತದ ಸಂಸ್ಕೃತಿಯನ್ನು ಉತ್ಕೃಷ್ಟಗೊಳಿಸುವ ಮೂಲಕ ವಿಶ್ವಗುರು ಭಾರತ ನಿರ್ಮಾಣಕ್ಕೆ ಶ್ರಮಿಸಬೇಕಿದೆ. ತಾಯಿ ಚಾಮುಂಡೇಶ್ವರಿ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಪುರಂದರದಾಸರ ಜನ್ಮ ಸ್ಥಳ ಕರ್ನಾಟಕ. ದೇಶದ ನಿರ್ಮಾಣಕ್ಕೆ ಕರ್ನಾಟಕದ ಕೊಡುಗೆ ಅಪಾರವಾಗಿದೆ. ಆತ್ಮನಿರ್ಭರ ಭಾರತ ನಿರ್ಮಾಣಕ್ಕಾಗಿ ಸಾಧುಸಂತರ ತತ್ವಾದರ್ಶಗಳನ್ನು ಅನುಸರಿಸಬೇಕಿದೆ. ಮಾನವನ ಕಲ್ಯಾಣಕ್ಕೆ ಬದುಕನ್ನು ಅರ್ಪಿಸಿಕೊಂಡ ಸಂತರು ಶ್ರೀ ಶಿವಕುಮಾರ ಸ್ವಾಮಿಗಳು ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಸೇವೆ, ದಾಸೋಹ, ಕಾಯಕದ ಪ್ರತಿರೂಪವಾಗಿದ್ದವರು ಶಿವಕುಮಾರ ಶ್ರೀಗಳು. ಅವರೊಂದು ವಿಸ್ಮಯದ ಶಕ್ತಿ. ಗ್ರಾಮಾಂತರ ಮಕ್ಕಳ ಬದುಕು ಹಸನಾಗಬೇಕೆಂದು ಹಳ್ಳಿಗಳಲ್ಲಿ ಶಾಲೆ ಆರಂಭಿಸಿದರು. ಅವರ ಬದುಕು ಆದರ್ಶಪ್ರಾಯವಾದುದು. ಅವರು ಬದುಕನ್ನು ಸಂಪೂರ್ಣ ತ್ಯಾಗ ಮತ್ತು ಸೇವೆಗೆ ಅರ್ಪಣೆ ಮಾಡಿದರು. ಸರ್ವಸ್ವವನ್ನೂ ಸಮಾಜಕ್ಕೆ ಸಮರ್ಪಿಸಿದರು ಎಂದರು.

ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಇಂತಹ ಪವಿತ್ರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಅತ್ಯಂತ ಪುಣ್ಯವಾದುದು. ಅದಕ್ಕಿಂತ ಹೆಚ್ಚಾಗಿ ನನ್ನ ತಂದೆ–ತಾಯಿ ನನಗೆ ಶಿವಕುಮಾರನೆಂದು ಹೆಸರಿಟ್ಟದ್ದು ನನ್ನ ಭಾಗ್ಯ. ಇವತ್ತಿಲ್ಲಿ ದೇವರನ್ನು ಸ್ಮರಿಸುವ ಭಾಗ್ಯ ನಮಗೆ ಸಿಕ್ಕಿದೆ. ಪ್ರಯತ್ನ ವಿಫಲವಾಗಬಹುದು ಪ್ರಾರ್ಥನೆ ವಿಫಲವಾಗುವುದಿಲ್ಲ ಎಂದರು.

ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳು, ಕೇಂದ್ರದ ರಾಜ್ಯ ಸಚಿವರಾದ ಶ್ರೀ ವಿ. ಸೋಮಣ್ಣನವರು ಮಾತನಾಡಿದರು. ಡಾ. ಸಿ. ಸೋಮಶೇಖರ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಶ್ರೀಮಠದ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ರವೀಂದ್ರ ಸೊರಗಾಂವಿ ವಚನ ಗಾಯನ ಮಾಡಿದರು. ಶ್ರೀ ರೇಣುಕಪ್ಪ ವಂದಿಸಿದರು.

**ಧರ್ಮಗಳು ಭಿನ್ನವಾಗಿದ್ದರೂ ಬೋಧಿಸುವ ಮೌಲ್ಯಗಳು ಏಕರೂಪವಾಗಿವೆ**

ಹಿಂದೂ ಮತ್ತು ಕ್ರಿಶ್ಚಿಯನ್ ಧರ್ಮಗಳು ಹಲವು ವಿಧಗಳಲ್ಲಿ ಭಿನ್ನವಾಗಿದ್ದರೂ ಆಧ್ಯಾತ್ಮಿಕ ತತ್ವಗಳು ಮತ್ತು ಮೌಲ್ಯಗಳು ಒಂದೇ ತೆರನಾಗಿರುತ್ತವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 3ರಂದು ಕೇರಳದ ಕೊಟ್ಟಾಯಂ ಜಿಲ್ಲೆಯ ಪಂಪಾಡಿಯಲ್ಲಿ ಕೆಸಿಸಿ ಯೂಥ್ ಕಮಿಷನ್ ವತಿಯಿಂದ ಆಯೋಜಿಸಿದ್ದ ಸಂತ ಕುರಿಯಾಕೋಸ್ ಮಾರ್ ಗ್ರೆಗೋರಿಯಸ್ ಮೆಟ್ರೋಪಾಲಿಟನ್‌ರವರ 60ನೇ ಪುಣ್ಯಸ್ಮರಣೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮಲಂಕರ ಆರ್ಥೊಡಾಕ್ಸ್ ಚರ್ಚ್‌ನ ಇತಿಹಾಸವು ವಸಾಹತುಶಾಹಿ ಶಕ್ತಿಗಳ ಪ್ರಾಬಲ್ಯದ ವಿರುದ್ಧದ ಬೃಹತ್ ಹೋರಾಟದ ಒಂದು ಸಾಹಸಗಾಥೆಯಾಗಿದೆ. ಸಂತ ಕುರಿಯಾಕೋಸ್ ಮಾರ್ ಗ್ರೆಗೋರಿಯಸ್‌ರವರು ನಮ್ರತೆ, ಕರುಣೆ ಮತ್ತು ನಂಬಿಕೆಯ ದಾರಿದೀಪವಾಗಿದ್ದರು. ಧರ್ಮನಿಷ್ಠ ಕುಟುಂಬದಲ್ಲಿ ಜನಿಸಿದ ಅವರು ಜೀವನವನ್ನು ದೇವರು ಮತ್ತು ಮಾನವೀಯತೆಯ ಸೇವೆಗೆ ಮುಡಿಪಾಗಿಟ್ಟಿದ್ದರು. ಅವರ ಆಳವಾದ ಆಧ್ಯಾತ್ಮಿಕತೆಯು ಕ್ರಿಸ್ತನ ಬೋಧನೆಗಳನ್ನು ನಿಜವಾಗಿಯೂ ಸಾಕಾರಗೊಳಿಸುವಂತೆ ಮಾಡಿತು. ಸಂತ ಕುರಿಯಾಕೋಸ್ ಮಾರ್ ಗ್ರೆಗೋರಿಯಸ್‌ರವರ ಜೀವನ, ಬೋಧನೆಗಳು ನಂಬಿಕೆ, ಸೇವೆ ಮತ್ತು ನಮ್ರತೆಯ ಆದರ್ಶಗಳಾಗಿವೆ.

ಕ್ರಿಶ್ಚಿಯನ್ ಧರ್ಮವು ಪ್ರೀತಿ, ಕರುಣೆ ಮತ್ತು ಪರಸ್ಪರ ಗೌರವದ ಸಂದೇಶವನ್ನು ಆಧರಿಸಿದೆ. ಇತರರ ನಂಬಿಕೆಗಳೊಂದಿಗೆ ಸಂಭಾಷಣೆ ಮತ್ತು ಸಂಪರ್ಕವನ್ನು ಬೆಳೆಸುವ ಆಳವಾದ ಸಂಪ್ರದಾಯವನ್ನು ಹೊಂದಿದೆ. ಸರ್ವಧರ್ಮೀಯ ಸಭೆಗಳು ಮತ್ತು ಸಂವಾದಗಳು ವಿವಿಧ ಧಾರ್ಮಿಕ ಹಿನ್ನೆಲೆಯ ಜನರನ್ನು ಒಟ್ಟಿಗೆ ಸೇರಿಸುವ ಸೇತುವೆಯಾಗಿ ಕಾರ್ಯನಿರ್ವಹಿಸುತ್ತವೆ. ಶಾಂತಿ, ನ್ಯಾಯ ಮತ್ತು ಮಾನವೀಯತೆಯ ಮೌಲ್ಯಗಳನ್ನು ಒತ್ತಿಹೇಳುತ್ತವೆ.

ಹಿಂದೂ ಧರ್ಮವು ವಿಸ್ತಾರವಾದ ಆಧ್ಯಾತ್ಮಿಕ ಒಳಗೊಳ್ಳುವಿಕೆಯೊಂದಿಗೆ ಅಂತರಧರ್ಮ ಸಂಪರ್ಕಗಳನ್ನು ಪೋಷಿಸಿದೆ. ಹಿಂದೂ ಧರ್ಮವು ಸರ್ವಧರ್ಮ ಸಮಭಾವ ಮತ್ತು ಎಲ್ಲಾ ಧರ್ಮಗಳ ಸಮಾನತೆಯನ್ನು ಎತ್ತಿಹಿಡಿದು ದೈವಿಕತೆಯ ಬಹುಮುಖ ಮಾರ್ಗಗಳನ್ನು ಸೂಚಿಸುತ್ತದೆ. ಈ ತತ್ವವು ಹಿಂದೂ ಧರ್ಮವನ್ನು ಇತರರ ನಂಬಿಕೆ ಮತ್ತು ಸಂಪ್ರದಾಯಗಳೊಂದಿಗೆ ಅಂತರ್ಗತವಾಗಿ ಮುಕ್ತಗೊಳಿಸಿದೆ. ಕರ್ನಾಟಕದಲ್ಲಿ 12ನೇ ಶತಮಾನದಲ್ಲಿ ಶ್ರೀ ಬಸವೇಶ್ವರರು ಭಕ್ತಿಕೇಂದ್ರಿತ ಚಳುವಳಿಯನ್ನು ಪ್ರಚಾರ ಮಾಡಿದರು. ಆಧ್ಯಾತ್ಮಿಕ ಇತಿಹಾಸದಲ್ಲಿ ಕೆಲವೇ ಜನರು ದೇವರ ಸಾಕ್ಷಾತ್ಕಾರವನ್ನು ನೇರ ಪದಗಳಲ್ಲಿ ವಿವರಿಸಬಲ್ಲರು. ಅಂಥವರಲ್ಲಿ ಬಸವಣ್ಣನವರು ಒಬ್ಬರು ಎಂದು ಹೇಳಿದರು.

ಶ್ರೀ ಶಿವಗಿರಿ ಮಠದ ಶ್ರೀ ಸಚ್ಚಿದಾನಂದ ಸ್ವಾಮಿಗಳು, ಶ್ರೀ ಬಸೇಲಿಯೋಸ್ ಮಾರ್ಥೋಮಾ ಮ್ಯಾಥ್ಯೂಸ್ III, ಶ್ರೀ ಹೆಚ್.ಜಿ. ಯುಹಾನೋನ್ ಮಾರ್ ಡಯಾಸ್ಕೋರಸ್, ಶ್ರೀ ಹೆಚ್.ಜಿ. ಥಾಮಸ್ ತೈಮೋಥಿಯಸ್ ಎಪಸ್ಕೋಪಾ, ಶ್ರೀ ಜಿಬಿನ್ ಜಾಕೋಬ್, ಶ್ರೀ ಹೆಚ್.ಬಿ. ಮಾರ್ ಔಗಿನ್ ಕುರಿಕೋಸ್, ಶ್ರೀ ಹೆಚ್.ಜಿ. ಮ್ಯಾಥ್ಯೂಸ್ ಮಾರ್ ಸಿಲ್ವಾನಿಯೋಸ್, ಶ್ರೀ ಪ್ರಕಾಶ್ ಪಿ. ಥಾಮಸ್, ಶ್ರೀ ಅನೂಪ್ ಅಬ್ರಾಹಂ ರವರುಗಳು ಮಾತನಾಡಿದರು. ಶ್ರೀಯಾ ಅನ್ನಾ ಜೋಸೆಫ್ ಪ್ರಾರ್ಥಿಸಿದರು. ಶ್ರೀಮತಿ ದಿವ್ಯಾ ಎಂ. ಜೋಸ್ ಸ್ವಾಗತಿಸಿದರು. ಶ್ರೀ ಪ್ರಾಕಿನ್ ಜಾರ್ಜ್ ಕುರಿಕೋಸ್ ವಂದಿಸಿದರು.

**ಶ್ರೀ ಡಿ. ಮಾದೇಗೌಡರು ಅಪಾರ ಸಾಮಾಜಿಕ ಕಳಕಳಿಯುಳ್ಳವರು**

ಮನೆ ಮಾದೇಗೌಡರು ಎಂದೇ ಹೆಸರಾದ ಶ್ರೀ ಡಿ. ಮಾದೇಗೌಡರು ಅಪಾರ ಸಾಮಾಜಿಕ ಕಳಕಳಿಯುಳ್ಳವರು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 13ರಂದು ಮೈಸೂರು ಕಲಾಮಂದಿರದಲ್ಲಿ ಸಿಐಟಿಬಿಯ ಮಾಜಿ ಅಧ್ಯಕ್ಷರು ಹಾಗೂ ಮಾಜಿ ವಿಧಾನಪರಿಶ್ ಸದಸ್ಯರಾದ ಶ್ರೀ ಡಿ. ಮಾದೇಗೌಡರವರಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಪ್ರತಿಯೊಬ್ಬರಿಗೂ ತಲೆಯ ಮೇಲೊಂದು ಸೂರು ಕೊಡಬೇಕು ಎಂಬ ಉದ್ದೇಶದಿಂದ ಆಶಾಮಂದಿರ ಯೋಜನೆ ರೂಪಿಸಿದರು. ಎಲ್ಲಾ ವರ್ಗದ ಜನರ ಮನೆ ಬಾಗಿಲಿಗೆ ತೆರಳಿ, ಮನೆ ಹಾಗೂ ನಿವೇಶನಗಳನ್ನು ಹಂಚಿಕೆ ಮಾಡುವ ಮೂಲಕ ಕ್ರಾಂತಿಯನ್ನೇ ಮಾಡಿದರು. ಅದು ಅವರಿಗೆ ಖ್ಯಾತಿಯನ್ನು ತಂದುಕೊಟ್ಟಿತು ಎಂದು ಹೇಳಿದರು.

ಆದಿಚುಂಚನಗಿರಿ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಸಂಘಟನೆ ಮೂಲಕ ಕುಂಬಾರಕೊಪ್ಪಲಿನಲ್ಲಿ ನೈರ್ಮಲ್ಯ ಘಟಕ ನಡೆಸುವುದರೊಂದಿಗೆ ನಾನಾ ಸೇವೆಗಳಲ್ಲಿ ಸಕ್ರಿಯವಾಗಿದ್ದಾರೆ. ಅವರ ಸೇವೆಯನ್ನು ಗುರುತಿಸಿ ರಾಜ್ಯ ಸರ್ಕಾರದ ರಾಜ್ಯೋತ್ಸವ, ಆದಿಚುಂಚನಗಿರಿ ಮಠದಿಂದ ಚುಂಚಶ್ರೀ ಪ್ರಶಸ್ತಿಗಳು ಸಂದಿರುವುದು ಸಂತೋಷದ ವಿಷಯ ಎಂದರು.

ಮಾಜಿ ಉಪಮುಖ್ಯಮಂತ್ರಿಗಳು ಹಾಗೂ ಶಾಸಕರಾದ ಡಾ. ಸಿ.ಎನ್. ಅಶ್ವಥ್ ನಾರಾಯಣ್‌ರವರು ಮಾದೇಗೌಡರು ದೂರದೃಷ್ಟಿಯ ನಾಯಕರಾಗಿದ್ದು, ಮೈಸೂರಿನ ಬೃಹತ್ ಕೈಗಾರಿಕಾ ಪ್ರದೇಶ ನಿರ್ಮಾಣವಾಗಲು ಶ್ರಮಿಸಿದ್ದಾರೆ. ಯಾವುದೇ ಆಕರ್ಷಣೆಗೆ ಒಳಗಾಗದೆ ಸಮಾಜಸೇವೆ ಮಾಡುತ್ತಿರುವವರು. ನಮ್ಮಂತಹ ರಾಜಕಾರಣಿಗಳಿಗೆ ಪ್ರೇರಣೆಯಾಗಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ "ಮನೆ ಮನೆ ಮಾದೇಗೌಡ" ಅಭಿನಂದನಾ ಗ್ರಂಥವನ್ನು ಬಿಡುಗಡೆಗೊಳಿಸಲಾಯಿತು. ಶ್ರೀ ಸೋಮನಾಥಾನಂದ ಸ್ವಾಮಿಗಳು, ಶ್ರೀ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಶ್ರೀ ಭಾಷ್ಯಂ ಸ್ವಾಮೀಜಿ, ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಜಿ.ಟಿ. ದೇವೇಗೌಡ , ಶಾಸಕರುಗಳಾದ ಶ್ರೀ ಕೆ. ಹರೀಶ್ ಗೌಡ, ಶ್ರೀ ಟಿ.ಎಸ್. ಶ್ರೀವತ್ಸ, ಮಾಜಿ ಸಂಸದರಾದ ಶ್ರೀ ಪ್ರತಾಪ್ ಸಿಂಹ, ಶ್ರೀ ಮರಿತಿಬ್ಬೇಗೌಡ, ಶ್ರೀ ಕೆ.ಟಿ. ಶ್ರೀಕಂಠೇಗೌಡ, ಶ್ರೀ ಸಣ್ಣಸ್ವಾಮಿಗೌಡ, ಶ್ರೀ ಜಯರಾಮ್ ರಾಯಪುರ್, ಪ್ರೊ. ಜಯಪ್ರಕಾಶಗೌಡ, ಲಯನ್ ಎಂ.ವಿ. ದೇವಿಪ್ರಸಾದ್ ಮೊದಲಾದವರು ಉಪಸ್ಥಿತರಿದ್ದರು.

**ಬುದ್ಧಿಶಕ್ತಿಯನ್ನು ಸತ್ಕಾರ್ಯಕ್ಕೆ ಬಳಸಿ**

ದೇವರು ಮನುಷ್ಯನಿಗೆ ಕರುಣಿಸಿರುವ ಬುದ್ಧಿಶಕ್ತಿಯನ್ನು ಸತ್ಕಾರ್ಯಗಳಿಗೆ ಸದ್ಬಳಕೆ ಮಾಡಿಕೊಂಡು ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 14ರಂದು ಅರಕಲಗೂಡು ಶ್ರೀ ದೊಡ್ಡಮಠದ ಶ್ರೀ ಚನ್ನಬಸವೇಶ್ವರರ ಕರ್ತೃಗದ್ದುಗೆಯ ನೂತನ ಕಟ್ಟಡ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಆಧ್ಯಾತ್ಮಿಕ ಪರಂಪರೆಯ ಇತಿಹಾಸದಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತುವ ಮೂಲಕ ಭಾರತ ವಿಶ್ವದಲ್ಲೇ ಅಗ್ರಪಂಕ್ತಿಯಲ್ಲಿದೆ. ಇನ್ನೊಬ್ಬರ ಸುಖ, ಏಳಿಗೆ ಬಯಸುವ ಮನಸ್ಸು ಭಾರತದ್ದಾಗಿದ್ದು ಇಲ್ಲಿ ಮನುಷ್ಯ ಜೀವಿಯಾಗಿ ಹುಟ್ಟುವುದೇ ಪುಣ್ಯ. ಇಂತಹ ಶ್ರೇಷ್ಠ ಮಣ್ಣಿನಲ್ಲಿ ವೀರಶೈವ ಲಿಂಗಾಯತ ಮಠಗಳು ಸಮಾಜದ ಉನ್ನತಿಗೆ, ಮನುಕುಲದ ಏಳಿಗೆಗೆ ಅನೇಕ ರೀತಿಯಲ್ಲಿ ಕೊಡುಗೆ ನೀಡುತ್ತಾ ಬಂದಿವೆ. ಇಂತಹ ಮಠಗಳ ಸಾಲಿನಲ್ಲಿ ದೊಡ್ಡಮಠದ ಸಾಧನೆಯೂ ದೊಡ್ಡದಾಗಿದೆ ಎಂದು ಹೇಳಿದರು.

ಶಿವಗಂಗೆಯ ಶ್ರೀ ಮೇಲಣಗವಿ ಮಠದ ಶ್ರೀ ಮಲಯಶಾಂತಮುನಿ ಶಿವಾಚಾರ್ಯ ಸ್ವಾಮಿಗಳು ದೇಶದ ಮೇಲೆ ಅನೇಕ ಸಲ ಆಕ್ರಮಣಗಳು ನಡೆದಿದೆ. ಆದರೂ ದೇಶ ಉಸಿರಾಡುತ್ತಿದೆ ಎಂದರೆ ಇಲ್ಲಿನ ಪೂರ್ವಜರ ತಪೋಶಕ್ತಿಯೇ ಕಾರಣ ಎಂದರು.

ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಎ. ಮಂಜು ಸರ್ಕಾರಿ ಶಾಲೆಗಳಂತೆ ಮಠಗಳೂ ಕೂಡ ಶಿಕ್ಷಣ ನೀಡಿ ಜ್ಞಾನಾರ್ಜನೆ ಬಿತ್ತುತ್ತಿವೆ. ದೊಡ್ಡಮಠದ ಶ್ರೀಗಳ ಶ್ರಮವು ಶ್ಲಾಘನೀಯ ಎಂದರು.

ಬೆಟ್ಟದಪುರ, ಕೆಸವತ್ತೂರು, ಕೊಡ್ಲಿಪೇಟೆ, ಮುದ್ದಿನಕಟ್ಟೆ, ಹಾಗೂ ದೊಡ್ಡಮಠಗಳ ಶ್ರೀಗಳು, ಶ್ರೀಮತಿ ಕೆ.ಸಿ. ಸೌಮ್ಯ, ಶ್ರೀ ಸಿದ್ದೇಶ್ ನಾಗೇಂದ್ರ, ಶ್ರೀ ಪರಮಶಿವಯ್ಯ, ಶ್ರೀ ಗುರುಮೂರ್ತಿ, ಶ್ರೀಮತಿ ಚಂದ್ರಕಲಾ, ಶ್ರೀ ರೋಹಿತ್, ಶ್ರೀ ಗಂಗೆಗೌಡ, ಶ್ರೀ ನಂದೀಶ್, ಶ್ರೀ ರವಿಕುಮಾರ್, ಶ್ರೀ ಯೋಗೇಶ್, ಡಾ. ಪುಷ್ಪಲತಾ ಮೊದಲಾದವರು ಉಪಸ್ಥಿತರಿದ್ದರು.

**ಭಕ್ತಿಯಿಂದ ಮುಕ್ತಿ ಸಾಧ್ಯ**

ಭಕ್ತಿಯಿಂದ ಮುಕ್ತಿ ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 15ರಂದು ನೆಲಮಂಗಲ ತಾಲ್ಲೂಕು ಶಿವಗಂಗೆಯ ಶ್ರೀ ಸದ್ಧರ್ಮ ಸಿಂಹಾಸನ ಸಂಸ್ಥಾನ ಹೊನ್ನಮ್ಮದೇವಿ ಗವಿಮಠದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಪ್ರಶಸ್ತಿ ಪ್ರದಾನ ಹಾಗೂ ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಭಕ್ತಿ ಮಾರ್ಗಕ್ಕೆ ಭಕ್ತನ ಅಂತರಂಗ ಶುದ್ಧಿ ಸಹ ಅತೀ ಮುಖ್ಯ. ಹೊನ್ನಮ್ಮಗವಿ ಮಠದಿಂದ 100 ಜನ ಸಾಧಕ ಮಹಿಳೆಯರಿಗೆ ಹೊನ್ನಕಿರಣ, ಸಾಹಿತ್ಯ ಸಿರಿ, ಆದರ್ಶ ಕೃಷಿಕ ಪುರಸ್ಕಾರ ಮುಂತಾದ ಪ್ರಶಸ್ತಿಗಳನ್ನು ನೀಡಿರುವುದು ಸಮಾಜದ ವಿವಿಧ ಆಯಾಮಗಳನ್ನು ಪ್ರೋತ್ಸಾಹಿಸಿ ಪರಿಚಯಿಸಿದಂತಿದೆ ಎಂದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಹೊನ್ನಮ್ಮಗವಿ ಮಠ 10ನೇ ಶತಮಾನದಲ್ಲೇ ಸ್ಥಾಪಿತವಾಗಿದೆ. ಶ್ರೀಮಠ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆಧ್ಯಾತ್ಮಿಕವಾಗಿ ತನ್ನದೇ ಆದ ಸಾಧನೆ ಮಾಡುತ್ತಿದೆ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳಿಂದ ತ್ರಿವಿಧ ದಾಸೋಹ ಪರಂಪರೆ ಪ್ರಾರಂಭವಾಗಿ ಈಗಿನ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಶ್ರೀಮಠವನ್ನು ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ ಎಂದರು.

ಸಿದ್ಧಗಂಗಾ ಮಠ, ಬೇಲಿಮಠ, ಮೇಲಣಗವಿ ಮಠ, ಬಸವಣ್ಣದೇವರ ಮಠ, ಕಂಬಾಳು, ಕಂಚುಗಲ್, ವನಕಲ್ಲು, ಹೊನ್ನಮ್ಮಗವಿ ಮಠಗಳ ಶ್ರೀಗಳು, ಶ್ರೀ ವೀರೇಶಾನಂದ ಸ್ವಾಮಿಗಳು, ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್, ಶ್ರೀ ಕೃಷ್ಣ ಬೈರೇಗೌಡ, ಸಂಸದರಾದ ಡಾ. ಕೆ. ಸುಧಾಕರ್, ಶಾಸಕರಾದ ಶ್ರೀ ಎನ್. ಶ್ರೀನಿವಾಸ್‌ರವರುಗಳು ಉಪಸ್ಥಿತರಿದ್ದರು. ಶ್ರೀ ರವಿಕುಮಾರ್ ಡಾಬಸ್‌ಪೇಟೆ ಪ್ರಾರ್ಥಿಸಿದರು. ಶ್ರೀ ಹೆಚ್.ಸಿ. ಸುರೇಶ್ ಸ್ವಾಗತಿಸಿದರು.

**ಶ್ರೀ ಸುತ್ತೂರು ಮಠದಲ್ಲಿ ಬಸವ ಜಯಂತಿ**

ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಏಪ್ರಿಲ್ 30, ಅಕ್ಷಯ ತೃತೀಯೆಯಂದು ಜಗಜ್ಯೋತಿ ವಿಶ್ವವಿಭೂತಿ ಬಸವೇಶ್ವರರ ಜಯಂತಿಯನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಚರಿಸಲಾಯಿತು.

ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ವಿಶೇಷ ಪೂಜೆ ನೆರವೇರಿಸಿ, ಪುಷ್ಪಾಂಜಲಿ ಸಲ್ಲಿಸಲಾಯಿತು. ಜೆಎಸ್‌ಎಸ್ ಲಲಿತಕಲಾ ತಂಡದವರು ವಚನಗಾಯನ ನಡೆಸಿಕೊಟ್ಟರು.

ಶ್ರೀಮಠದ ಗುರುಕುಲದ ಸಾಧಕರು, ಸೇವಾ ಸಿಬ್ಬಂದಿವರ್ಗದವರು, ಭಕ್ತಾದಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

**ಜಗತ್ತಿನ ಅಸ್ತಿತ್ವಕ್ಕೆ ಭಗವಂತ ಕಾರಣ**

ಜಗತ್ತಿನ ಅಸ್ತಿತ್ವಕ್ಕೆ ಭಗವಂತನೆ ಕಾರಣ ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 20ರಂದು ಟಿ. ನರಸೀಪುರ ತಾಲ್ಲೂಕು ಶಂಭುದೇವನಪುರದ ಶ್ರೀ ಶಂಭುಲಿಂಗೇಶ್ವರ ಸ್ವಾಮಿಯ ದೇವಸ್ಥಾನದ ನೂತನ ಗೋಪುರ ಮತ್ತು ಕಳಸಾರೋಹಣ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಭಗವಂತನ ಕಾರಣದಿಂದಲೇ ಜಗತ್ತು ಸೃಷ್ಟಿಯಾಗಿದೆ. ದೇವರು ಒಬ್ಬನೇ. ಆದರೆ ಆತನನ್ನು ನೋಡುವ ರೂಪ, ನಾಮಗಳು ಬೇರೆಬೇರೆಯಾಗಿವೆ. ದೇವಾಲಯಗಳು ಬರೀ ಧಾರ್ಮಿಕ ಕೇಂದ್ರಗಳಾಗಿರದೆ ಸಾಂಸ್ಕೃತಿಕ ಕೇಂದ್ರಗಳೂ ಆಗಿವೆ. ಶಂಭುದೇವನಪುರ ಮತ್ತು ಶ್ರೀ ಶಂಭುಲಿಂಗೇಶ್ವರ ಸ್ವಾಮಿ ಎಂಬುದು ಊರಿನ ಹೆಸರು ಮತ್ತು ಗ್ರಾಮದ ಹೆಸರು ಎರಡೂ ಒಂದೇ ರೀತಿಯಿರುವುದು ವಿಶೇಷವಾಗಿದೆ. ಪ್ರತಿಯೊಂದು ದೇವಸ್ಥಾನಕ್ಕು ಅದರದೇ ಆದ ವಿಶೇಷತೆ ಇರುತ್ತದೆ ಎಂದು ತಿಳಿಸಿದರು.

ಕನಕಪುರ ಶ್ರೀ ದೇಗುಲಮಠದ ಡಾ. ಶ್ರೀ ಚನ್ನಬಸವ ಸ್ವಾಮಿಗಳು ಮನುಷ್ಯನ ಆಲೋಚನೆಗಳು ಒಳ್ಳೆಯವುಗಳಾಗಿರಬೇಕು. ಆಗ ಮಾತ್ರ ಉತ್ತಮವಾದ ಬದುಕನ್ನು ಸಾಗಿಸಲು ಸಾಧ್ಯವಾಗುತ್ತದೆ. ಕಷ್ಟಗಳು ಎದುರಾದಾಗ ಭಗವಂತನನ್ನು ನೆನೆಯುತ್ತೇವೆ. ಸುಖದಿಂದಿದ್ದಾಗಲೂ ಭಗವಂತನ ಸ್ಮರಣೆಯನ್ನು ಬಿಡಬಾರದು ಎಂದು ಹೇಳಿದರು.

ಶ್ರೀ ಸಾಲೂರು ಬೃಹನ್ಮಠದ ಡಾ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಜಗತ್ತಿನ ಅನೇಕ ದೇಶಗಳು ತಂತ್ರಜ್ಞಾನ, ವ್ಯಾಪಾರ, ವಾಣಿಜ್ಯ ವಿಷಯಗಳಲ್ಲಿ ಮುಂದುವರೆದಿವೆ. ಆದರೆ ಭಾರತ ಅದರ ಜೊತೆಗೆ ಆಧ್ಯಾತ್ಮಿಕವಾಗಿಯೂ ಸಾಕಷ್ಟು ಮುಂದುವರೆದ ದೇಶವಾಗಿದೆ. ಸಮಾಜದ ಏಳ್ಗೆಗೆ ಗುರು ಮತ್ತು ಮಠಗಳ ಕೊಡುಗೆ ಅಪಾರವಾದುದು. ಗುರುವಿನ ಮಾರ್ಗದರ್ಶನವಿಲ್ಲದಿದ್ದರೆ ಮನುಷ್ಯ ಅನಾಗರಿಕನಾಗಿ ಬದುಕಬೇಕಾಗುತ್ತದೆ ಎಂದು ತಿಳಿಸಿದರು.

ವಾಟಾಳು ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಪ್ರತಿಯೊಬ್ಬರು ದಾನ-ಧರ್ಮ ಮಾಡುವ ಗುಣಗಳನ್ನು ಬೆಳೆಸಿಕೊಳ್ಳಬೇಕು. ದಾನವೆಂಬುದು ಶ್ರೇಷ್ಠವಾದುದು. ಅದನ್ನು ಮಾಡುವುದರಿಂದ ಮನಸ್ಸು ಪರಿಶುದ್ಧವಾಗುತ್ತದೆ. ಪ್ರತಿಯೊಬ್ಬರನ್ನೂ ಪ್ರೀತಿ-ವಿಶ್ವಾಸಗಳಿಂದ ಕಾಣಬೇಕು ಎಂದು ಹೇಳಿದರು.

ಮರಿಯಾಲದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮಿಗಳು ಮಾನವರಾದವರಿಗೆ ದೈವಿಕ ಪ್ರಜ್ಞೆಯ ಜೊತೆಗೆ ಗುರುವಿನ ಆಶೀರ್ವಾದವೂ ಇರಬೇಕು. ಭಕ್ತಿ ಅಂತರಂಗದಲ್ಲಿರಬೇಕೆ ಹೊರತು ಆಡಂಬರವಾಗಬಾರದು ಎಂದರು.

ಎಂ.ಎಲ್. ಹುಂಡಿ, ಮುಡುಕನಪುರ, ಮಾಡ್ರಹಳ್ಳಿ ಮತ್ತು ಚಿದರವಳ್ಳಿ ಮಠಗಳ ಶ್ರೀಗಳು ಮಾತನಾಡಿದರು. ಗ್ರಾಮದ ಮಕ್ಕಳು ಪ್ರಾರ್ಥಿಸಿದರು. ಶ್ರೀ ಕುಮಾರಸ್ವಾಮಿ ಸ್ವಾಗತಿಸಿದರು. ಶ್ರೀಮತಿ ಜ್ಯೋತಿ ಕಾರ್ಯಕ್ರಮ ನಿರೂಪಿಸಿದರು.

**ದೃಢ ಸಂಕಲ್ಪದಿಂದ ಕುಡಿತ ಬಿಡಬಹುದು**

ಆತ್ಮವಿಶ್ವಾಸವಿಟ್ಟು ಒಂದೇ ಮನಸ್ಸಿನಿಂದ ಸಂಕಲ್ಪ ಮಾಡಿದರೆ ಕುಡಿತ ಬಿಡುವುದು ಕಷ್ಟವಲ್ಲ. ಎಲ್ಲಾ ಸಮಸ್ಯೆಗಳಿಗೆ ಮನುಷ್ಯನಲ್ಲಿ ಪರಿಹಾರವಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 23ರಂದು ಮಲೆ ಮಹದೇಶ್ವರಬೆಟ್ಟದಲ್ಲಿ ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ, ಶ್ರೀ ಸಾಲೂರು ಬೃಹನ್ಮಠ, ಶ್ರೀ ಮಲೆಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಹಾಗೂ ಸಂಘಸಂಸ್ಥೆಗಳ ಸಹಯೋಗದಲ್ಲಿ 9 ದಿನಗಳ ಕಾಲ ನಡೆದ ಮದ್ಯವರ್ಜನ ಶಿಬಿರದ ಸಮಾರೋಪದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಕುಡಿತ ಒಂದು ಸಾಮಾಜಿಕ ಪಿಡುಗಾಗಿದೆ. ಇದನ್ನು ಬಿಡಿಸಲು ಯಾವುದೇ ಔಷಧಿ ಇಲ್ಲ. ಕುಡಿತ ಸೇರಿದಂತೆ ಅನೇಕ ಕೆಟ್ಟ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು ಬಹಳ ಸುಲಭ. ನಂತರದ ದಿನಗಳಲ್ಲಿ ಅದನ್ನು ತ್ಯಜಿಸುವುದು ಬಹಳ ಕಷ್ಟವಾಗುತ್ತದೆ. ಕುಡತದ ಚಟಕ್ಕೆ ಬಲಿಯಾದವರ ಮನೆಗಳಲ್ಲಿ ಪ್ರತಿನಿತ್ಯ ನಡೆಯುವ ಗಲಾಟೆಗಳು ಆ ಕುಟುಂಬದ ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತವೆ. ಈ ಚಟಕ್ಕೆ ಒಳಗಾದವರು ಮನಸ್ಸಿನ ದೃಢವಾದ ಸಂಕಲ್ಪ ಮಾಡಿ ಮದ್ಯಪಾನ ಮಾಡುವುದನ್ನು ಬಿಡಬೇಕು ಎಂದು ಹೇಳಿದರು.

ಸಾಲೂರು ಮಠದ ಡಾ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು 9 ದಿನಗಳ ಕಾಲ ನಡೆದ ಶಿಬಿರದಲ್ಲಿ 38 ಶಿಬಿರಾರ್ಥಿಗಳು ಪಾಲ್ಗೊಂಡು ಇನ್ನು ಮುಂದೆ ಜೀವನದಲ್ಲಿ ಯಾವುದೇ ಸಂದರ್ಭದಲ್ಲಿ ಮದ್ಯಪಾನ ಮಾಡುವುದಿಲ್ಲ ಎಂದು ಪರಿವರ್ತನೆಯಾಗಿದ್ದಾರೆ. ಇದು ಸಂತೋಷದ ಸಂಗತಿ ಎಂದು ತಿಳಿಸಿದರು.

ಡಾ. ಪ್ರೀತಂ ನಾಗಪ್ಪ, ಶ್ರೀ ಎಸ್. ನಿಶಾಂತ್, ಪ್ರಾಧಿಕಾರದ ಕಾರ್ಯದರ್ಶಿಗಳಾದ ಶ್ರೀ ಎ.ಇ. ರಘು, ಮಾನಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ. ಎಸ್. ದತ್ತೇಶ್‌ಕುಮಾರ್, ಹನೂರು ಪಟ್ಟಣ ಪಂಚಾಯಿತಿ ಸದಸ್ಯರಾದ ಶ್ರೀ ಸೋಮಶೇಖರ್, ಬೇಡಗಂಪಣ ಸಮುದಾಯದ ಹಿರಿಯ ಮುಖಂಡರಾದ ಶ್ರೀ ಪುಟ್ಟಣ್ಣ ಉಪಸ್ಥಿತರಿದ್ದರು. ಶ್ರೀ ಮಲ್ಲಪ್ಪ ಪ್ರಾರ್ಥಿಸಿದರು. ಡಾ. ಎಂ.ಪಿ. ಸೋಮಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಎಂ. ಮಂಜುನಾಥ್ ಸ್ವಾಗತಿಸಿದರು. ಶ್ರೀ ಟಿ. ಸೋಮಶೇಖರ್ ವರದಿ ಮಂಡಿಸಿದರು. ಶಿಬಿರಾರ್ಥಿಗಳಾದ ಶ್ರೀ ಶರವಣನ್, ಶ್ರೀ ರಾಜೇಶ್, ಶ್ರೀ ರಜನಿ, ಶ್ರೀ ಅರುಣ್, ಶ್ರೀ ಶೇಖರ್‌ರವರುಗಳು ಅನಿಸಿಕೆ ಹಂಚಿಕೊಂಡರು. ಶ್ರೀ ಶಿವಕುಮಾರ್ ವಂದಿಸಿದರು. ಶ್ರೀಮತಿ ಎಂ. ಮಾಲಾಮಣಿ ಕಾರ್ಯಕ್ರಮ ನಿರೂಪಿಸಿದರು.

**ಸ್ವಾವಲಂಬಿ ಬದುಕಿಗೆ ದಾರಿ ತೋರಿದ ಬಸವಣ್ಣ**

ಬಸವಣ್ಣನವರು 12ನೇ ಶತಮಾನದಲ್ಲಿ ಸಮಾಜ ಸುಧಾರಣೆಗೆ ಪಣತೊಟ್ಟು ಕಾಯಕದ ಮಹತ್ವ ಸಾರಿದರು. ದುಡಿಮೆಯ ಮೂಲಕ ಸ್ವಾವಲಂಬಿ ಜೀವನ ನಡೆಸಲು ಮಾರ್ಗ ತೋರಿದರು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 25ರಂದು ನಂಜನಗೂಡು ತಾಲ್ಲೂಕು ಚುಂಚನಹಳ್ಳಿಯಲ್ಲಿ ಶ್ರೀ ಬಸವೇಶ್ವರರ ಪ್ರತಿಮೆಯನ್ನು ಅನಾವರಣಗೊಳಿಸಿ ಆಶೀರ್ವಚನ ನೀಡುತ್ತಾ ತಿಳಿಸಿದರು. ಜನರಾಡುವ ಭಾಷೆಯಲ್ಲಿ ವಚನಗಳನ್ನು ಜನಸಾಮಾನ್ಯರಿಗೆ ತಿಳಿಸಿಕೊಟ್ಟರು. ವಚನಗಳ ಮೂಲಕ ಕ್ರಾಂತಿ ನಡೆಸಿ, ಜನ ಭಾಷೆಯನ್ನೇ ದೇವಭಾಷೆಯನ್ನಾಗಿ ಮಾಡಿದ ಬಸವಣ್ಣನವರು ಎಲ್ಲ ಕಾಲಕ್ಕೂ ಪ್ರಸ್ತುತ. ವಚನಗಳನ್ನು ಓದುವುದು ಸುಲಭ, ಆದರೆ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ತುಂಬಾ ಕಷ್ಟ. ಕಾಯಕ ಮಾಡಿ ಬದುಕಬೇಕು ಎಂದು ಆ ದಿನಮಾನದಲ್ಲೇ ಬಸವಣ್ಣನವರು ಹೇಳಿದ್ದಾರೆ. ಇಷ್ಟಲಿಂಗ ಪೂಜೆ ಮಾಡುವ ಮನೋಸ್ಥಿತಿ ಬೆಳೆಸಿಕೊಳ್ಳಬೇಕು. ಇಷ್ಟಲಿಂಗವನ್ನು ಕೈಯಲ್ಲಿ ಇಟ್ಟುಕೊಂಡು ಪೂಜಿಸಿದರೆ ಮನಸ್ಸನ್ನು ಏಕಾಗ್ರತೆಯಲ್ಲಿ ತೊಡಗಿಸಲು ಸಹಕಾರಿಯಾಗುತ್ತದೆ. ಇದೇ ಸಂದರ್ಭದಲ್ಲಿ ಜಮ್ಮು ಕಾಶ್ಮೀರದಲ್ಲಿ ನಡೆದ ಉಗ್ರರ ದಾಳಿಯಿಂದ ಸಾವು ನೋವುಗಳಾಗಿವೆ. ಇದನ್ನು ಎಲ್ಲರೂ ಖಂಡಿಸಬೇಕು. ಈ ಘಟನೆ ಬಹಳ ಕಠೋರವಾದುದು. ಇಂತಹ ಘಟನೆಗಳು ಸಮಾಜದಲ್ಲಿ ನಡೆಯಬಾರದು ಎಂದರು.

ಚುಂಚನಹಳ್ಳಿ ಮಠದ ಶ್ರೀ ಚನ್ನಬಸವ ಸ್ವಾಮಿಗಳು ಇಷ್ಟಲಿಂಗವನ್ನು ಕೈಯಲ್ಲಿ ಹಿಡಿದಿರುವ ಬಸವಣ್ಣನವರ ಪ್ರತಿಮೆಯನ್ನು ಗ್ರಾಮದಲ್ಲಿ ಅನಾವರಣ ಮಾಡಲಾಗಿದೆ. ಪ್ರತಿಮೆ ಕೆಳಗೆ ಬಸವಣ್ಣನವರ ವಚನಗಳನ್ನು ಬರೆಸಲಾಗಿದೆ. ಮೂರ್ತಿ ಪ್ರತಿಷ್ಠಾಪನೆ ಮಾಡುವುದೊಂದೇ ಅಲ್ಲ ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು. ಬಸವಣ್ಣನವರು ದುಡಿಮೆಯ ಮಹತ್ವ ತಿಳಿಸುವ ಕಾಯಕ, ದಾಸೋಹ, ಸಾಮಾಜಿಕ ಸಮಾನತೆ ಹಾಗೂ ಮಹಿಳಾ ಸಬಲೀಕರಣ ಹೀಗೆ ಮಹತ್ವಪೂರ್ಣ ಕೊಡುಗೆಗಳನ್ನು ವಿಶ್ವಕ್ಕೆ ನೀಡಿದ ಮಹಾನ್ ದಾರ್ಶನಿಕರು ಎಂದರು.

ಕಾರ್ಯಕ್ರಮದಲ್ಲಿ ವಾಟಾಳು, ಹರವೆ, ಚಾಮರಾಜನಗರ, ಮರಿಯಾಲ ಮಠಗಳ ಶ್ರೀಗಳು, ಉಪಸ್ಥಿತರಿದ್ದರು. ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಡಿ.ಎಸ್. ಸದಾಶಿವಮೂರ್ತಿ ಉಪನ್ಯಾಸ ನೀಡಿದರು. ಶ್ರೀ ಮಹೇಶ್ ಬಾಗಳಿ ಪ್ರಾರ್ಥಿಸಿದರು. ಶ್ರೀ ಸಿವಿ. ಬಸವರಾಜು ಸ್ವಾಗತಿಸಿದರು. ಶ್ರೀ ಎಂ. ಮಹೇಶ್ಚಂದ್ರಸ್ವಾಮಿ ವಂದಿಸಿದರು. ಶ್ರೀ ಯೋಗೀಶ್ ಚುಂಚನಹಳ್ಳಿ ಕಾರ್ಯಕ್ರಮ ನಿರೂಪಿಸಿದರು.

❑

# ಪ್ರಸಾದ



## ಕೃತಿ–ಸ್ವೀಕೃತಿ

**ಉಳಿದಾವ ನೆನಪು**
**ಪತ್ರಕರ್ತನ ವೃತ್ತಿಜೀವನದ ನೆನಪುಗಳು**
ಡಾ. ಪದ್ಮರಾಜ ದಂಡಾವತಿ
ಪ್ರ: ಅಂಕಿತ ಪ್ರಕಾಶನ
ಬಸವನಗುಡಿ, ಬೆಂಗಳೂರು
ಪು : 224, ಬೆಲೆ : 250/–

**ಮಕ್ಕಳ ಪದ್ಯಗಳು – ಭಾಗ–2**
**(76ನೇ ಸ್ವಾತಂತ್ರ್ಯ ವರ್ಷದ ಸುವರ್ಣ ಮಹೋತ್ಸವ ಕಾಣಿಕೆ)**
ಶ್ರೀ ಎಸ್.ಎನ್. ಸಿಂಪಿಗೇರ
ಪ್ರ: ಶ್ರೀರಾಮ ಪ್ರಕಾಶನ
ಸದಾಶಿವನಗರ, ವಿಜಯಪುರ
ಪು : 76, ಬೆಲೆ : 120/–

**The Path Through the Foot Hills**
Sri Siddagangaiah Holathalu
Shimsha Literary Academy
Sapthagiri Extn. Thumakuru
ಪು : 112, ಬೆಲೆ : 150/–

**ಚಿಕ್ಕಮಗಳೂರು ಟು ಚಿಕಾಗೊ**
ಶ್ರೀಮತಿ ನಾಗಶ್ರೀ ತ್ಯಾಗರಾಜನ್ ಎನ್.
ಪ್ರ: ಅಳಸಿಂಗ ಪೆರುಮಾಳ್ ವೇದಿಕೆ
ಹಿರೇಮಗಳೂರು
ಪು : 96

**ಭಾವ ಗೋಚರಿ (ಕವನ ಸಂಕಲನ)**
ಶ್ರೀ ಮ. ಸುರೇಶ್ ಬಾಬು
ಪ್ರ: ಶ್ರೀ ಶಿವಶಕ್ತಿ ಪ್ರಕಾಶನ
ಚಿಕ್ಕಬಳ್ಳಾಪುರ ರಸ್ತೆ, ವಿಜಯಪುರ
ಬೆಂಗಳೂರು ಜಿಲ್ಲೆ
ಪು : 144, ಬೆಲೆ : 100/–

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ ಅಜ್ಜಂಪುರ**
ಶ್ರೀ ಚಿ.ಸ. ಪ್ರಭುಲಿಂಗಶಾಸ್ತ್ರಿ
ಪ್ರ: ಕರಿಯಪ್ಪ ಎನ್. ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು
ಪು : 56, ಬೆಲೆ : 30/–

**ನಿನಗೆ ನೀನೇ ಗುರು**
ಡಾ. ಸುಕನ್ಯಾ ಸೂನಗಹಳ್ಳಿ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್
ರಾಜರಾಜೇಶ್ವರಿ ನಗರ, ಬೆಂಗಳೂರು
ಪು : 316, ಬೆಲೆ : 360/–

**ಸಾವಿರಾರು ಶುಭಾಷಿತಗಳು**
**(ಸಂಸ್ಕೃತದಿಂತ ಕನ್ನಡಕ್ಕೆ ಸಾರಾಂಶ ಸಹಿತ)**
ಡಾ. ಎಸ್. ಶಿವರಾಜಪ್ಪ
ಪ್ರ: ಸಪ್ನ ಬುಕ್ ಹೌಸ್ ಪ್ರೈ.ಲಿ.
ಗಾಂಧಿನಗರ
ಬೆಂಗಳೂರು
ಪು : 368, ಬೆಲೆ : 325/–

**ವೀರಶೈವ ಜಂಗಮರು**
**(ಪರಿಶಿಷ್ಟ ಜಾತಿ ಮೀಸಲಾತಿಗಾಗಿ ಸಾಮಾಜಿಕ ಭ್ರಷ್ಟರಾಗಬೇಕೆ?)**
ಶ್ರೀ ದಾಸನೂರು ಕೂಸಣ್ಣ
ಪ್ರ: ಮಾತಂಗ ಪ್ರಕಾಶನ
ಉದಯಗಿರಿ ಬಡಾವಣೆ, ಮೈಸೂರು
ಪು : 292, ಬೆಲೆ : 220/–

**ಗೋಕಾಕ ಚಳುವಳಿ ಮತ್ತು ಕನ್ನಡ ಅಭಿವೃದ್ಧಿ**
ಡಾ. ಮಂಜುನಾಥ ಎಂ. ಬಮ್ಮನಕಟ್ಟಿ
ಪ್ರ: ಧನ್ಯ ಪಬ್ಲಿಕೇಷನ್
ಕೆ.ಸಿ. ರಾಣಿ ರಸ್ತೆ, ಗದಗ
ಪು : 336, ಬೆಲೆ : 450/–

**ಮಿರ್ಚಿ ಮಂಡಕ್ಕಿ (ಭಾಗ–2)**
ಡಾ. ಮಂಜುನಾಥ ಎಂ. ಬಮ್ಮನಕಟ್ಟಿ
ಪ್ರ: ಧನ್ಯ ಪಬ್ಲಿಕೇಷನ್
ಕೆ.ಸಿ. ರಾಣಿ ರಸ್ತೆ, ಗದಗ
ಪು : 138, ಬೆಲೆ : 150/–

# ಲೇಖಕರ ವಿಳಾಸ

**ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ**
ನಂ.909, ಹಿಮಾಲಯ
5ನೇ ಮುಖ್ಯರಸ್ತೆ
ಅರವಿಂದನಗರ
ಮೈಸೂರು 570 021
ಮೊ: 8951146219

**ಡಾ. ರಮಾ ವಿ. ಬೆಣ್ಣೂರ್‌ರವರು**
ನಂ.40, 8ನೇ ಮೇನ್
ಸರಸ್ವತಿಪುರಂ
ಮೈಸೂರು 570009
ಮೊ: 9945282346

**ಶ್ರೀ ರಂಗನಾಥ್ ಮೈಸೂರು**
ನಂ.75,ಇ ಬ್ಲಾಕ್, 15ನೇ ಕ್ರಾಸ್
11ನೇ ಮುಖ್ಯರಸ್ತೆ, ಜೆ.ಪಿ.ನಗರ
ಮೈಸೂರು 570 008
ಮೊಬೈಲ್: 9845791252

**ಹಿಂಬದಿ ಪುಟದ ಚಿತ್ರ**

ಮೈಸೂರು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದಲ್ಲಿ ಇಂಡಿಯನ್ ರಬ್ಬರ್ ಇನ್ಸ್ಟಿಟ್ಯೂಟ್ ವತಿಯಿಂದ ನಿರ್ಮಿಸಿರುವ ಡಾ. ಡಿ. ಬ್ಯಾನರ್ಜಿ ಸೆಂಟರ್ ಆಫ್ ಎಕ್ಸ್‌ಲೆನ್ಸ್‌ನ ನೂತನ ಕಟ್ಟಡವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜೆಕೆ ಟೈರ್ಸ್ ಮತ್ತು ಇಂಡಸ್ಟ್ರೀಸ್ ಲಿಮಿಟೆಡ್‌ನ ಮುಖ್ಯ ವ್ಯವಸ್ಥಾಪಕ ನಿರ್ದೇಶಕರಾದ ಡಾ. ರಘುಪತಿ ಸಿಂಘಾನಿಯಾರವರು ಉದ್ಘಾಟಿಸಿದರು. ಶ್ರೀ ಪಿ.ಕೆ. ಮೊಹಮದ್, ಶ್ರೀ ವಿ.ಕೆ. ಮಿಶ್ರಾ, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಜಿ. ಲಕ್ಷ್ಮೀಕಾಂತರೆಡ್ಡಿ, ಶ್ರೀ ಆರ್. ಮುಖ್ಯೋಪಾಧ್ಯಾ ಮತ್ತು ಶ್ರೀ ಎಸ್. ವಾಸುದೇವ ರಾವ್‌ರವರುಗಳಿದ್ದಾರೆ (30 ಏಪ್ರಿಲ್ 2025)



ಬೆಂಗಳೂರಿನಲ್ಲಿ ಆಯುಷ್ ಟಿವಿಯವರು ಆಯೋಜಿಸಿದ್ದ ಗ್ಲೋಬಲ್ ವೆಲ್ ಬಿಯಿಂಗ್ ಕಾನ್‌ಫ್ಲುಎನ್ಸ್ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಬ್ರಹ್ಮಕುಮಾರಿ ಲೀಲಾ, ಶ್ರೀ ದೀಪಕ್ ಸಲುಜಾ, ಸಚಿವರಾದ ಶ್ರೀ ದಿನೇಶ್ ಗುಂಡೂರಾವ್, ಡಾ. ಹೆಚ್.ಆರ್. ನಾಗೇಂದ್ರ, ಡಾ. ವಿ.ಆರ್. ಗೌರಿಶಂಕರ್‌ರವರುಗಳಿದ್ದಾರೆ (11 ಏಪ್ರಿಲ್ 2025)



ಟಿ. ನರಸೀಪುರ ತಾಲ್ಲೂಕು ಶಂಭುದೇವನಪುರದ ಶ್ರೀ ಶಂಭುಲಿಂಗೇಶ್ವರ ಸ್ವಾಮಿಯ ದೇವಸ್ಥಾನದ ನೂತನ ಗೋಪುರ ಮತ್ತು ಕಳಸಾರೋಹಣ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಎಸ್.ಎಂ. ಮಹೇಶ್, ಶ್ರೀ ಎಸ್.ಬಿ. ಸುಗಂಧರಾಜು, ಶ್ರೀ ಪುಟ್ಟಬುದ್ಧಿ ಮಾಸ್ಟರ್, ಎಂ.ಎಲ್. ಹುಂಡಿ, ವಾಟಾಳು, ಕನಕಪುರ, ಮರಿಯಾಲ, ಮುಡುಕನಪುರ ಮಠಗಳ ಶ್ರೀಗಳು, ಶ್ರೀ ಸಿ.ಎಂ. ಪ್ರಕಾಶ್ ಹಾಗೂ ಗ್ರಾಮಸ್ಥರುಗಳಿದ್ದಾರೆ (20 ಏಪ್ರಿಲ್ 2025)




ನೆಲಮಂಗಲ ತಾಲ್ಲೂಕು ಶಿವಗಂಗೆಯ ಶ್ರೀ ಸದ್ಧರ್ಮ ಸಿಂಹಾಸನ ಸಂಸ್ಥಾನ ಹೊನ್ನಮ್ಮದೇವಿ ಗವಿಮಠದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಕ್ಷೇತ್ರಗಳ ಮಹಿಳೆಯರಿಗೆ ಪರಮಪೂಜ್ಯ ಜಗದ್ಗುರುಗಳು ಹಾಗೂ ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮೇಲಣಗವಿ ಮಠ, ಪಾಲನಹಳ್ಳಿ ಮಠದ ಶ್ರೀಗಳು , ಶ್ರೀ ಎಂ. ರುದ್ರೇಶ್, ಹೊನ್ನಮ್ಮಗವಿ ಮಠದ ಶ್ರೀಗಳು, ಶ್ರೀ ಜಿ. ಮರಿಸ್ವಾಮಿ, ಶ್ರೀ ಬಿ.ಎಸ್. ಯಡಿಯೂರಪ್ಪ, ಬೇಲಿಮಠ ಮತ್ತು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ನಿಶ್ಚಲಾನಂದನಾಥ ಶ್ರೀಗಳಿದ್ದಾರೆ (15 ಏಪ್ರಿಲ್ 2025)



ಮೈಸೂರು ಕಲಾಮಂದಿರದಲ್ಲಿ ಸಿಐಟಿಬಿ ಮಾಜಿ ಅಧ್ಯಕ್ಷರಾದ ಶ್ರೀ ಡಿ. ಮಾದೇಗೌಡ ದಂಪತಿಗಳನ್ನು ಪರಮಪೂಜ್ಯ ಜಗದ್ಗುರುಗಳವರು ಹಾಗೂ ಆದಿಚುಂಚನಗಿರಿ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸನ್ಮಾನಿಸಲಾಯಿತು. ಶ್ರೀ ಸಣ್ಣಸ್ವಾಮಿಗೌಡ, ಡಾ. ಸಿ.ಎನ್. ಅಶ್ವಥ್ ನಾರಾಯಣ್, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಭಾಷ್ಯಂ ಸ್ವಾಮಿಜಿ, ಶ್ರೀ ಸ್ವಾಮಿ ಮುಕ್ತಿದಾನಂದಜೀ, ಶ್ರೀ ಸೋಮನಾಥಾನಂದ ಸ್ವಾಮಿಗಳು, ಶ್ರೀ ಮರಿತಿಬ್ಬೇಗೌಡ, ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಪ್ರತಾಪ ಸಿಂಹ, ಶ್ರೀ ಕೆ.ಟಿ. ಶ್ರೀಕಂಠೇಗೌಡ ಮೊದಲಾದವರುಗಳಿದ್ದಾರೆ (13 ಏಪ್ರಿಲ್)




ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಪ್ರೊ. ಚನ್ನಬಸಪ್ಪ ಮ. ಕೊಟ್ಟುರಶೆಟ್ಟರ ಮತ್ತು ಶ್ರೀ ಮಹಾಂತೇಶ ಚ. ಕೊಟ್ಟುರಶೆಟ್ಟರ ಸಂಸ್ಮರಣಾ ದತ್ತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಶಂಕರ ಕುಂಬಿ, ಶ್ರೀ ಶಂಕರ ಹಲಗತ್ತಿ, ಗೌ.ನ್ಯಾ. ಶ್ರೀ ಜಿ. ಬಸವರಾಜು, ಡಾ. ಡಿ.ಬಿ. ಕುಂಬಾರ, ಗೌ.ನ್ಯಾ. ಶ್ರೀ ಎಸ್.ಜಿ. ಪಂಡಿತ್, ಡಾ. ಡಿ.ಎಂ. ಕೊಟ್ಟುರಶೆಟ್ಟರ ಮತ್ತು ಶ್ರೀ ಚಂದ್ರಕಾಂತ ಬೆಲ್ಲದ, ಶ್ರೀಮತಿ ವಿದ್ಯಾವತಿ ಎಂ. ಕೊಟ್ಟುರಶೆಟ್ಟರರವರುಗಳಿದ್ದಾರೆ (16 ಏಪ್ರಿಲ್ 2025)



ಮೈಸೂರು ತಾಲ್ಲೂಕು ಮಾದಹಳ್ಳಿ ಶ್ರೀ ವೀರಭದ್ರೇಶ್ವರ, ಶ್ರೀ ಮಹದೇಶ್ವರ, ಶ್ರೀ ಬಸವೇಶ್ವರ ಹಾಗೂ ಶ್ರೀ ಸಿದ್ಧಪ್ಪಾಜಿ ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಬಿ.ವೈ. ವಿಜಯೇಂದ್ರರವರು ಉದ್ಘಾಟಿಸಿದರು. ಕನಕಪುರ, ಕುಂದೂರು ಮಠಗಳ ಶ್ರೀಗಳು, ಶ್ರೀ ಕವೀಶ್‌ಗೌಡ, ಸಿದ್ಧಗಂಗಾ ಶ್ರೀಗಳು, ಶ್ರೀ ಬಸವಣ್ಣ ಬೀರಿಹುಂಡಿ, ಶ್ರೀ ಎಂ.ಪಿ. ವೀರಭದ್ರಪ್ರಸಾದ್ ಮೊದಲಾದವರುಗಳಿದ್ದಾರೆ (7 ಏಪ್ರಿಲ್ 2025)



ಮಲೆ ಮಹದೇಶ್ವರ ಬೆಟ್ಟದಲ್ಲಿ ಶ್ರೀ ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಚಾಲನೆ ನೀಡಿದರು. ಶ್ರೀ ಎಂ.ಆರ್. ಮಂಜುನಾಥ್, ಶ್ರೀ ಸಿ. ಪುಟ್ಟರಂಗಶೆಟ್ಟಿ, ಸಾಲೂರು ಮಠದ ಶ್ರೀಗಳು, ಡಾ. ಹೆಚ್.ಸಿ. ಮಹದೇವಪ್ಪ, ಶ್ರೀ ಕೆ. ವೆಂಕಟೇಶ್ ಹಾಗೂ ಶ್ರೀ ಪಿ. ಮರಿಸ್ವಾಮಿಯವರುಗಳಿದ್ದಾರೆ (24 ಏಪ್ರಿಲ್ 2025)



ಮಲೆ ಮಹದೇಶ್ವರ ಬೆಟ್ಟದಲ್ಲಿ ಆಯೋಜಿಸಿದ್ದ 20ನೇ ಮದ್ಯವರ್ಜನ ಶಿಬಿರದ ಸಮಾರೋಪವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಶ್ರೀ ಎಸ್. ನಿಶಾಂತ್ ಶಿವಮೂರ್ತಿ, ಡಾ. ಪ್ರೀತಂ ನಾಗಪ್ಪ, ಸಾಲೂರು ಮಠದ ಶ್ರೀಗಳು, ಡಾ. ಎಸ್. ದತ್ತೇಶ್ ಕುಮಾರ್, ಶ್ರೀ ಪುಟ್ಟಣ್ಣ ಹಾಗೂ ಸ್ವಯಂಸೇವಕರುಗಳೊಂದಿಗೆ ಶಿಬಿರಾರ್ಥಿಗಳಿದ್ದಾರೆ (23 ಏಪ್ರಿಲ್ 2025)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಬುಧವಾರ ಅಕ್ಷಯ ತೃತೀಯ ದಿನದಂದು ಬಸವ ಜಯಂತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಚರಿಸಲಾಯಿತು. ಗುರುಕುಲದ ಸಾಧಕರು, ಸೇವಾ ಸಿಬ್ಬಂದಿಗಳು ಮತ್ತು ಭಕ್ತಾದಿಗಳು ಪಾಲ್ಗೊಂಡಿದ್ದರು (30 ಏಪ್ರಿಲ್ 2025)



ಚಾಮರಾಜನಗರ ಜಿಲ್ಲಾಡಳಿತ ಭವನದ ಆವರಣದಲ್ಲಿ ನಿರ್ಮಿಸಿರುವ ಶ್ರೀ ಬಸವೇಶ್ವರರ ಅಶ್ವಾರೂಢ ಪ್ರತಿಮೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಅನಾವರಣಗೊಳಿಸಿದರು. ಡಾ. ಹೆಚ್.ಸಿ. ಮಹದೇವಪ್ಪ, ಶ್ರೀ ಸಿ. ಪುಟ್ಟರಂಗಶೆಟ್ಟಿ, ಶ್ರೀ ಸುನೀಲ್ ಬೋಸ್ ಮೊದಲಾದವರುಗಳಿದ್ದಾರೆ (25 ಎಪ್ರಿಲ್ 2025)

Registered with the Registrar of Newspapers in India Under No. 50622 / 1986
'Prasada' Monthly, Vol. 40 Issue No. 4, April 2025



ISSN 2583-7648

ಬಿಡಿ ಪ್ರತಿ : ರೂ.10/-

e-mail: prasada@jssonline.org * www.jssonline.org